ಶ್ರೀ

ಕರ್ನಾಟಕದ
...ೀರರತ್ನಗಳು

ಲೇಖಕರು :
...ೀಮರಾವ ಆಲೂರ, ಬಿ. ಎ., ಎಲ್, ಎಲ್, ಬಿ.,
ಧಾರವಾಡ.

ಪ್ರಕಾಶಕರು :
...ವ ಹುಕ್ಕೇರಿ ಎಂ. ಎ., ಕಾರ್ಯದರ್ಶಿ
... ಕರ್ನಾಟಕ ಶಿಕ್ಷಣ ಸಮಿತಿ,
ಧಾರವಾಡ.

೧೯೩೦

ಸಮಿತಿಯಿಂದ ಈವರೆಗೆ ಪ್ರಸಿದ್ಧವಾದ

ಪುಸ್ತಕಗಳು

ಸಂಸ್ಕೃತ ಅರಿಯದವರಿಗೆ ಧರ್ಮದ ಮೂಲತತ್ವಗಳನ್ನರಿಯಲು ಉತ್ತಮಸಂಧಿ.

೧. **ಆರ್ಯಧರ್ಮಪ್ರದೀಪ:**—ಸನಾತನ ಆರ್ಯಧರ್ಮದ ಮೂಲತತ್ವಗಳನ್ನು ಉಪನಿಷತ್, ಸ್ಮೃತಿ, ಪುರಾಣ ಪುಣ್ಯ ಕಥೆಗಳಿಂದ ಉದಾಹರಿಸಿ ಸುಮನೋಹರವೂ ಪ್ರೌಢವೂ ಆದ ಭಾಷಾಶೈಲಿಯಿಂದ ಬರೆದ ಅಪ್ರತಿಮ ಗ್ರಂಥ. ಜಗತ್ತಿನಲ್ಲಿಯ ಮುಖ್ಯಮುಖ್ಯ ಧರ್ಮಗಳ ಮೂಲತತ್ವಗಳನ್ನು ಆಯಾ ಧರ್ಮದವರಿಂದ ಬರೆಯಿಸಿ ತುಲನಾತ್ಮಕ ಅಭ್ಯಾಸಕ್ಕೆ ಅನುಕೂಲವಾಗಲೆಂದು ಕೊನೆಗೆ ಕೊಟ್ಟಿದೆ. ಧಾರ್ಮಿಕ ಶಿಕ್ಷಣಕ್ಕಾಗಿ ಯೋಗ್ಯವಾದ ಪುಸ್ತಕ. ಸುಂದರ ಮುದ್ರಣ ೬೦೦ ಪುಟ. **ಬೆಲೆ ೩—೦—೦**

ಲೇಖಕ:—**ಶ್ರೀ. ಹೊಸಕೆರೆ ಚಿದಂಬರಯ್ಯ**

೨. **ರಾಷ್ಟ್ರಸಭೆಯ** (ಕಾಂಗ್ರೆಸ್) **ಇತಿಹಾಸ:**—ಕಾಂಗ್ರೆಸ್ ಸ್ಥಾಪನೆಯಾದಂದಿನಿಂದ ಈವರೆಗೆ ಅದು ಮಾಡಿದ ಕಾರ್ಯಗಳನ್ನು ಕನ್ನಡಿಗರು ತಿಳಿಯುವಂತೆ ಮಾಡಿದುದು ಇದೇ ಮೊದಲು. ಅನೇಕ ರಾಷ್ಟ್ರವೀರರು ಸ್ವಾತಂತ್ರ್ಯಕ್ಕಾಗಿ ಮಾಡಿದ ಲೋಕಸೇವೆಯ ವರ್ಣನೆಯನ್ನು ಉಜ್ವಲವಾದ ಭಾಷೆಯಲ್ಲಿ ತಿಳಿಸುವ ಅಪೂರ್ವ ಗ್ರಂಥ. ತುಂಬಾ ಚಿತ್ರಗಳಿವೆ. ಮಂಗಳೂರು ಮುದ್ರಣ ೬೦೦ ಪುಟ. ಧುರೀಣರ ಚಿತ್ರಗಳು ೧೦೦. **ಬೆಲೆ ೨—೮—೦**

ಲೇಖಕ:—**ದ. ಕೃ. ಭಾರದ್ವಾಜ,** ವಿದ್ಯಾಭೂಷಣ.

೩. **ಭಾವಗೀತೆ:**—ಅನೇಕ ದಾಸರ ಮತ್ತು ಶರಣರ ಗೀತೆಗಳನ್ನು ಪರಿಶೋಧಿಸಿ ಸಂಕೀರ್ತನ ಪದ್ಧತಿ, ಆರ್ತಭಕ್ತ ಪದ್ಧತಿ, ಸಾ... ಪದ್ಧತಿ, ಉಪದೇಶ ಪದ್ಧತಿಯೆಂಬ ನಾಲ್ಕು ಭಾಗಗಳಲ್ಲಿ ಅಡಕಮಾಡಿ... ಉದ್ದಕ್ಕೆ ಬರೆದಿಲ್ಲ. ಉತ್ತಮ ತರದಿಂದ ಬರೆದಿದೆ. ಮುದ್ದಾದ ಮುದ್ರಣ. ಭಗವದ್ಭಕ್ತರೇ! ಸುಸಂಧಿಯು! ಈ ಗೀತೆಯನ್ನು ಕೊಂಡು ಗಾಯನ ಮಾಡಿ ಮೋದವನ್ನು ಪಡೆಯಿರಿ! **ಬೆಲೆ ೧—೦—೦**

ಆಯ್ಕೆಗಾರ:—**ಶ್ರೀ. ಕೃ. ಶ್ರೀ. ಬೆಟಗೇರಿ** (ಕವಿಭೂಷಣ)

ಕರ್ನಾಟಕದ

ವೀರರತ್ನಗಳು

ಲೇಖಕರು:
ವೆಂಕಟೇಶ ಭೀಮರಾವ ಆಲೂರ, ಬಿ. ಎ., ಎಲ್. ಎಲ್. ಬಿ.
ಧಾರವಾಡ.

ಪ್ರಕಾಶಕರು:
ರಾಮರಾವ ಹುಕ್ಕೇರಿಕರ ಎಂ. ಎ., ಕಾರ್ಯದರ್ಶಿ
ಕರ್ನಾಟಕ ಶಿಕ್ಷಣ ಸಮಿತಿ,
ಧಾರವಾಡ.

Printed at the Universal Power Press, Bangalore City. and Publis
by R. S. Hukkerikar, Secretary Karnatak Shikshna Samiti
at Samiti's Office, Dharwar.

—: ಅನುಕ್ರಮಣಿಕೆ :—

ಶ್ರೀ

ಪ್ರಕಾಶಕರ ಮುನ್ನುಡಿ

" ಕರ್ನಾಟಕ ಶಿಕ್ಷಣ ಸಮಿತಿ " ಎಂಬ ಈ ಸಂಸ್ಥೆಯು ಕನ್ನಡ ನುಡಿಯ ಅಡಿಯಾಳಾಗಿ ಕಾರ್ಯ ಮಾಡಲಾರಂಭಿಸಿ ೯ ವರುಷಗಳಾದುವು. ಆಗಿನಿಂದಲೂ ಪ್ರಸಿದ್ಧ ಲೇಖಕರಿಂದ ಮಹತ್ವದ ವಿಷಯಗಳ ಮೇಲೆ ಅದು ಪುಸ್ತಕಗಳನ್ನು ಬರೆಯಿಸಿ ಕನ್ನಡನುಡಿಗಡಲನ್ನು ಅಭಿವೃದ್ಧಿಗೊಳಿಸುತ್ತಲಿದೆ. ಅವುಗಳೊಳಗಿನ ಅನೇಕ ಪುಸ್ತಕಗಳು ಪಠ್ಯಪುಸ್ತಕಗಳಾಗಿಯೂ ವಾಚನಾಲಯ ಪುಸ್ತಕಗಳಾಗಿಯೂ ಶಾಳಾಧಿಕಾರಿಗಳಿಂದ ಮಾನ್ಯತೆಯನ್ನು ಪಡೆದಿವೆ. ಈಗ ಪುನಃ ಸಮಿತಿಯು **" ಕರ್ನಾಟಕದ ವೀರ ರತ್ನಗಳು "** ಎಂಬೀ ಪುಸ್ತಕವನ್ನು **ಶ್ರೀ ಆಲೂರ ವೆಂಕಟರಾಯ**ರಿಂದ ಬರೆಯಿಸಿ ಪ್ರಕಾಶಗೊಳಿಸಿರುತ್ತದೆ. ಇದರಲ್ಲಿ ಶ್ರೀ ಆಲೂರವರು ಇಪ್ಪತ್ತೊಂದು ಮಂದಿ ಕನ್ನಡ ಕಡುಗಲಿಗಳ ಚರಿತ್ರಗೆಳನ್ನು ಐತಿಹಾಸಿಕ ಕಥೆಗಳ ರೂಪದಲ್ಲಿ ಕೊಟ್ಟಿರುವರು. ಕನ್ನಡ ನುಡಿಯ ವೃದ್ಧಸೇವಕರಾದ ಶ್ರೀ ಆಲೂರವರ ಭಾಷೆ! ಈವರೆಗೆ ಯಾರೂ ಪ್ರಸಿದ್ಧಿಸದಿರುವ ಕನ್ನಡ ವೀರಮಣಿಗಳ ಹೃದಯಂಗಮವಾದ ಚರಿತೆ! ಅಂದಬಳಿಕ ಹೆಚ್ಚಿಗೆ ಹೇಳುವುದೇನು? ಗ್ರಂಥಕರ್ತರು ಇದನ್ನು ಅತ್ಯಂತ ಸ್ಫೂರ್ತಿದಾಯಕವಾದ ವೀರಭಾಷೆಯಲ್ಲಿ ಬರೆದಿರುವುದರಿಂದಲೂ ಚರಿತ್ರೆಗಳು ಬೇಸರವಾಗುವಂತಿರದೆ, ಮನೋರಂಜಕವಾಗಿರುವುದರಿಂದಲೂ ಕರ್ನಾಟಕದ ಅಭಿಮಾನಿಗಳೆಲ್ಲರೂ ವಿಶೇಷತಃ ತರುಣ ವಿದ್ಯಾರ್ಥಿಗಳು ಈಗಿನ ಕಾಲದಲ್ಲಿ ಇದನ್ನು ಓದಿ ಉತ್ಸಾಹಗೊಳ್ಳುವರೆಂದು ನಮಗೆ ವಿಶ್ವಾಸವಿದೆ. **'ಭಾರತೀಯರ ಶ್ರೇಷ್ಠತ್ವ'** ವೆಂಬ ಇನ್ನೊಂದು ಪುಸ್ತಕವು ತುಸು ದಿನಗಳಲ್ಲಿಯೇ ಹೊರಬೀಳುವುದು. ಆ ಪುಸ್ತಕದಲ್ಲಿ ನಮ್ಮ ಭಾರತೀಯರು

ಶಾಸ್ತ್ರ, ಕಲೆ, ಸಂಸ್ಕೃತಿ ಮುಂತಾದ ಪ್ರತಿಯೊಂದರಲ್ಲಿ ಹಿಂದಿನ ಕಾಲಕ್ಕೆ ಹೇಗೆ ಅತ್ಯಂತ ಶ್ರೇಷ್ಠರಿದ್ದರೆಂಬುದನ್ನು ಸಪ್ರಮಾಣವಾಗಿ ತೋರಿಸಿರುತ್ತದೆ.

ಇದೇ ಪ್ರಕಾರಕ್ಕೆ ಕರ್ಣಾಟಕದ ಉನ್ನತಿಗೆ ಅವಶ್ಯವಾದ ಹೊಸ ಹೊಸ ಪುಸ್ತಕಗಳನ್ನು ವಿದ್ವಾಂಸರಾದ ಲೇಖಕರಿಂದ ಬರೆಯಿಸಿ ಪ್ರಕಟಿಸುವುದೇ ಸಮಿತಿಯ ಉದ್ದೇಶವಿರುವುದರಿಂದ ಲೇಖಕರು ಅಂತಹ ಲೇಖನಗಳನ್ನು ಸಮಿತಿಯವರಿಗೆ ಒಪ್ಪಿಸಿದಲ್ಲಿ ಮುದ್ರಿಸಲಾಗುತ್ತದೆ. ಆದ್ದರಿಂದ ಈ ಎಲ್ಲ ಕಾರ್ಯಗಳಿಗೆ ಕನ್ನಡಿಗರೆಲ್ಲರೂ ಆಶ್ರಯವನ್ನಿತ್ತು ಸಮಿತಿಯ ಕೈಯಿಂದ ಹೆಚ್ಚಿನ ಸೇವೆಯನ್ನು ತೆಗೆದುಕೊಳ್ಳಬೇಕೆಂದು ಬೇಡಿಕೊಳ್ಳುತ್ತೇವೆ.

ಧಾರವಾಡ,
೧-೬-೩೦.

ಕಾರ್ಯದರ್ಶಿ
ಹುಕ್ಕೇರಿ ರಾಮರಾಯರು

ಶ್ರೀ

ಪುಸ್ತಕ-ಪ್ರವೇಶ.

ಶ್ರೀ ರಾಮರಾವ ಹುಕ್ಕೇರಿಕರ ಇವರು ಕರ್ನಾಟಕದ ವೀರ ರತ್ನಗಳ ವಿಷಯವಾಗಿ ಪುಸ್ತಕವೊಂದನ್ನು ಬರೆಯಲಿಕ್ಕೆ ನಮಗೆ ಕೇಳಿದ ಕೂಡಲೆ, ಕಾರಣಾಂತರದಿಂದ ಹಿಂದು ಮುಂದಿನ ಯೋಚನೆ ಮಾಡದೆ ಒಪ್ಪಿಕೊಂಡು ಬಿಟ್ಟೆವು. ಸಾವಿರಾರು ವರ್ಷಗಳವರೆಗೆ, ಅತ್ಯಂತ ಅಟ್ಟಹಾಸದಿಂದ ಸಾಮ್ರಾಜ್ಯಗಳನ್ನು ಕಟ್ಟಿ ಆಳಿದ ಕರ್ನಾಟಕದಲ್ಲಿ ಒಂದು ಚಿಕ್ಕ ಪುಸ್ತಕಕ್ಕೆ ವೀರರತ್ನಗಳು ದೊರೆಯಲಾರವೇ - ಎಂದು ನಮ್ಮ ವಿಶ್ವಾಸ. ಆದರೆ. ಪುಸ್ತಕವನ್ನು ಬರೆಯಲು ಪ್ರಾರಂಭಿಸಿದೊಡನೆ, ನಮಗೆ ಕೆಲವು ಅಡಚಣೆಗಳು ಹೊಳೆದುವು. ರತ್ನಗಳ ರಾಶಿಯನ್ನು ಬಾಲಕನೆದುರಿಗೆ ಇಟ್ಟಾಗ, ಆತನು ಆ ರಾಶಿಯೊಳಗಿಂದ ಯಾವುಗಳನ್ನು ಆರಿಸಿಕೊಳ್ಳಬೇಕೆಂಬುದು ತೋಚದೆ ಹೌಹಾರಿ ನಿಲ್ಲುವಂತೆಯೆ ನಮ್ಮ ಅವಸ್ಥೆಯಾಯಿತು. ಏನೋ, ನೂರಾರು ವರ್ಷ ಕಟ್ಟಿದ ಸಾಮ್ರಾಜ್ಯವಾಗಿದ್ದರೆ, ಆ ಅವಧಿಯಲ್ಲಿ ಆಗಿ ಹೋದ ಹತ್ತಿಪ್ಪತ್ತು ವೀರರು ಸಹಜವಾಗಿ ದೊರೆಯುತ್ತಿದ್ದರು. ಇಲ್ಲಿಯೋ, ಸಾವಿರಾರು ವರ್ಷಗಳ ಉಜ್ವಲವಾದ ಇತಿಹಾಸ. ಒಬ್ಬರ್ರಿಗಿಂತ ಒಬ್ಬರು ಮಿಗಿಲಾಗಿರುವ ನೂರಾರು ವೀರರು. ಅವರಲ್ಲಿ ಯಾರನ್ನು ಆರಿಸಬೇಕು, ಯಾರನ್ನು ಬಿಡಬೇಕೆಂಬುದು ನಮಗೆ ತೋಚದೆ ಹೋಯಿತು. ಅಲ್ಲದೆ ಕರ್ನಾಟಕದ ಇತಿಹಾಸವು ದೊಡ್ಡದಿದ್ದಷ್ಟು, ಸಾಧನಸಂಗ್ರಹವು ಚಿಕ್ಕದಾಗಿರುವುದರಿಂದಲೂ, ನಿಯತ ಕಾಲದಲ್ಲಿ ಪುಸ್ತಕವನ್ನು ಮುಗಿಸಬೇಕಾದುದರಿಂದಲೂ, ವೀರತ್ವದ ವಿವಿಧ ಮಾದರಿಗಳನ್ನಾರಿಸಲಿಕ್ಕೆ ಆಸ್ಪದವಾಗಲಿಲ್ಲ. ಕದಂಬ, ಚಾಲುಕ್ಯ, ರಾಷ್ಟ್ರಕೂಟ ಗಂಗ, ಕಲ್ಯಾಣಚಾಲುಕ್ಯ ವಿಜಯನಗರ—ಇವೇ ಮುಂತಾದ ಪ್ರಸಿದ್ಧ ರಾಜಮನೆತನಗಳೊಳಗಿಂದ ಹಲಕೆಲವು ವ್ಯಕ್ತಿಗಳನ್ನಾರಿಸಿ

ಕೊಂಡು ಅವರ ವೀರತ್ವದ ಚರಿತ್ರೆಯನ್ನು ಇದರಲ್ಲಿ ಕೊಟ್ಟಿರುವೆವು. ಅಲ್ಲದೆ, ಒಬ್ಬ ಪಾಳೆಯಗಾರನ ಕುವರಲಕ್ಷ್ಮ, ಕುಮಾರ ರಾಮ ಎಂಬಿಬ್ಬ ತರುಣರ ಮತ್ತು ಅರಸಿಯಾದ ಅಕ್ಕಾದೇವಿ ಸಾಮಾನ್ಯ ವೀರಸ್ತ್ರೀಯಾದ ಓಬವ್ವ ಎಂಬಿಬ್ಬರು ಹೆಂಗಸರ ವೀರತ್ವವನ್ನೂ ವರ್ಣಿಸಿರುವೆವು. ಕೇವಲ ಇತಿಹಾಸವನ್ನು ಬರೆವುದಾಗಲಿ, ಸಂಪೂರ್ಣ ಚರಿತೆಗಳನ್ನು ಬರೆವುದಾಗಲಿ ನಮ್ಮ ಉದ್ದೇಶವಲ್ಲ. ಆದಕಾರಣ, ಈ ವೀರರ ಚರಿತ್ರೆಗಳನ್ನು ಇತಿಹಾಸಕ್ಕೆ ಬಿಡದಂತೆಯೂ ಓದಲಿಕ್ಕೆ ಮನೋರಂಜಕವಾಗುವಂತೆಯೂ ವರ್ಣಿಸಿರುವೆವು. ಅರ್ಥಾತ್, ಆ ಕಾಲಕೆ ವೀರತ್ವವು ಸಾಮಾನ್ಯವಾಗಿ ಪ್ರದರ್ಶಿತವಾಗುವುದು ಯುದ್ಧಗಳಲ್ಲಿ; ಆದುದರಿಂದ, ಈ ಪುಸ್ತಕದಲ್ಲಿ ಯುದ್ಧಗಳ ವರ್ಣನೆಗಳೇ ಬಹಳ. ಈ ಪುಸ್ತಕವು ವಿಶೇಷತಃ ವಿದ್ಯಾರ್ಥಿಗಳ ಸಲುವಾಗಿಯೂ ಸಾಮಾನ್ಯ ಜನತೆಯ ಸಲುವಾಗಿಯೂ ಇರುತ್ತದೆಂಬುದನ್ನು ಲಕ್ಷದಲ್ಲಿ ತಂದು, ಈ ವೀರರ ಚರಿತ್ರೆಗಳನ್ನು ಓದಲಿಕ್ಕೆ ಬೇಸರವಾಗುವಂತೆ ಕೊಡದೆ, ಆದಷ್ಟು ಮಟ್ಟಿಗೆ ರುಚಿಕಟ್ಟಾಗುವಂತೆ ಕೊಟ್ಟಿರುವೆವು.

ಇದಾಯಿತು ವಿಷಯದ ವಿಚಾರ. ಇನ್ನು ಈ ಪುಸ್ತಕದ ಭಾಷೆಯ ಸಂಬಂಧವಾಗಿ ಎರಡು ಮಾತು ಹೇಳುವುದು ಅವಶ್ಯ. ವೀರರ ಸಂಬಂಧದಿಂದ ಬರೆದ ಭಾಷೆಯು ವೀರ್ಯದಿಂದ ತುಂಬಿರಬೇಕು. ಆದರೆ, ನಾವೆಲ್ಲರೂ ನಿರ್ವೀರ್ಯರಾಗಿರುವ ಈಗಿನ ಕಾಲದಲ್ಲಿ ವೀರತ್ವವನ್ನು ತರುವುದೆಲ್ಲಿಂದ? ಅಲ್ಲದೆ, ನಾವು ಕವಿಗಳೂ ಅಲ್ಲ, ಸ್ವಭಾವತಃ ಕ್ಷತ್ರಿಯರೂ ಅಲ್ಲ. ಕನ್ನಡ ವೀರರ ವಿಷಯವಾಗಿ ನಮಗಿರುವ ಅಭಿಮಾನದಿಂದ ಪ್ರೇರಿತರಾಗಿ, ಈ ಪುಸ್ತಕದ ಭಾಷೆಗೆ ಆದಷ್ಟು ಮಟ್ಟಿಗೆ ವೀರತ್ವದ ಬಣ್ಣವನ್ನು ಕೊಡಲು ಮಾತ್ರ ಯತ್ನಿಸಿರುವೆವು. ವೀರಶಾಸನಗಳನ್ನು ಓದುತ್ತಿರುವಾಗ ನಮಗೆ ಕೊನೆಕೊನೆಗೆ ಒಂದು ಹೊಸ ಮಾತು ಹೊಳೆಯಿತು. ಅದೇನೆಂದರೆ, ಆ ವೀರಶಾಸನಗಳಲ್ಲಿಯ ಭಾಷೆಯಲ್ಲಿ ಒಂದು ವಿಲಕ್ಷಣವಾದ ತೇಜವು ತುಂಬಿರುತ್ತದೆಂಬುದು. ಆಗಿನ ಕಾಲದಲ್ಲಿ ಜೀವಂತಜನರು ಜೀವಂತ ಭಾಷೆಯಲ್ಲಿ ಬರೆದ ವೀರಶಾಸನಗಳು ಅವು. ಅಲ್ಲದೆ ಕವಿಗಳು ಕೇವಲ ಕಲ್ಪನಾಬಲ

ಅತ್ಯಂತ ದೋರ್ವಿಕ್ರಮಾಡಂಬರದಿಂದ ಕಾದಿ, ನೇಮೀಖಾನನನ್ನು ಹಿಮ್ಮೆಟ್ಟಿಸಿದನು. ಕಂಪಿಲನೂ ಕುಮಾರ ರಾಮನೂ ತಮ್ಮ ರಾಜಧಾನಿಯಾದ ಹೊಸದುರ್ಗಕ್ಕೆ ಬಂದರು. ನೇಮೀಖಾನನು ದಿಲ್ಲಿಗೆ ಓಡಿಹೋಗಿ, ತನ್ನ ಸೋಲಿನ ಸುದ್ದಿಯನ್ನು ಸುಲ್ತಾನನಿಗೆ ಅರುಹಿದನು. ಸುಲ್ತಾನನು ಅದನ್ನು ಕೇಳಿ ಅಂಗುಷ್ಟದಿಂದ ಮಸ್ತಕದವರೆಗೆ ಬೆಂಕಿಯಾದನು.

ಇಷ್ಟರಲ್ಲಿ, ಹಿಮಋತುವು ಹೋಗಿ ಚೈತ್ರಮಾಸವು ಪ್ರಾರಂಭವಾಗಿತ್ತು. ಆ ಮಾಸದಲ್ಲಿ ಶೂಲಬ್ರಹ್ಮನ ಪೂಜೆಯೆಂಬ ಉತ್ಸವವು ಕಂಪಿಲನ ರಾಜಧಾನಿಯಲ್ಲಿ ನಡೆಯಿತು. ಆ ಉತ್ಸವಕ್ಕೆ ಕಂಪಿಲನು ತನ್ನ ರಾಜ್ಯದೊಳಗಿನ ಯಾವತ್ತು ಬಂಟರನ್ನು ಕರೆಯಿಸಿದ್ದನು. ವೀರರ ಆಟನೋಟಗಳು ನಡೆದಿದ್ದವು. ಕಂಪಿಲನ ಕಿರಿಯ ಹೆಂಡತಿಯಾದ ರತ್ನಾಜಿ ಎಂಬವಳು ತನ್ನ ಅರಮನೆಯೊಳಗೆ ನಿಂತುಕೊಂಡು ಆ ಆಟಗಳನ್ನು ನೋಡುತ್ತಿದ್ದಳು. ಅವಳ ಕಣ್ಣು ಆಟವಾಡುವ ಕುಮಾರರಾಮನ ಮೇಲೆ ಬಿದ್ದಿತು. ಕೂಡಲೆ, ಅವಳು ಆತನಿಗೆ ಮೋಹಿಸಿದಳು. ಹೊತ್ತು ಸಾಧಿಸಿ ಕುಮಾರರಾಮನನ್ನು ಒಲಿಸುವುದನ್ನು ನಿಶ್ಚಯಿಸಿದಳು. ಒಂದು ದಿನ ಕುಮಾರರಾಮನು ಮುತ್ತಿನ ಚಂಡಿನಿಂದ ಆಡುತ್ತಿರಲು, ಆಕಸ್ಮಿಕವಾಗಿ ಆ ಚಂಡು ರತ್ನಾಜಿಯ ಅರಮನೆಯಲ್ಲಿ ಬಿದ್ದಿತು. ರಾಮನು ಅದನ್ನು ತೆಗೆದುಕೊಳ್ಳುವುದಕ್ಕೆ ಆ ಅರಮನೆಯಲ್ಲಿ ಹೊಕ್ಕನು. ರತ್ನಾಜಿಯು ಆ ಸಂಧಿಯನ್ನು ಸಾಧಿಸಿ ತನ್ನ ಕಾಮವನ್ನು ತೃಪ್ತಿಗೊಳಿಸುವುದಕ್ಕೆ ಪರಿಪರಿಯಿಂದ ಬೇಡಿಕೊಂಡಳು. ಶೃಂಗಾರ ಚೇಷ್ಟೆಗಳನ್ನು ಮಾಡಿದಳು. ಆದರೆ, ಪರದಾರಸೋದರನಾದ ಕುಮಾರರಾಮನು ಅವುಗಳಿಗೆ ಮನ ಸೋಲುವನೇ? ಆ ಧೀರನು ಯುಕ್ತಿಯಿಂದ ಅಲ್ಲಿಂದ ಜಾರಿ ಹೊರಗೆ ಹೋದನು. ಕೂಡಲೆ, ರತ್ನಾಜಿಯು ಆತನ ಮೇಲೆ ಕಡುಮುಳಿದು ಸೇಡು ತೀರಿಸಿಕೊಳ್ಳುವುದನ್ನು ಗೊತ್ತುಮಾಡಿದಳು. ಕುಮಾರರಾಮನು ತನ್ನ ಪಾತಿವ್ರತ್ಯವನ್ನು ಭಂಗಪಡಿಸುವುದಕ್ಕೆ ಉದ್ಯುಕ್ತನಾಗಿರುವನೆಂದು ಅವಳ ಗಂಡನ ಮುಂದೆ ದೂರು ಹೇಳಿದಳು. ಕಂಪಿಲನು ಕುಮಾರ ರಾಮನನ್ನು ಕೊಲೆಗಡಕರ ಕೈಗೆ ಕೊಟ್ಟನು. ಮಂತ್ರಿಯಾದ ಬೈಚಪ್ಪನು ಕೊಲೆಗಡಕರಿಂದ ಆತ

ನನ್ನ ಪಾರುಮಾಡಿಕೊಂಡು ಆತನನ್ನೂ ಆತನನ್ನು ನೆರೆನಂಬಿದ್ದ ಆತನ ಸಂಗಡಿಗರನ್ನೂ ಒಂದು ಗವಿಯಲ್ಲಿ ಬಚ್ಚಿಟ್ಟು, ಕುಮಾರ ರಾಮನನ್ನೂ ಆತನ ಹೆಂಡಂದಿರನ್ನೂ ತಾನು ಕೊಲೆಗಡಕರಿಂದ ಕೊಲ್ಲಿಸಿದೆನೆಂದು ಬೈಚಪ್ಪ ಮಂತಿಯು ಅರಸನಿಗೆ ನಿವೇದಿಸಿದನು. ಕುಮಾರ ರಾಮನಾಥನು ಸತ್ತನೆಂಬ ಸುದ್ದಿಯನ್ನು ಸುಲ್ತಾನನು ಕೇಳಿ ಪುನಃ ನೇಮೀಖಾನನನ್ನು ಕಂಪಿಲನನ್ನು ಸೆರೆ ಹಿಡಿದುಕೊಂಡು ಬರುವುದಕ್ಕೆ ಕಳುಹಿಸಿದನು. ಆತನು ಮೂರುಲಕ್ಷ ಒಂಬತ್ತುಸಾವಿರ ಸೈನ್ಯದೊಂದಿಗೆ ದಕ್ಷಿಣಕ್ಕೆ ಹೊರಟನು. ಇದನ್ನು ಕೇಳಿ, ಕಂಪಿಲನು ಕಂಪಿತ ಹೃದಯನಾದನು. ಆಗ, ಆತನಿಗೆ ಶೂರ ಪುತ್ರನಾದ ರಾಮನಾಥನ ನೆನಪು ಆಯಿತು. ಆದರೆ, ರಾಮನಾಥನು ಸತ್ತುಹೋಗಿದ್ದನೆಂದು ಆತನ ತಿಳವಳಿಕೆಯಾಗಿದ್ದರಿಂದ ಆ ನೆನಪು ಶೋಕದಲ್ಲಿಯೇ ಸಮಾಪ್ತವಾಯಿತು. ಕಂಪಿಲನು ಸೈನ್ಯಸನ್ನಾಹವನ್ನು ಮಾಡುವುದಕ್ಕೆ ಬೈಚಪ್ಪ ಮಂತ್ರಿಗೆ ಆಜ್ಞಾಪಿಸಿದನು. ಅಷ್ಟರಲ್ಲಿ ನೇಮೀಖಾನನು ಕೃಷ್ಣಾನದಿಯನ್ನು ದಾಟಿದ್ದನು. ಕಂಪಿಲನು ಗಾಬರಿಗೊಂಡು ಬೈಚಪ್ಪನನ್ನು ಒಳಿತಾಗಿ ಬೈದನು. ಬೈಚಪ್ಪನು ಕಂಪಿಲನಿಗೆ ಧೈರ್ಯವನ್ನು ಕೊಟ್ಟು, ಅದ್ವಿತೀಯ ಶೂರನಾದ ಒಬ್ಬ ಬಂಟನು ಕಂಪಿಲನ ಪರವಾಗಿ ಯುದ್ಧಮಾಡುವನೆಂದು ಹೇಳಿದನು. ಬೈಚಪ್ಪನು ದೊಡ್ಡದೊಂದು ಸೈನ್ಯದೊಂದಿಗೆ ನೇಮೀಖಾನನ ಮೇಲೆ ಸಾಗಿಹೋಗಬೇಕೆಂದು ಕಂಪಿಲನು ಬೈಚಪ್ಪನಿಗೆ ಆಜ್ಞಾಪಿಸಿದನು. ಕುಮ್ಮಟದುರ್ಗದಲ್ಲಿ ಭಯಂಕರ ಕಾಳಗಕ್ಕೆ ಮೊದಲಾಯಿತು. ಕಂಪಿಲನ ಸೈನಿಕರು ಅತ್ಯಂತ ಸಾಹಸದಿಂದ ಕುಮ್ಮಟದುರ್ಗವನ್ನು ಸಂರಕ್ಷಿಸುವುದಕ್ಕೆ ಪ್ರಯತ್ನಪಟ್ಟರು. ರಾಮನಾಥನು ಸತ್ತಿದ್ದರಿಂದ, ಕುಮ್ಮಟದುರ್ಗವನ್ನು ಸಂರಕ್ಷಿಸುವ ಜಿಗುಟುಳ್ಳ ಶೂರರಾರೂ ಇಲ್ಲವೆಂದು ನೇಮೀಖಾನನು ಸ್ವಸ್ಥಚಿತ್ತದಿಂದಿದ್ದನು. ಇತ್ತ ಬೈಚಪ್ಪದಂಡನಾಯಕನು ರಾಮನಾಥನನ್ನೂ ಆತನ ಸಂಗಡಿಗರನ್ನೂ ಗವಿಯಿಂದ ಹೊರಗೆ ತೆಗೆದು ಅವರನ್ನು ಯುದ್ಧಕ್ಕೆ ಸಜ್ಜುಗೊಳಿಸಿದ್ದನು. ತಡೆಯಲ್ಲಿದ್ದ ವೀರರಸಪ್ರವಾಹವು ಧುಮ್ಮಿಕ್ಕಿ ಹರಿಯಿತೆಂಬಂತೆ ಪರಬಲಕೃತಾಂತನಾದ ರಾಮನಾಥನು ಕಾದಿ, ನೇಮೀಖಾನನ ಸೈನಿಕರನ್ನು ವಿಧ್ವಂಸಮಾಡಿ, ಅದ್ವಿತೀಯವಾದ ಶೌರ್ಯವನ್ನು ತೋರಿಸಿದನು.

ರಣರಂಗಶೂದ್ರಕನಾದ ನೇಮೀಖಾನನು ಸಂಪೂರ್ಣವಾಗಿ ಪರಾಜಯ ಹೊಂದಿ ಬೆಂಗೊಟ್ಟೋಡಿದನು. ಹೀಗೆ, ರಾಮನಾಥನು ವಿಜಯಮಾಲೆ ಯನ್ನು ಕೊರಳಿನಲ್ಲಿ ಹಾಕಿಕೊಂಡು ತಂದೆಯ ಸನ್ನಿಧಾನಕ್ಕೆ ಬಂದನು. ತಂದೆಯು ಅತ್ಯಂತ ಆಶ್ಚರ್ಯಚಕಿತನಾದನು. ಬೈಚಪ್ಪನು ಆಗ ನಿಜ ವೃತ್ತಾಂತವನ್ನು ನಿವೇದಿಸಿ, ಕಂಪಿಲನನ್ನು ಆನಂದಗೊಳಿಸಿದನು. ರಾಮ ನಾಥನು ಪ್ರಕಟನಾದ ಸಂಗತಿಯನ್ನು ಕೇಳಿ, ರತ್ನಾಜಿಯು ಆತ್ಮಹತ್ಯ ವನ್ನು ಮಾಡಿಕೊಂಡಳು!

ನೇಮೀಖಾನನು ಪುನಃ ಸೋತುಬಂದುದನ್ನು ಕೇಳಿ ಸುಲ್ತಾನನು ಅತ್ಯಂತ ರೋಷಿತನಾದನು. "ರಾಮನಾಥನನ್ನು ಸರಿಗಟ್ಟುವ ಧೀರರು ನನ್ನ ಸೈನಿಕರಲ್ಲೊಬ್ಬರೂ ಇಲ್ಲವೇ?'' ಎಂದು ಗದ್ದರಿಸಿದನು. ಸುಲ್ತಾ ನನ ದ್ವಾರಪಾಲಿಕೆಯಾದ ಮಾತಂಗಿ ಎಂಬ ಮಾದರವಳೊಬ್ಬಳು ಮುಂದೆ ಬಂದು, ಸುಲ್ತಾನನು ಆಜ್ಞಾಪಿಸಿದರೆ, ತಾನು ರಾಮನಾಥನನ್ನು ಸೋಲಿಸಿ ಬರುವೆನೆಂದು ಹೇಳಿದಳು. ಮೊದಲು ಸುಲ್ತಾನನಿಗೆ ಅವಳ ಮಾತಿನಲ್ಲಿ ನಂಬಿಗೆ ಹುಟ್ಟಲಿಲ್ಲ. ಆದರೆ ಅವಳು ಪರಿಪರಿಯಾಗಿ ಆಶ್ವಾ ಸನ ಕೊಟ್ಟದ್ದರಿಂದ, ಸುಲ್ತಾನನು ದಂಡಿನೊಡನೆ ಅವಳನ್ನು ದಕ್ಷಿಣಕ್ಕೆ ಕಳುಹುವುದಕ್ಕೆ ಒಡಂಬಟ್ಟನು. ಈ ಮಾತಂಗಿಯು ಸುಲ್ತಾನನಿಂದ ವೀಳ್ಯವನ್ನು ಸ್ವೀಕರಿಸಿ ಮಹಾ ಸೇನಾಸಾಗರದೊಡನೆ ಕಂಪಿಲನ ರಾಜ್ಯದ ಮೇಲೆ ದಂಡೆತ್ತಿ ಬಂದಳು. ಅವಳು ನೆಟ್ಟಗೆ ಬಂದು ಕುಮಾರ ರಾಮನು ಇದ್ದ ಕುಮ್ಮಟದುರ್ಗವನ್ನೇ ಮುತ್ತಿದಳು. ಸುಲ್ತಾನನಿಂದ ಓಡಿ ಬಂದ ಬ್ಹಾಹ-ಉದ್ದೀನನನ್ನು ಕುಮಾರರಾಮನು ಸುಲ್ತಾನನ ವಶಕ್ಕೆ ಒಪ್ಪಿಸಬೇಕೆಂದೂ ಸುಲ್ತಾನನ ಮಗಳನ್ನು ಲಗ್ನವಾಗಬೇಕೆಂದೂ ರಾಮ ನಾಥನಿಗೆ ಮಾತಂಗಿಯು ಹೇಳಿಕಳುಹಿದಳು. ಶರಣಾಗತರನ್ನು ಒಪ್ಪಿಸು ವುದು ತನ್ನ ಧರ್ಮವಲ್ಲವೆಂದೂ ಮುಸಲ್ಮಾನರ ಮಗಳನ್ನು ಮದುವೆ ಯಾಗುವಂತಹ ಅಧರ್ಮದ ಕೃತ್ಯವನ್ನು ಮಾಡಲಾರೆನೆಂದೂ ರಾಮನಾಥ ನು ನಿಕ್ಷುಣ್ಣವಾಗಿ ಉತ್ತರ ಕೊಟ್ಟನು. ಆಗ, ಯುದ್ಧಕ್ಕೆ ಪ್ರಾರಂಭ

ವಾಯಿತು. ರಾಮನಾಥನು ಅತ್ಯಂತ ರಭಸದಿಂದ ಕಾದಿ, ಮಾತಂಗಿಯ ಸೈನ್ಯವನ್ನು ಇಬ್ಬದಿಯಾಗಿ ಮಾಡಿ ಒಳಗೆ ಹೊಕ್ಕನು. ಆತನು ಸಿಂಹ ಗರ್ಜನೆಯನ್ನು ಮಾಡಿ, ಶತ್ರುಸೈನ್ಯವನ್ನು ಸುಚ್ಚುನುರಿಯಾಗಿ ಮಾಡಿದನು. ಆದರೆ ಆತನ ದೈವವು ತುಂಬಿ ಬಂದಿತು ಇತ್ತ ಆತನು ಪರಬಳವನ್ನು ಹೊಕ್ಕು, ಅದನ್ನು ಈಡಾಡುವುದರಲ್ಲಿ ತೊಡಗಿರುವಾಗ ಅತ್ತ ಮತ್ತೊಂದು ಭಾಗದಲ್ಲಿ ಮಾತಂಗಿಯ ಸೈನಿಕರು ಕಂದಕಗಳನ್ನು ಹುಗಿದು ಕೋಟೆಯ ಗೋಡೆಗಳನ್ನು ಏರಿ, ಕೋಟೆಯ ಒಳಗೆ ಹೊಕ್ಕಿದ್ದರು. ಕೋಟೆಯ ಒಳಗಿದ್ದವರು ಬಿಸಿಬಿಸಿ ಉಸುಬಿನ ಚೀಲಗಳನ್ನು ಎರಚಿಯೂ ಸುಡುವ ಎಣ್ಣೆಯನ್ನು ನೆತ್ತಿಯ ಮೇಲೆ ಸುರುವಿಯೂ ಶತ್ರುಗಳನ್ನು ಹಿಂದಕ್ಕಟ್ಟುವುದಕ್ಕೆ ವಿಶ್ವಪ್ರಯತ್ನ ಮಾಡಿದರು. ಆದರೆ ಸಾಧ್ಯವಾಗಲಿಲ್ಲ. ರಾಮನಾಥನು ನೆರೆನಂಬಿದ ಹೊಲೆಯರ ಹುಲ್ಲ ಮತ್ತು ಮಾದಿಗರ ಹಂಪ ಮುಂತಾದ ಬಂಟರೆಲ್ಲರೂ ಈ ಕಾಳಗದಲ್ಲಿ ಮಡಿದು ಹೋದರು. ಕೋಟೆಯ ಕೆಳಗಿನ ಊರು ಶತ್ರುಗಳ ಕೈವಶವಾಯಿತು. ಶತ್ರುಗಳು ಊರಿಗೆ ಬೆಂಕಿಯನ್ನು ಹಚ್ಚಿದರು. ಆಗ ಮಾತ್ರ, ರಾಮನಾಥನು ಚಿಂತಾಕ್ರಾಂತನಾದನು. ಆತನು ಕೋಟೆಯ ಒಳಗೆ ಹೋಗಿ ನೋಡುತ್ತಾನೆ! ಅರಮನೆಯ ಹೆಂಗಸರೆಲ್ಲರೂ ದೊಡ್ಡದೊಂದು ಅಗ್ನಿಯನ್ನು ಹೊತ್ತಿಸಿ, ಅದರಲ್ಲಿ ಆಹುತಿಯಾಗುವುದಕ್ಕೆ ಸಿದ್ಧರಾಗಿದ್ದರು! ಒಬ್ಬರನ್ನೊಬ್ಬರು ಆಲಿಂಗನ ಮಾಡಿಕೊಂಡು, ಆತ್ಮಾಹುತಿಯ ಧಾರ್ಮಿಕ ವಿಧಿಗಳನ್ನು ಆನಂದದಿಂದ ನೆರವೇರಿಸುತ್ತಿದ್ದರು! ರಾಮನಾಥನು ಪವಿತ್ರವಾದ ದೇವಾಲಯವನ್ನು ಹೊಕ್ಕು ದೇವಾಧಿದೇವನಾದ ಶಿವನನ್ನು ಪೂಜಿಸಿದನು. ಮರಳಿ ಬಂದು, ರಾಮನಾಥನು ನೆರೆದಿರುವ ಸ್ತ್ರೀಯರಿಗೆ ಅಗ್ನಿಕುಂಡದಲ್ಲಿ ಹಾರಿ ಶೂರತನದಿಂದ ಸತ್ತು ಪಾತಿವ್ರತ್ಯವನ್ನು ರಕ್ಷಿಸಿಕೊಳ್ಳುವುದಕ್ಕೆ ಉದ್ಬೋಧಿಸಿದನು. ಆ ಬಳಿಕ, ಅವರೆಲ್ಲರೂ ಒಬ್ಬೊಬ್ಬರೇ ಅಗ್ನಿಕುಂಡದಲ್ಲಿ ಹಾರಿಕೊಂಡು ಸಂತೋಷದಿಂದ ಪ್ರಾಣವನ್ನು ತೊಲಗಿದರು!! ರಾಮನಾಥನು ಮುತ್ತು ರತ್ನಗಳನ್ನೂ ದ್ರವ್ಯವನ್ನೂ ಮಿಕ್ಕ ಬೆಲೆಯುಳ್ಳ ಪದಾರ್ಥಗಳನ್ನೂ ಕೂಡಿಸಿ, ಬಾಹುಉದ್ದೀನನ ಕಡೆಗೆ ಕಳುಹಿಸಿಕೊಟ್ಟು ತಾನು ಪೂರ್ಣಾಹುತಿಯನ್ನು ಕೊಡುವುದಕ್ಕೆ ಕಂಕಣಬದ್ಧನಾದನು.

ರಾಮನಾಥನೂ ಆತನ ಸಂಗಡಿಗರೂ ಶತ್ರುಗಳ ಸೈನ್ಯವನ್ನು ಒಳನುಗ್ಗಿ, ಇರಿದು ಕಾದಾಡಿ ಕೊನೆಗೆ ಪ್ರಾಣಬಿಟ್ಟರು!! ಮಾತಂಗಿಯು ವಿಜಯ ಹೊಂದಿದಳು, ರಾಮನಾಥನ ರುಂಡವನ್ನು ಸುಲ್ತಾನನ ಕಡೆಗೆ ದಿಲ್ಲಿಗೆ ಕಳುಹಿಸಿದಳು. ರಾಮನಾಥನ ರುಂಡವನ್ನು ನೋಡಿದೊಡನೆಯೆ, ಸುಲ್ತಾನನ ಮಗಳು ಹೌಹಾರಿ ತಾನೂ ಪ್ರಾಣವನ್ನು ತೊಲಗಿದಳು!!

ಈ ರೀತಿಯಾಗಿ, ಪರದಾರಸೋದರನೂ ರಣರಂಗಸಿಂಗನೂ ಆದ ಕುಮಾರರಾಮನು ಅದ್ವಿತೀಯವಾದ ಸಾಹಸವನ್ನೂ ನಿಷ್ಕಲಂಕವಾದ ಶೀಲವನ್ನೂ ಜಗತ್ತಿಗೆ ತೋರ್ಪಡಿಸಿ, ದುರ್ದೈವದಿಂದ ಕುಮ್ಮಟದುರ್ಗದ ಕಾಳಗದಲ್ಲಿ ಕಾಲವಶನಾದನು. ಕುಮ್ಮಟದುರ್ಗದಲ್ಲಿ ಕರ್ನಾಟಕದ ವೀರಸ್ತ್ರೀಯರು ಹೊತ್ತಿಸಿದ ಅಗ್ನಿಕುಂಡದ ಮೂಲಕವೇ ಹುಕ್ಕಬುಕ್ಕರೆಂಬ ಜ್ಯೋತಿಗಳು ಹುಟ್ಟಿದುವು. ಅವರು ವೀರಾವತಾರವನ್ನು ತಾಳಿ, ವಿಜಯನಗರದ ಸಿಂಹಾಸನವನ್ನು ಸ್ಥಾಪಿಸಿದರು.

ಭುಜಬಲಭೀಮನಾದ

ಬುಕ್ಕಭೂಪತಿ

(೧೩೪೩-೧೩೭೯)

ಮುಸಲ್ಮಾನರು ಉತ್ತರ ಹಿಂದುಸ್ಥಾನವನ್ನೆಲ್ಲ ಯವನಮಯವಾಗಿ ಮಾಡಿ ದಕ್ಷಿಣಕ್ಕೆ ಮೋರೆ ತಿರುಗಿದ ಕಾಲ. ದೇವಗಿರಿ, ಒರಂಗಲ್ಲು, ದ್ವಾರ ಸಮುದ್ರ ಮನೆತನಗಳು ಮುಸಲ್ಮಾನರಿಗೆ ತುತ್ತಾದ ಕಾಲ. ಕುಮಾರ ರಾಮನಾಥನು ಆನೆಗೊಂದಿಯ ಹತ್ತಿರ, ಮುಸಲ್ಮಾನರನ್ನು ಅನೇಕ ಸಲ ಹಿಮ್ಮೆಟ್ಟಿಸಿ ಕೊನೆಗೆ ಕುಮ್ಮಟದುರ್ಗದಲ್ಲಿ ಮುಸಲ್ಮಾನರಿಗೆ ಆಹುತಿಯಾದ ಕಾಲ. ಆ ಕಾಲದಲ್ಲಿ ಮುಸಲ್ಮಾನರ ಕ್ರೂರಕೃತ್ಯಗಳ ಕಥೆಗಳನ್ನು ಕೇಳಿ, ಹಿಂದೂ ಜನರ ಹೃದಯಗಳು ತಲ್ಲಣಿಸಿದ್ದವು. ಉತ್ತರ ಹಿಂದುಸ್ಥಾನ ದಲ್ಲಿ, ಯಾವ ಬಲಾಢ್ಯ ಅರಸನಿಂದಲೂ, ಮೇರೆವರಿದು ಬರುವ ಮುಸ ಲ್ಮಾನರ ಹಾವಳಿಯ ಭಯಂಕರ ಪ್ರವಾಹವನ್ನು ತಡೆಯುವುದು ಆಗಿದ್ದಿಲ್ಲ. ಅಲ್ಲದೆ, ಮುಸಲ್ಮಾನ ವೀರರು ದಕ್ಷಿಣ ಪಥದಲ್ಲಿಯೂ ಹೊಕ್ಕು, ಅನೇಕ ಮನೆತನಗಳನ್ನು ಲೀಲೆಯಿಂದ ಮುರಿದು ರಾಮೇಶ್ವರದವರೆಗೆ ಮೆರೆ ದಿದ್ದರು. ಇವೆಲ್ಲ ಕಾರಣಗಳ ಮೂಲಕ, ದಕ್ಷಿಣದೇಶದ ಜನರ ಮನದಲ್ಲಿ ಒಂದು ಬಗೆಯ ಭೀತಿಯು ನೆಲೆಗೊಂಡಿತ್ತು ಆದರೆ, ಅವರ ವೀರತ್ವವು ಮಾತ್ರ ನಷ್ಟವಾಗಿದ್ದಿಲ್ಲ; ಸ್ವಾತಂತ್ರ್ಯಪ್ರೇಮವು ಅಚ್ಚಳಿಯದೆ ಉಳಿ ದಿತ್ತು; ಧರ್ಮಸಂಬಂಧವಾಗಿ ಪ್ರತಿಯೊಬ್ಬರ ಹೃದಯದಲ್ಲಿ ಭಕ್ತಿ ಭಾವವು ಉಕ್ಕುತ್ತಿತ್ತು. ಆದಕಾರಣ ಪರಧರ್ಮೀಯರೂ ಪರಕೀಯರೂ ಆದ ಮುಸಲ್ಮಾನರನ್ನು ಹೇಗಾದರೂ ಮಾಡಿ, ಮುಂದಕ್ಕೆ ಬರಗೊಡ

ಬಾರದೆಂಬ ತೀಕ್ಷ್ಣವಾದ ಭಾವನೆಯು ಮಾತ್ರ ಪ್ರತಿಯೊಬ್ಬ ಹಿಂದುವಿನಲ್ಲಿ ಜಾಗ್ರತವಾಗಿತ್ತು. ಆದರೆ ಪ್ರಯೋಜನವೇನು? ಅವರನ್ನಡ್ಡಗಟ್ಟುವ ಬಗೆ ಯಾವುದೆಂಬುದು ಯಾರಿಗೂ ತೋಚದೆ ಹೋಯಿತು. ಇಂತಹ ಇರುಕಿನ ಸಂದರ್ಭದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳ ಪ್ರೇರಣೆಯಿಂದ ಹುಕ್ಕಬುಕ್ಕರೆಂಬಿಬ್ಬ ಅಣ್ಣತಮ್ಮಂದಿರು ವಿಜಯನಗರದ ರತ್ನಸಿಂಹಾಸನವನ್ನು ಸ್ಥಾಪಿಸಿ, ಭೋರ್ಗರೆದು ಬರುವ ಮುಸಲ್ಮಾನ ಸೇನಾಸಮುದ್ರಕ್ಕೆ ದೊಡ್ಡದೊಂದು ಅಣೆಕಟ್ಟನ್ನು ಕಟ್ಟಿ ಸುಮಾರು ೨೦೦-೨೫೦ ವರುಷಗಳವರೆಗೆ ಹಿಂದೂ ಧರ್ಮವನ್ನೂ ಹಿಂದೂ ಸಂಸ್ಕೃತಿಯನ್ನೂ ಹಿಂದೂ ರಾಜ್ಯವನ್ನೂ ಸಂರಕ್ಷಿಸಿದರು. ಬುಕ್ಕನ ಅಣ್ಣನಾದ ಹರಿಯಪ್ಪ ಅಥವಾ ಹುಕ್ಕನು ಸಾಮ್ರಾಜ್ಯವನ್ನು ಸ್ಥಾಪಿಸಿ ಕೆಲವು ವರ್ಷಗಳಲ್ಲಿಯೇ ತೀರಿಕೊಂಡುದುದರಿಂದ ಸಾಮ್ರಾಜ್ಯವನ್ನು ಸಂವರ್ಧನಗೊಳಿಸುವ ಯಾವತ್ತು ಭಾರವು ಈ ಬುಕ್ಕಭೂಪತಿಯ ಮೇಲೆಯೇ ಬಿದ್ದಿತು. ಆತನು ಆ ಪ್ರಕಾರವಾಗಿ ಸಾಮ್ರಾಜ್ಯವನ್ನು ಬೆಳಿಸಿ ೩೭ ವರ್ಷ ಪರಮ ಸಂಭ್ರಮದಿಂದ ರಾಜ್ಯವಾಳಿ ಮಡಿದನು.

ಭಾಷೆಗೆತಪ್ಪುವರಾಯರಗಂಡನೆಂಬ ಬಿರುದುಳ್ಳ ಈ ಬುಕ್ಕರಾಯನ ಮೊದಲನೆಯ ಮಹತ್ವದ ಕಾರ್ಯವೆಂದರೆ, ಅರ್ಥಾತ್, ವಿಜಯನಗರದ ಅರಸುಮನೆತನವನ್ನು ಸ್ಥಾಪಿಸಿದ್ದು. ಕುಮ್ಮಟ ದುರ್ಗದಲ್ಲಾದ ಕಾಳಗದಲ್ಲಿ, ಕುಮಾರ ರಾಮನೂ ಆತನ ಸರ್ವಸೈನ್ಯವೂ ಶತ್ರುಗಳಿಗೆ ಆಹುತಿಯಾದುದೇನೋ ನಿಜ. ಮುಸಲ್ಮಾನರು ಆ ಕಾಳಗದಲ್ಲಿ ಜಯಹೊಂದಿದರೂ ಅವರಿಂದ ಈ ದೇಶವನ್ನು ಅಂಕಿತದಲ್ಲಿಟ್ಟುಕೊಂಡು, ಆಳುವ ಕೆಲಸವು ಸುಲಭವಾಗಿ ನೀಗುವಂತಿರಲಿಲ್ಲ. ಏಕೆಂದರೆ, ಆಗಿನ ಕಾಲದಲ್ಲಿ, ಜನತೆಯೆಲ್ಲವೂ ಮುಸಲ್ಮಾನರಿಗೆ ವಿರುದ್ಧವಾಗಿತ್ತು. ಜನತೆಯ ಇಚ್ಛೆಗೆ ವಿರುದ್ಧವಾಗಿ ಅದನ್ನು ಯಾವ ಅರಸನು ಆಳಲಾಪನು? ಆದುದರಿಂದ, ಹುಕ್ಕಬುಕ್ಕರು ವಿಜಯನಗರಮನೆತನವನ್ನು ಸ್ಥಾಪಿಸಿದೊಡನೆಯೆ, ಹಿಂದುಗಳೆಲ್ಲರೂ ಅವರ ಸುತ್ತಲು ನೆರೆದರು. ಬುಕ್ಕನ ಅಣ್ಣನಾದ ಹುಕ್ಕನು ಏಳು ವರ್ಷ ಆಳಿ ಸತ್ತ ಕೂಡಲೆ ಬುಕ್ಕರಾಯನು

ಪಟ್ಟವೇರಿದನು. ಆ ಸುಮಾರಕ್ಕೆ, ಪ್ರತಾಪರುದ್ರದೇವನ ಮಗನಾದ ಕೃಷ್ಣನು ಮುಸಲ್ಮಾನರ ಹಾವಳಿಯ ಸಲುವಾಗಿ ವಿಜಯನಗರಕ್ಕೆ ಓಡಿ ಬಂದನು. ವಿಜಯನಗರವು ಹಿಂದೂಧರ್ಮ ಮತ್ತು ರಾಜ್ಯಗಳ ಸಂರಕ್ಷಕರ ಕೇಂದ್ರಸ್ಥಾನವಾಯಿತು. ಹೊಯ್ಸಳ ಬಲ್ಲಾಳರೂ ಬುಕ್ಕನ ನೆರವಿಗೆ ಬಂದರು. ಹಿಂದಕ್ಕೆ ಹಿಂದುಸ್ಥಾನದ ಇತಿಹಾಸದಲ್ಲಿ ಎಂದೆಂದೂ ಕಾಣದ ವಿಲಕ್ಷಣವಾದ ಒಕ್ಕಟ್ಟು ಆಗ ಅಲ್ಲಿ ಕಂಗೊಳಿಸುತ್ತಿತ್ತು. ಹೀಗೆ, ಯಾವತ್ತು ಚಿಕ್ಕ ದೊಡ್ಡ ಹಿಂದೂ ಮನೆತನಗಳು ಒಂದಾಗಿ, ಕುಮ್ಮಟದುರ್ಗದ ಕಾಳಗದ ತರುವಾಯ ಸುಲ್ತಾನನಿಂದ ನೇಮಿಸಲ್ಪಟ್ಟ ಅಧಿನಾಯಕನನ್ನು ಓಡಿಸಿದರು. ಮತ್ತು ದಕ್ಷಿಣದೇಶವನ್ನು ಪಾರತಂತ್ರ್ಯದಿಂದ ಮುಕ್ತಮಾಡಿದರು. ಒಟ್ಟಿಗೆ, ಹಿಂದುಸ್ಥಾನವನ್ನು ಪರಕೀಯರಾದ ಮುಸಲ್ಮಾನರ ಮುಷ್ಟಿಯೊಳಗಿಂದ ಎಲ್ಲಕ್ಕೂ ಮೊದಲು ಪಾರುಮಾಡಿದ ಭೂಪನೆಂದರೆ ಬುಕ್ಕಭೂಪನು. ಆದಕಾರಣ, ಕರ್ನಾಟಕವು ಮಾತ್ರವೇ ಅಲ್ಲ, ಸಕಲ ಹಿಂದುಸ್ಥಾನವು ಆತನಿಗೆ ಅತ್ಯಂತ ಋಣಿಯಾಗಿರುತ್ತದೆ. ಈ ಪ್ರಕಾರವಾಗಿ, ಕೆಲವು ತಿಂಗಳುಗಳಲ್ಲಿಯೇ, ಬುಕ್ಕಭೂಪನು, ಮುಸಲ್ಮಾನರ ಅರಸನಾದ ಮಹಮ್ಮದ್ ತಗಲಖನು ಗೆದ್ದುಕೊಂಡ ನಾಡೆಲ್ಲವನ್ನೂ ಕಸಿದುಕೊಂಡನು. ದೌಲತ್ತಾಬಾದ್ ಅಥವಾ ದೇವಗಿರಿ ಒಂದು ಮಾತ್ರ ಮುಸಲ್ಮಾನರ ವಶದಲ್ಲಿ ಉಳಿಯಿತು.

ಆದರೆ, ದಿಲ್ಲಿ ಸುಲ್ತಾನನ ಅರಸೊತ್ತಿಗೆ ದಕ್ಷಿಣದಲ್ಲಿ ಹೀಗೆ ಮಣ್ಣು ಪಾಲಾಗಿ ಹೋದರೂ ಮುಸಲ್ಮಾನರು ಈ ಮುಂಚೆಯೇ ದಕ್ಷಿಣದಲ್ಲಿ ಬೇರುಬಿಟ್ಟು ನಿಂತಿದ್ದ ಕಾರಣ, ಅವರಲ್ಲಿ ಅಲ್ಲಾವುದ್ದೀನನೆಂಬವನು ಕಲಬುರ್ಗಿಯಲ್ಲಿ ೧೩೪೭ರಲ್ಲಿ ಬಾಮನೀ ರಾಜ್ಯವನ್ನು ಸ್ಥಾಪಿಸಿದ್ದರಿಂದ, ಕೃಷ್ಣಾ ತೀರದ ಕೆಳಗಿನ ಹಿಂದುಸ್ಥಾನವು ಮಾತ್ರ, ವಿಜಯನಗರದವರಿಗೆ ಅಧೀನವಾಗಿ ಉಳಿಯಿತು. ಏಕೆಂದರೆ, ಕೃಷ್ಣೆಯ ಉತ್ತರ ಭಾಗವನ್ನು ಸಂರಕ್ಷಿಸುವುದು ಒರಂಗಲ್ಲ ಅರಸರ ಕರ್ತವ್ಯವಾಗಿತ್ತು. ಆದರೆ, ಆ ಕಾರ್ಯವು ಅವರಿಂದ ಆಗಲಿಲ್ಲ. ಬಾಮನಿ ರಾಜ್ಯದ ಅರಸನಾದ ಮಹಮ್ಮದನು ಒರಂಗಲ್ಲವನ್ನು ಸುಟ್ಟು ಬೂದಿಮಾಡಿ, ಅದರ ಅರಸನಾದ ವಿನಾಯಕ

ದೇವನನ್ನು ಬೆಂಕಿಯಲ್ಲಿ ಹಾರಿಸಿ ಸುಟ್ಟನು! ಹಿಂದೂ ಜನರು ಆತನನ್ನು ಬೆನ್ನಟ್ಟಿ ಓಡಿಸಿದರೇನೋ ಸರಿ. ಆದರೆ, ಅವರ ಜಯವು ಫಲಪ್ರದವಾಗಲಿಲ್ಲ. ಹಿಂದೂಗಳ ಬೆನ್ನುಕಟ್ಟುವವರು ಅಲ್ಲಿ ಆಗ ಯಾರೂ ಇರಲಿಲ್ಲ. ಕೃಷ್ಣಾನದಿಯ ದಕ್ಷಿಣದಲ್ಲಿ ಮಾತ್ರ, ಬುಕ್ಕಭೂಪತಿಯು ಬಾಮನಿ ಅರಸರ ಆಟವನ್ನು ಸಾಗಗೊಡಲಿಲ್ಲ. ಒರಂಗಲ್ಲ ರಾಜ್ಯವು ಹಾಳಾದೊಡನೆಯೆ, ಬಾಮನಿ ಅರಸರಿಗೂ ವಿಜಯನಗರದ ಅರಸರಿಗೂ ಯುದ್ಧವಾಗುವುದು ಅಪರಿಹಾರ್ಯವಾಯಿತು.

ಮಹಮ್ಮದಶಹನು ಒಂದು ದಿವಸ ಸಾರಾಯಿ ಕುಡಿದು ಕುಳಿತುಕೊಂಡಾಗ, ತನ್ನೆದುರಿಗೆ ಗಾಯನವನ್ನು ಮಾಡಿದ ಸಂಗೀತಗಾರರಿಗೆ ವಿಜಯನಗರದ ಅರಸನು ತಾನು ಹೇಳಿದಷ್ಟು ಹಣವನ್ನು ಕೊಡಬೇಕೆಂದು ಆಜ್ಞೆ ಕೊಟ್ಟನು. ಮಹಮ್ಮದನ ಮಂತ್ರಿಗಳು ಆತನು ಸಾರಾಯಿಯನ್ನು ಕುಡಿದ ಗುಂಗಿನಲ್ಲಿ ಈ ರೀತಿಯಾಗಿ ಅವಿವೇಕತನದ ಆಜ್ಞೆಯನ್ನು ಕೊಟ್ಟಿರಬಹುದೆಂದು ತಿಳಿದು, ಆ ಆಜ್ಞಾಪತ್ರವನ್ನು ಬುಕ್ಕರಾಯನ ಕಡೆಗೆ ಕಳುಹಲಿಲ್ಲ. ಆದರೆ, ಮಹಮ್ಮದನು ಅದು ಕಳುಹಿಸಲ್ಪಡಲಿಕ್ಕೇಬೇಕೆಂದು ಹಟಹಿಡಿದನು. ಆ ಮೇರೆಗೆ ದೂತರು ಆ ಆಜ್ಞಾಪತ್ರವನ್ನು ತೆಗೆದುಕೊಂಡು, ಬುಕ್ಕನ ಕಡೆಗೆ ಬಂದರು. ಸ್ವಾತಂತ್ರ್ಯಾಭಿಮಾನಿಯಾದ ಬುಕ್ಕನು ಆ ವಿಲಕ್ಷಣವಾದ ಆಜ್ಞಾಪತ್ರವನ್ನೋದಿ ನಕ್ಕು ಅದನ್ನು ಹರಿದುಹಾಕಿ, ಅದನ್ನು ತಂದ ದೂತರನ್ನು ಕತ್ತೆಯಮೇಲೆ ಕುಳ್ಳಿರಿಸಿ ಮೆರಿಸಿ ಮರಳಿ ಮಹಮ್ಮದನೆಡೆಗೆ ಅಟ್ಟಿಕೊಟ್ಟನು; ಮತ್ತು ದೊಡ್ಡದೊಂದು ಸೈನ್ಯವನ್ನು ಕಲೆಹಾಕಿ, ಬಾಮನಿ ರಾಜ್ಯದೊಳಗಿನ ಪ್ರದೇಶಗಳನ್ನು ಕೊಳ್ಳೆ ಹೊಡೆವುದಕ್ಕೆ ಪ್ರಾರಂಭಿಸಿದನು. ಕೃಷ್ಣಾ ತುಂಗಭದ್ರಾ ನದಿಗಳ ನಡುವಿರುವ ಪ್ರದೇಶವು ಯಾವಾಗಲೂ ಅನೇಕ ಅರಸರ ನಡುವಿನ ವಾದಭೂಮಿಯಾಗಿದೆ. ವಿಜಯನಗರ ರಾಜ್ಯವು ಸ್ಥಾಪನವಾದ ಬಳಿಕ ಕೂಡ ಎರಡು ಶತಮಾನಗಳವರೆಗೆ, ವಿಜಯನಗರದ ಅರಸರಿಗೂ ಬಾಮನಿ ಅರಸರಿಗೂ ಆದ ದೊಡ್ಡ ದೊಡ್ಡ ಕಾಳಗಗಳಿಗೆಲ್ಲ ಈ ವಾದಭೂಮಿಯೇ ಕಾರಣವಾಗಿದೆ. ಇರಲಿ, ಅರಿರಾಯವಿಭಾಡನಾದ ಬುಕ್ಕ

ಭೂಪತಿಯು ತನ್ನ ಪ್ರಬಲವಾದ ಸೈನ್ಯದೊಂದಿಗೆ ಬಂದು ಮುದಗಲ್ಲಿನ ಭದ್ರವಾದ ಕೋಟೆಯನ್ನು ಮುತ್ತಿದನು. ಅಲ್ಲಿ, ಮುಸಲ್ಮಾನರಿಗೂ ಹಿಂದುಗಳಿಗೂ ರೌದ್ರವಾದ ಸಂಗ್ರಾಮವೆಸಗಿತು. ಆಗ ಎಸಗಿದ ಸುರಿಗೆ ಕಾಳಗದಲ್ಲಿ, ಬುಕ್ಕಭೂಪನು ತನ್ನ ಭುಜಾವಷ್ಟಂಬದಿಂದ ಇದಿರಿಸುವ ವೀರರನ್ನು ಮುರಿದು, ತುಳಿದು, ತಿವಿದು, ಇರಿದು, ಕೊಂದು ತನ್ನ ವೀರವನ್ನು ಮೆರೆಯಿಸಿದನು. ಆತನ ಸೈನಿಕರೂ ತಮಗೆ ತಾಗಿ ತಡೆವರನ್ನು ಇರಿದು ಮೆರೆದು ಕಾದಿ ತಮ್ಮ ಮೈಗಲಿತನವನ್ನು ತೋರ್ಪಡಿಸಿದರು. ಮುಸಲ್ಮಾನರೂ ಬಹಳ ಉಬ್ಬಿನಿಂದ ಕಾದಿದರು. ಶತ್ರುಗಳು ಬಳಕುವಂತೆ, ತಮ್ಮ ಕರಾಳಾಸಿಯ ಉಗ್ರಪ್ರತಾಪವನ್ನು ತೋರಿಸಿದರು. ಆದರೆ, ಅವರ ಶೌರ್ಯಶಕ್ತಿಯೆಲ್ಲವೂ ಕೊನೆಗೆ ವ್ಯರ್ಥವಾಯಿತು. ಆ ಭಯಂಕರ ಯುದ್ಧದಲ್ಲಿ, ಬುಕ್ಕಭೂಪನು ಮಾಡಿದ ಹಾವಳಿಯನ್ನು ವರ್ಣಿಸಲಸದಳವಲ್ಲ. ಶತ್ರುಸೈನ್ಯವೆಲ್ಲವೂ ಪೂರಾ ನುಚ್ಚುನುರಿಯಾಗಿ ಹೋಯಿತು. ಆ ಸೈನ್ಯದಲ್ಲಿ ಒಬ್ಬನೇ ಒಬ್ಬನು ಮಾತ್ರವೇ ಪಾರಾಗಿ, ಕಲಬುರ್ಗೆಗೆ ಓಡಿಹೋಗಿ, ಆ ಭಯಂಕರವಾದ ರಣಕಂದನದ ಸುದ್ದಿಯನ್ನು ಸುಲ್ತಾನನಿಗೆ ತಲುಪಿಸಿದನು. ಆಗ, ಸುಲ್ತಾನನು ಅತ್ಯಂತ ಕೋಪಗೊಂಡು, ಅಪರಿಮಿತ ಸೇನಾಸಮೇತವಾಗಿ ಸ್ವತಃ ತಾನೇ ಬಂದು, ಬುಕ್ಕನ ಸೈನ್ಯವನ್ನು ಆದವಾನಿಯವರೆಗೆ ಅಟ್ಟಿದನು. ಆತನು ಅನೇಕ ಹಿಂದೂಗಳನ್ನು ತರಿದು ಸೀಳಿ ಮುದಗಲ್ಲಿನಲ್ಲಾದ ಭಯಂಕರ ಕೊಲೆಯ ಸೇಡನ್ನು ಚೆನ್ನಾಗಿ ತೀರಿಸಿಕೊಂಡನು. ಆದರೆ ಬುಕ್ಕನ ಸೈನ್ಯವು ಅದಕ್ಕೂ ಹಿಂಜರಿಯಲಿಲ್ಲ. ಕವತಾಳ ಎಂಬ ಊರಿನ ಹತ್ತರ, ವೀರಬುಕ್ಕನ ಸೇನೆಯು ಮುಸಲ್ಮಾನರ ಸೈನ್ಯಕ್ಕೆ ಇದಿರಾಗಿ ಸೆಣಸಿ ಕಾದಿತು. ಮುಸಲ್ಮಾನರು ದಿಕ್ಕಾಪಾಲಾಗಿ ಓಡಹೋಗಲಾರಂಭಿಸಿದರು. ಆದರೆ, ಅಷ್ಟರಲ್ಲಿ, ಆಕಸ್ಮಿಕವಾಗಿ ಮದೋನ್ಮತ್ತವಾದ ಒಂದು ಆನೆಯು ಬುಕ್ಕನ ಸೈನ್ಯವನ್ನು ಹೊಕ್ಕು ಹಾವಳಿಯನ್ನು ಮಾಡಿದುದರಿಂದ, ಬುಕ್ಕನ ಸೈನ್ಯವು ಹಿಂದಕ್ಕೆ ಸರಿಯಿತು. ಹಿಂದಿನ ಕಾಲದಲ್ಲಿ, ಆನೆ ಕಾಳಗದಲ್ಲಿ, ಆನೆಯ ಮದವು ಅನೇಕ ಸಲ ಭಯಂಕರವಾದ ಅಪಘಾತಗಳನ್ನುಂಟುಮಾಡಿದೆ. ತಾಳೀಕೋಟೆಯಲ್ಲಿಯೂ ಆನೆಯ ಮದವೇ ವಿಜಯನಗರದ ಪಟ್ಟವನ್ನು ಹಾರಿಸುವುದಕ್ಕೆ

ಕಾರಣವಾಯಿತು. ಇರಲಿ. ಬುಕ್ಕನ ಸೈನ್ಯವು ಹೀಗೆ ಹಿಂದಕ್ಕೆ ಸರಿದ ಸಂಧಿಯನ್ನು ಸಾಧಿಸಿ, ಮಹಮ್ಮದ್‌ಶಹನು ವಿಜಯನಗರವನ್ನು ಸುತ್ತಿ ಒಂದು ತಿಂಗಳದವರೆಗೆ ಅದನ್ನು ಮುತ್ತಿದನು. ಆದರೆ, ವಿಜಯನಗರವು ಅತ್ಯಂತ ಭವ್ಯವಾದ ಮತ್ತು ಬಲವಾದ ಕೋಟೆಯು. ಅದು ಮಹಮ್ಮದನ ಹಿಡಿಸೈನ್ಯಕ್ಕೆ ಜಗ್ಗುವುದೇ? ಕೊನೆಗೆ, ಮಹಮ್ಮದ್‌ಶಹನು ಆ ಕೋಟೆಯನ್ನು ತೆಗೆದುಕೊಳ್ಳುವುದು ಅಸಾಧ್ಯವಾದ ಕಾರ್ಯವೆಂದು ತಿಳಿದು, ಬಂದ ಹಾದಿಯಿಂದ ತಿರುಗಿ ತನ್ನ ರಾಜ್ಯಕ್ಕೆ ಹೊರಟುಹೋದನು. ಆಗಿನ ಹಿಂದೂ ಜನತೆಯು ಈಗಿನಂತೆ ನಿರ್ಜೀವವಾಗಿರಲಿಲ್ಲ. ಆದಕಾರಣ, ಮಹಮ್ಮದ್‌ಶಹನು ವಿಜಯನಗರದಿಂದ ಮರಳಿ ತನ್ನ ರಾಜ್ಯಕ್ಕೆ ಹೋಗುವಾಗ, ಆತನಿಗೆ ಹಿಂದೂಗಳು ಪರಿಪರಿಯಿಂದ ತೊಂದರೆಕೊಟ್ಟರು. ಮತ್ತು ಆತನನ್ನು ಬೆನ್ನಟ್ಟಿ ಕಿರುದೊರೆಯವರೆಗೆ ಎಂದರೆ ತುಂಗಭದ್ರಾ ನದಿಯವರೆಗೆ ಆತನನ್ನು ಓಡಿಸಿದರು. ಅಲ್ಲಿ, ಬುಕ್ಕನಿಗೂ ಮಹಮ್ಮದ್‌ಶಹನಿಗೂ ಪುನಃ ಸಂಗ್ರಾಮವಾಯಿತು. ಅದರೆ, ಕೊನೆಗೆ ಅವರಿಬ್ಬರಲ್ಲಿ ಒಪ್ಪಂದವಾಯಿತು.

ಈ ರೀತಿಯಾಗಿ ಬುಕ್ಕರಾಯನಿಗೂ ಮಹಮ್ಮದ್‌ಶಹನಿಗೂ ಆದ ಅನೇಕ ಕಾಳಗಗಳಿಂದ ಒಂದು ಮಾತು ಅವರಿಬ್ಬರ ನಿದರ್ಶನಕ್ಕೆ ಬಂದಿತು. ಅದಾವುದೆಂಪರೆ, ವಿಜಯನಗರದವರನ್ನು ನಿರ್ಮೂಲಮಾಡುವುದು ತೀರ ಅಸಾಧ್ಯವಾದುದೆಂಬುದನ್ನು ಮುಸಲ್ಮಾನರು ಮನಗಂಡರು. ಅದೇ ಮೇರೆಗೆ, ಮುಸಲ್ಮಾನರು ಬಹಳ ದಿವಸಗಳಿಂದ ದಕ್ಷಿಣದಲ್ಲಿ ಬೇರೂರಿ ನಿಂತಿದುದರಿಂಧ, ಅವರೊಡನೆ ಆದಷ್ಟು ಮಟ್ಟಿಗೆ ಸ್ನೇಹ ಭಾವದಿಂದಲೇ ಇರಬೇಕೆಂದು ಬುಕ್ಕನಿಗೆ ತೋರಿತು. ಆದಕಾರಣ, ಅವರಿಬ್ಬರೂ ಕೊನೆಯವರೆಗೆ ಸ್ನೇಹಭಾವದಿಂದಲೇ ಇದ್ದರು. ಆದರೆ, ಮುಂದೆ ತೀವ್ರವೇ ಮಹಮ್ಮದಶಹನು ಮರಣ ಹೊಂದಿದನು. ಆತನ ಮಗನಾದ ಮುಜಾಹಿದಶಹನು ಬಾಮುನೀ ರಾಜ್ಯಕ್ಕೆ ಅರಸನಾದನು. ಮುಜಾಹಿದನು ಬಹಳ ಶೂರನಾದರೂ ಅತ್ಯಂತ ಸೊಕ್ಕಿನವನು. ತನ್ನ ವೀರಾಡಂಬರವನ್ನು ತೋರಿ

ಸುಪ್ರದಕ್ಕೆ ಆತನು ಹಾತೊರೆದನು. ಪಟ್ಟವೇರುವುದೊಂದೇ ತಡ, ಕೂಡಲೆ, ಆತನು ಬುಕ್ಕರಾಯನಿಗೆ ಪತ್ರಬರೆದು ಕೃಷ್ಣಾ ತುಂಗಭದ್ರಾ ನದಿಗಳ ನಡುವಿನ ಭೂಮಿಯು ಬಾಮನಿ ರಾಜ್ಯದ ಒಡೆತನಕ್ಕೆ ಒಳಗಾದುದೆಂದೂ ಅದನ್ನು ಬುಕ್ಕರಾಯನು ಬಿಟ್ಟುಕೊಡಬೇಕೆಂದೂ ತಿಳುಹಿದನು. (ಆದರೆ, ಇಂತಹ ಪೊಳ್ಳು ಬೆದರಿಕೆಗೆ ಬುಕ್ಕನು ಬಗ್ಗುವನೇ?) ಕೃಷ್ಣಾ ತುಂಗಭದ್ರಾ ನದಿಗಳ ನಡುವಿನ ಭೂಮಿಯು ಆನೆಗೊಂದಿಯವರ ಕಾಲದಿಂದಲೂ ಹಿಂದೂಗಳ ಒಡೆತನಕ್ಕೆ ಒಳಪಟ್ಟ ಭೂಮಿಯಾಗಿರುವುದರಿಂದ, ಅದರ ಮೇಲೆ ಮುಸಲ್ಮಾನರ ಹಕ್ಕು ಲವಲೇಶವಾದರೂ ಇಲ್ಲವೆಂದೂ ತನ್ನ ವಶದಲ್ಲಿದ್ದ ಆ ಭೂಮಿಯನ್ನು ತಾನು ಸರ್ವಥಾ ಬಿಟ್ಟುಕೊಡಲಾರೆನೆಂದೂ ವೀರಬುಕ್ಕರಾಯನು ಆತನಿಗೆ ನಿರ್ದಾಕ್ಷಿಣ್ಯದಿಂದ ಅರುಹಿದನು. ಸ್ವಾಭಿಮಾನದ ಈ ಉತ್ತರವನ್ನು ನೋಡಿ, ಮುಜಾಹಿದನು ನಿರುಪಾಯನಾಗಿ ಯುದ್ಧವನ್ನು ಸಾರಿದನು. ಮತ್ತೆ ಮಹಾ ಆಹವಕ್ಕೆ ಮೊದಲಾಯಿತು. ಬುಕ್ಕಭೂಪತಿಯು ರಿಪುಗಳ ಸೈನ್ಯವನ್ನು ತರಿದಟ್ಟಿ, ತನ್ನ ಕೀರ್ತಿಯನ್ನು ಬೆಳಿಸಿದನು. ಅರಿನೃಪಾಳರೆಂಬ ವೃಷಭಗಳು ಗರಗರನೆ ತಿರುಗುತ್ತಿರಲು, ಅವರ ಸೇನಾಸಮೂಹವೆಂಬ ಚಕ್ರವು ಹೊರಳುತ್ತಿರಲು, ಬುಕ್ಕಭೂಪತಿಯು ತನ್ನ ಉಗ್ರಾಸಿಯಿಂದ ಉಚ್ಚಳಿಸಿ ಧರೆಗುರುಳಿಸುವ ದ್ವೇಷಿಗಳ ಶಿರಗಳು ಕೊಡಗಳಾಗಲು, ಈ ಹೊಸ ತರಹದ ಯಾತದಿಂದ, ಯುದ್ಧ ರಂಗವಾಪಿಯಿಂದ ವೈರಿಗಳ ಕೆನ್ನೀರನ್ನು ಆತನು ತನ್ನ ಯಶೋವಲ್ಲರಿಗೆ ಎತ್ತಿಹಾಕಿ ಅದನ್ನು ಸಂವರ್ಧನಗೊಳಿಸಿದನು. ಮುಸಲ್ಮಾನರಿಗೂ ಹಿಂದೂಗಳಿಗೂ ಅದ ಈ ಭಯಂಕರ ಯುದ್ಧದಲ್ಲಿ, ಹಿಂದೂಗಳು ಬಹಳ ಶೌರ್ಯದಿಂದ ಕಾದಿದರು. ಯುದ್ಧವು ನಡೆದಾಗ, ಒಬ್ಬ ಶೂರ ಹಿಂದುವು ಸುಲ್ತಾನನ ತಲೆಗೆ ಗುರಿಯನ್ನಿಟ್ಟು ಅಂಬನ್ನೆಸೆದನು. ದೈವವಶಾತ್, ಸುಲ್ತಾನನ ಮುಕುಟವು ಅಡ್ಡ ಬಂದು ಆತನ ಜೀವವನ್ನು ಉಳಿಸಿತು. ವಿಜಯನಗರದ ಸೈನ್ಯದ ಅಟೋಪಕ್ಕೆ ಬಲವದರಾತಿಸೇನೆಯು ಕಂಗೆಟ್ಟಿತು, ಅವರ ಹಸ್ತಿಸಂಕುಳವು ಅಳ್ಕಿ ಬಳ್ಕಿತು. ಸುಲ್ತಾನನು ಓಡಿಹೋದನು. ಹಾದಿಯಲ್ಲಿ, ಆತನು ಆದವಾನಿಯ ಕೋಟೆಯನ್ನು ಮುತ್ತಿದನು. ಒಂಭತ್ತು ತಿಂಗಳವರೆಗೆ, ಅಲ್ಲಿ ಆತನು ಮುಸಗಿ ಮುಳಿದು ಮೇಲೆತ್ತಿ ಕಾದಿದರೂ,

ಆ ಕೋಟೆಯು ಆತನ ಕೈವಶವಾಗಲಿಲ್ಲ. ಆಗ, ಮುಜಾಹಿದನು ಹಿಂದೂಗಳನ್ನು ತಡಹುವುದನ್ನು ಬಿಟ್ಟುಕೊಟ್ಟು ತನ್ನ ರಾಜ್ಯವನ್ನು ಸೇರಿದನು.

ಆಗ, ಬಾಮನಿ ರಾಜ್ಯದಲ್ಲಿ ಶಾಂತತೆಯಿರಲಿಲ್ಲ. ಮುಜಾಹಿದನ ಚಿಗಪ್ಪನ ಮಗನಾದ ದಾವುದಖಾನನೆಂಬವನು ಮುಜಾಹಿದಖಾನನ ಡೇರೆಯನ್ನು ತಾನೊಬ್ಬನೇ ಹೊಕ್ಕು, ಆತನನ್ನು ಇರಿದು ಕೊಂದು ಪಟ್ಟವೇರಿದನು. ಬಾಮನೀ ರಾಜ್ಯದಲ್ಲಿ ಆಗ ಇಬ್ಬಣಗಳುಂಟಾದುವು. ಮುಜಾಹಿದನ ಬಣದವರು ದಾವುದಖಾನನ ಅರಸೊತ್ತಿಗೆಯನ್ನು ಒಪ್ಪದೆ, ರಾಜ್ಯದಲ್ಲಿ ಬಂಡಾಯಿಗಳನ್ನೆಬ್ಬಿಸಿದರು. ಹೀಗೆ, ಮುಸಲ್ಮಾನರ ಸ್ಥಿತಿಯು ಆಗ ಬಹಳ ನಿಕೃಷ್ಟವಾಗಿತ್ತು. ಇತ್ತ, ಬುಕ್ಕಭೂಪತಿಯು ತನ್ನ ರಾಜ್ಯದಲ್ಲಿ ಮುಸಲ್ಮಾನರ ಆಟವನ್ನು ಏನೂ ಸಾಗಗೊಡಲಿಲ್ಲ. ಆಗ, ಆತನು, ದಕ್ಷಿಣದಲ್ಲಿ ಅನೇಕ ಹೊಸ ರಾಜ್ಯಗಳನ್ನು ಗೆದ್ದು ತನ್ನ ರಾಜ್ಯವನ್ನು ವಿಸ್ತಾರಗೊಳಿಸಿ ಬಹು ವಿಭವದಿಂದ ರಾಜ್ಯವಾಳಿದನು. ಈ ನೃಪೇಂದ್ರನ ಅರಮನೆಯಲ್ಲಿ ಅಳವಳಿದ ಅರಾತಿಭೂಪತಿಗಳ ಬಳಗವು ಕಾಣಿಕೆಯಾಗಿ ತಂದುಕೊಡುವ ಗಜಗಳ ಮದಧಾರಾಜಲದ ಮತ್ತು ಕುದುರೆಗಳ ಲಾಲಾಜಲದ ಪ್ರವಾಹವು ಅನವರತವಾಗಿ ಹರಿಯುತ್ತಿತ್ತು. ಆತನು, ದಟ್ಟವಾಗಿ ಹೆಣೆದಿರುವ ವೈರಿಗಳೆಂಬ ಬಿದುರುಮೆಳೆಗಳನ್ನು ತರಿದು, ಭೂಭೃದ್ವರ್ಗವನ್ನು ನುಗ್ಗಿ, ತತ್‍ಕ್ಷಣದಲ್ಲಿ ಕಂಟಕಕೋಟಿಯನ್ನು ಕಡಿದು, ಸಮುದ್ರವಲಯಾಂಕಿತವಾದ ಧಾರುಣಿಯನ್ನು ತನ್ನ ದೋರ್ಬಲದಿಂದ ನೇರ್ಪಡಿಸಿ, ಕೀರ್ತಿಶ್ರೀಗೆ ಅದನ್ನು ಕೇಳೀಗೃಹಾಂಗಣವನ್ನಾಗಿ ಮಾಡಿದನು.

ಭೀಮಪರಾಕ್ರಮನಾದ ಬುಕ್ಕರಾಯನು, ಈ ರೀತಿಯಾಗಿ ತನ್ನ ಸ್ವಂತಪರಾಕ್ರಮದಿಂದ, ವಿಜಯನಗರದ ರಾಜ್ಯವನ್ನು ವೃದ್ಧಿಗೊಳಿಸಿ, ಒತ್ತೊತ್ತಿ ಬರುವ ಮುಸಲ್ಮಾನರನ್ನು ಮುಂದಕ್ಕೆ ಬರಗೊಡದೆ, ತಡೆದು ಹಿಡಿದು, ಅವರ ಬಿಂಕವನ್ನು ಬಯಲುಮಾಡಿ, ವೈರಿಕುಲಕಾಲದಂಡನಾಗಿ ಅಟ್ಟಹಾಸದಿಂದ ಆಳಿದನು. ದಕ್ಷಿಣದಲ್ಲಿ, ಯಾವತ್ತು ಹಿಂದೂ ಅರಸರು ಆತನ ಚಕ್ರವರ್ತಿತ್ವವನ್ನು ಒಪ್ಪಿಕೊಂಡರು. ಜಯಜಯಧ್ವನಿಯು ದಶ-

ದಿಕ್ಕುಗಳಲ್ಲಿ ಘೂರ್ಣಿಸಿತು. ಮಲಬಾರ ಸಿಂಹಲ ದ್ವೀಪಗಳ ರಾಯರುಗಳು ಬುಕ್ಕಭೂಪನ ನೆಲೆವೀಡಾದ ವಿಜಯನಗರದಲ್ಲಿ ತಮ್ಮ ರಾಯಭಾರಿಗಳನ್ನಿಟ್ಟಿದ್ದರು. ಹೀಗೆ, ಬುಕ್ಕರಾಯನು ಹಿಂದೂಗಳ ರಾಜ್ಯವನ್ನೂ ಸಂಸ್ಕೃತಿಯನ್ನೂ ಸಾಯುವವರೆಗೆ ಪರಿಪಾಲಿಸಿ ಆ ಬಲಾಢ್ಯರಾದ ಸಾಮ್ರಾಜ್ಯವನ್ನು ತನ್ನ ಮಗನಿಗೆ ಒಪ್ಪಿಸಿ ಸುಖವಾಗಿ ಮರಣಹೊಂದಿದನು.

ಆಹವಧೀರನಾದ

ದೇವರಾಯ

(೧೪೧೯-೧೪೪೪)

ವಿಜಯನಗರದ ಸಾಮ್ರಾಜ್ಯವು ಸ್ಥಾಪಿತವಾಗಿ ೬೦-೭೦ ವರುಷಗಳಾಗಿದ್ದುವು. ಬುಕ್ಕರಾಯನೊಬ್ಬನೇ ಮುವತ್ತೇಳು ವರ್ಷ ಪ್ರತಾಪದಿಂದ ರಾಜ್ಯವಾಳಿ, ವಿಜಯನಗರದ ಸಾಮ್ರಾಜ್ಯವನ್ನು ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳವರೆಗೆ ಹಬ್ಬಿಸಿ, ಅರಿರಾಯ ವಿಭಾಡನೆಂದೂ ಭಾಷೆಗೆ ತಪ್ಪುವ ರಾಯರ ಗಂಡನೆಂದೂ ಹೆಸರುವಾಸಿಯಾಗಿದ್ದನು. ಆತನ ತರುವಾಯ ಆಳಿದ ಎರಡನೆಯ ಹರಿಹರರಾಯನ ಸುಮಾರು ೨೦ ವರ್ಷದ ಆಳಿಕೆಯಲ್ಲಿ ರಾಜ್ಯದಲ್ಲಿ ಶಾಂತತೆಯು ನೆಲಗೊಂಡಿತ್ತು. ಆತನ ತರುವಾಯ ಆಳಿದ ಇಬ್ಬರು ಮೂವರು ಅರಸರ ಕಾಲದಲ್ಲಿ ವಿಜಯನಗರಕ್ಕೆ ಮುಸಲ್ಮಾನರ ಪೆಟ್ಟು ತಗಲಿತು. ಆ ಸುಮಾರಕ್ಕೆ ಈ ಎರಡನೆಯ ದೇವರಾಯನು ವಿಜಯನಗರದ ರತ್ನಸಿಂಹಾಸನವನ್ನೇರಿದನು. ಈತನ ಇಪ್ಪತ್ತೈದು ವರುಷಗಳ ಆಳಿಕೆಯಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ಎಡೆಬಿಡದೆ ಕಾಳಗಗಳು ನಡೆದವು. ಆದರೆ, ಒಟ್ಟಿನ ಮೇಲೆ ವಿಜಯನಗರದ ವೈಭವವು ಹೆಚ್ಚುತ್ತಲೇ ಇತ್ತು. ಈ ದೇವರಾಯನ ಆಳಿಕೆಯು ಹೀಗೆ ಯುದ್ಧಗಳಿಂದ ತುಂಬಿರುವುದಲ್ಲದೆ, ಅನೇಕ ಮನೋರಂಜಕವಾದ ಸಂಗತಿಗಳಿಂದಲೂ ತುಂಬಿದೆ. ಈ ಅವಧಿಯಲ್ಲಿ ಪ್ರತಾಪಿಯಾದ ದೇವರಾಯನು ಜೀವದ ಮೇಲಿನ ಅನೇಕ ಗಂಡಾಂತರಗಳಿಂದ ಪಾರಾದನು. ಹಾಗೆಯೇ ಮುಸಲ್ಮಾನ ಅರಸರೂ ಸರದಾರರೂ ಕೂಡ ಜೀವದ ಮೇಲಿನ ಕುತ್ತುಗಳಿಂದ ಬದುಕಿದರು.

ಬಾಮನೀರಾಜ್ಯದಲ್ಲಿ ಈ ಅವಧಿಯಲ್ಲಿ ವಿಲಕ್ಷಣವಾದ ಕೊಲೆ ಸುಲಿಗೆಗಳು ನಡೆದಿದ್ದವು. ವೀರಬುಕ್ಕಭೂಪತಿಯು ಸಾಯುವ ನಾಲ್ಕಾರು ವರ್ಷ ಮುಂಚೆ ಎಂದರೆ ೧೩೭೫ ರಲ್ಲಿ ಈ ಕೊಲೆ ಸುಲಿಗೆಗಳಿಗೆ ಪ್ರಾರಂಭವಾಯಿತು. ಮುಜಾಹಿದನ ಚಿಗಪ್ಪನಾದ ದಾವುದನು ಒಂದು ರಾತ್ರಿ ಮುಜಾಹಿದನ ಡೇರೆಯನ್ನು ಹೊಕ್ಕು ಕತ್ತಿಯಿಂದ ಆತನನ್ನು ಇರಿದು ಕೊಂದು ತಾನು ಕಲಬುರ್ಗಿಯ ಸುಲ್ತಾನನಾದನು. ಆದರೆ ಸ್ವಲ್ಪ ದಿವಸಗಳಲ್ಲಿ ಆತನು ಮಸೀದಿಯಲ್ಲಿ ನಿಮಾಜು ಮಾಡುತ್ತಿರುವಾಗ ಮುಜಾಹಿದನ ಪಕ್ಷದವನೊಬ್ಬನಿಂದ ಕೊಲ್ಲಲ್ಪಟ್ಟನು. ಮತ್ತು ಮುಜಾಹಿದನ ತಂಗಿಯು ದಾವುದನ ಮಗನ ಕಣ್ಣುಗಳನ್ನು ಕೀಳಿಸಿದಳು. ಆಗ ಮಹಮ್ಮೂದನೆಂಬವನು ಬಾಮನೀರಾಜ್ಯಕ್ಕೆ ಸುಲ್ತಾನನಾದನು. ಆತನ ೨೦ ವರುಷಗಳ ಆಳಿಕೆಯೆಂದರೆ ಬಹುಶಃ ವಿಜಯನಗರದ ೨ ನೆಯ ಹರಿಹರರಾಯನ ಆಳಿಕೆಗೆ ಸಮವಾದುದು. ಇವರಿಬ್ಬರ ಅರಸೊತ್ತಿಗೆಯಲ್ಲಿ ಇವೆರಡೂ ರಾಜ್ಯಗಳಲ್ಲಿ ಚೆನ್ನಾಗಿ ಶಾಂತತೆಯು ನೆಲಗೊಂಡಿತ್ತು. ಅವರಿಬ್ಬರು ತೀರಿದೊಡನೆ ಅವೆರಡೂ ರಾಜ್ಯಗಳಲ್ಲಿ ಪುನಃ ಗೊಂದಲವು ಪ್ರಾರಂಭವಾಯಿತು. ವಿಶೇಷತಃ ಬಾಮನಿರಾಜ್ಯವು ಮತ್ತೆ ಕೊಲೆಗಳ ಆಗರವಾಯಿತು. ಮಹಮ್ಮೂದನ ತರುವಾಯ ಆತನ ಮಗನಾದ ಗ್ಯಾಸುದ್ದೀನನೆಂಬ ಹದಿನೇಳು ವರುಷದ ಹುಡುಗನು ಪಟ್ಟವೇರಿದನು. ಆದರೆ, ಒಬ್ಬ ಗುಲಾಮನು ಮೋಸದಿಂದ ಆತನ ಕಣ್ಣುಗಳನ್ನು ಕಳೆದುಬಿಟ್ಟನು. ಆಗ ಆತನ ತಮ್ಮನಾದ ಶ್ಯಾಮಸುದ್ದೀನನೆಂಬುವನು ಸುಲ್ತಾನನಾದನು. ಆದರೆ, ಆತನ ಚಿಗಪ್ಪನ ಮಗನಾದ ಫಿರೂಝುನೆಂಬವನು ಶ್ಯಾಮಸುದ್ದೀನನ ಕಣ್ಣುಗಳನ್ನು ಕೀಳಿಸಿ ತಾನು ಕಲಬುರ್ಗಿಯಲ್ಲಿ ಸುಲ್ತಾನನಾದನು. ಫಿರೂಝುನು ಪಟ್ಟಕ್ಕೆ ಬಂದಾಗ ವಿಜಯನಗರದ ಅರಸರು ದುರ್ಬಲರಿದ್ದುದರಿಂದ, ಆತನ ಕಾಲದಲ್ಲಿ ಬಾಮನಿರಾಜ್ಯವು ಪ್ರಬಲವಾಯಿತು. ವಿಜಯನಗರವು ಬಲಗುಂದಿತು.

ಆದರೆ ಈ ಪ್ರತಾಪ ದೇವರಾಯನು ೧೪೧೯ ರಲ್ಲಿ ಪಟ್ಟವೇರಿದೊಡನೆ ಪುನಃ ಯುದ್ಧಕ್ಕೆ ಕಳೆಕಟ್ಟಿತು. ಇನ್ನೂ ಫಿರೂಝುನು ಆಗ ಜೀವದಿಂದಿದ್ದನು. ದೇವರಾಯನು ಪಟ್ಟವೇರಿದ್ದೊಂದೇ ತಡ, ಮುಸಲ್ಮಾನರೊಡನೆ

ಯುದ್ಧಮಾಡುವ ಸಿದ್ಧತೆಯನ್ನು ಮಾಡತೊಡಗಿದನು. ಏಕೆಂದರೆ, ಫಿರೂಝನು ಕಾಲು ಕೆದರಿ ಜಗಳ ತೆಗೆವುದರಲ್ಲಿ ನಿಪುಣನು. ಆತನು ವರಂಗಲ್ಲ ಪಾನಂಗಲ್ಲ ಕೋಟೆಗಳನ್ನು ಕೈವಶಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದನು ಈ ಪ್ರಯತ್ನಗಳು ವಿಫಲವಾದವು. ಅಷ್ಟರಲ್ಲಿ ದೇವರಾಯನು ಮಹಾಸೈನ್ಯದೊಂದಿಗೆ ಯುದ್ಧಕ್ಕೆ ಹೊರಟನು. ಆತನು ಆಗ ಇನ್ನೂ ಚಿಕ್ಕವನು. ಆದರೂ ಮುಸಲ್ಮಾನರ ವಿಷಯವಾಗಿ ಆತನ ಮನದಲ್ಲಿ ದ್ವೇಷವು ಕಳಕಳನೆ ಕುದಿಯುತ್ತಿತ್ತು. ಮುಸಲ್ಮಾನರ ಅನನ್ವಿತ ಕೃತ್ಯಗಳಿಗೆ ಹಿಂದೂಗಳು ಬೇಸರಗೊಂಡಿದ್ದರು. ಆದಕಾರಣ, ಅವರು ಮುಸಲ್ಮಾನರನ್ನು ಮುರಿಬಡಿದು ಯಾವಾಗ ಸೇಡು ತೀರಿಸಿಕೊಳ್ಳುವೆವೋ ಎಂದು ಒಂದೇಸಮನೆ ಹಾತೊರೆಯುತ್ತಿದ್ದರು. ದೇವರಾಯನ ಸೈನ್ಯಕ್ಕೂ ಫಿರೂಝನ ಸೈನ್ಯಕ್ಕೂ ಉಗ್ರವಾದ ಕಾಳಗವೆಸಗಿತು. ಧೈರ್ಯಮೇರುವಾದ ದೇವರಾಯನ ಸೈನಿಕನೊಬ್ಬನು ಮುಸಲ್ಮಾನ ಸೇನಾಪತಿಯ ತಲೆಯಮೇಲೆ ರಭಸದಿಂದ ಖಡ್ಗ ಪ್ರಹಾರವನ್ನು ಮಾಡಿದನು. ಕೂಡಲೆ ಆ ಸೇನಾಪತಿಯು ಯಮಲೋಕವನ್ನು ಕಂಡನು. ಸುಲ್ತಾನನೂ ದೇವರಾಯನ ಹೊಡೆತಕ್ಕೆ ತುತ್ತಾಗತಕ್ಕವನೇ ಆದರೆ, ಆತನು ಅತ್ಯಂತ ಸಾಹಸದಿಂದ ಪಾರಾಗಿ ಓಡಿಹೋದನು. ಆಗ ಕೇಳುವುದೇನು? ಹಿಂದೂಗಳಿಗೆ ಹಬ್ಬವಾದಂತಾಯಿತು. ಬಹಳ ದಿವಸಗಳಿಂದ ಹೃದಯದಲ್ಲಿ ಹುದುಗಿಗೊಂಡು ಕುಳಿತಿದ್ದ ಅವರ ಕೋಪಾಗ್ನಿಗೆ ಚಂಡಮಾರುತನು ಸೋಂಕಿದಂತಾಯಿತು. ಆ ರಣಮಂಡಳದಲ್ಲಿ ಹಿಂದೂಗಳು ಮುಸಲ್ಮಾನರನ್ನು ತುಂಡುತುಂಡಾಗಿ ಕಡಿದು ಚೆಲ್ಲಾಡಿ ಚೆಂಡಾಟವಾಡಿದರು; ಆ ರಣಾಂಗಣದಲ್ಲಿ ಮುಸಲ್ಮಾನರ ರುಂಡಗಳದೊಂದು ದೊಡ್ಡ ಅಟ್ಟಣಿಗೆಯನ್ನೇ ಕಟ್ಟಿದರು. ಹಿಂದುಗಳು ಸುಲ್ತಾನನ್ನು ಬೆಂಕೊಂಡು, ಆತನ ಸೀಮೆಗಳನ್ನು ಕೈಕೊಂಡು, ನಿಜದೋರ್ದಂಡದಿಂದ ಅನೇಕ ವೀರರನ್ನು ಉಚ್ಚಾಟನೆಗೈದರು. ಅನೇಕ ಮಸೀದಿಗಳನ್ನು ನೆಲಸಮಮಾಡಿ, ಮುಯ್ಯ ತೀರಿಸಿಕೊಂಡರು. ಮುಪ್ಪಿನ ಕಾಲದಲ್ಲಿ ತನಗುಂಟಾದ ಈ ಭಯಂಕರವಾದ ಅಪಜಯದ ಮೂಲಕ, ಫಿರೂಝಶಹನು ಹೊಟ್ಟೆಬೇನೆ ಹಚ್ಚಿಕೊಂಡು ಕೊರಗಿ ಕೊರಗಿ ಸತ್ತನು.

ಫಿರೂಝುಶಹನ ತರುವಾಯ ಆತನ ತಮ್ಮನಾದ ಅಹಮ್ಮದ್‌ಶಹನು ಸುಲ್ತಾನನಾದನು. ಒಡನೆ ಆತನೂ ವಿಜಯನಗರದವರೊಡನೆ ಕಲಹಕ್ಕೆ ನಿಂತನು. ಆತನೂ ಶೂರನು ಮಹತ್ವಾಕಾಂಕ್ಷಿಯು. ಮಹಾಸೈನ್ಯದೊಂದಿಗೆ ತುಂಗಭದ್ರಾತೀರಕ್ಕೆ ಬಂದನು. ವಿಜಯನಗರದವರು ಮುಸಲ್ಮಾನರೊಡನೆ ಯುದ್ಧಮಾಡಿದಂತೆ, ವರಂಗಲ್ಲದ ಹಿಂದೂ ಅರಸರು ದೇಶಾಭಿಮಾನದಿಂದಲೂ ಧರ್ಮಾಭಿಮಾನದಿಂದಲೂ ಕಾದಿದ್ದರೆ, ದಕ್ಷಿಣ ಹಿಂದುಸ್ಥಾನವೆಲ್ಲವೂ ಮುಸಲ್ಮಾನರಿಂದ ಬಿಡುಗಡೆ ಹೊಂದಬಹುದಾಗಿತ್ತು. ಆದರೆ, ದುರ್ದೈವದಿಂದ ವರಂಗಲ್ಲದ ಅರಸರು ಪ್ರತಾಪರುದ್ರದೇವನ ತರುವಾಯ ನಿರ್ವೀರ್ಯರಾಗಿದ್ದರು. ಇಷ್ಟೇ ಅಲ್ಲ ಅವರು ವಿಜಯನಗರದವರನ್ನು ವಂಚಿಸಿ ಶತ್ರುಗಳನ್ನು ಕೂಡಿಕೊಂಡರು. ದೇವರಾಯನು ವರಂಗಲ್ಲದವರನ್ನು ಅವಲಂಬಿಸಿದ್ದನು. ಅವರು ತಮ್ಮ ಸೈನ್ಯವನ್ನು ತೆಗೆದುಕೊಂಡು ದೇವರಾಯನಿಗೆ ಸಹಾಯಮಾಡುವ ನೆವದಿಂದ ತುಂಗಭದ್ರಾತೀರಕ್ಕೆ ಬಂದು ತಂಗಿದ್ದರು. ಆದರೆ ಯುದ್ಧವು ಪ್ರಾರಂಭವಾದೊಡನೆಯೆ ದೇವರಾಯನನ್ನು ತೊರೆದು ಶತ್ರುಗಳನ್ನು ಕೂಡಿಕೊಂಡರು. ಹೀಗೆ, ಹಿಂದುಗಳೇ ಆಕಸ್ಮಿಕವಾಗಿ ಮೋಸಮಾಡಿದ್ದರಿಂದ ದೇವರಾಯನು ಬಹಳ ಪೇಚಿನಲ್ಲಿ ಸಿಕ್ಕನು. ವರಂಗಲ್ಲದವರ ಮೋಸದಿಂದ ಒಳನುಗ್ಗಿದ ಮುಸಲ್ಮಾನ ಸೈನಿಕರು, ದೇವರಾಯನು ಸ್ವಸ್ಥಚಿತ್ತದಿಂದ ಮಲಗಿಕೊಂಡಿರುವ ತೋಟವನ್ನು ಹೊಕ್ಕರು. ದೇವರಾಯನು ಅಡಬಡಿಸಿ ಎದ್ದು ಒಂದು ಕಬ್ಬಿನ ತೋಟವನ್ನು ಸೇರಿದನು. ಮುಸಲ್ಮಾನ ಸೈನಿಕರು ಆತನನ್ನು ಹಿಡಿದರು! ಆತನು ಅರಸನೆಂದು ಅವರು ಗುರುತಿಸಲಿಲ್ಲ. ಆತನು ಯಾವನೋ ಒಬ್ಬ ಸಾಮಾನ್ಯ ಮನುಷ್ಯನಿರಬಹುದೆಂದು ತಿಳಿದು, ಕೆಲವು ಕಬ್ಬಿನ ದಂಟುಗಳನ್ನು ಮುರಿದು ಆತನ ತಲೆಯಮೇಲೆ ಹೊರಿಸಿ ನಡೆಯಿಸಿದರು! ಹೀಗೆ ಅಖಂಡ ಕರ್ನಾಟಕ ಸಾಮ್ರಾಜ್ಯವನ್ನು ಹೊತ್ತ ದೇವರಾಯನ ತಲೆಯು ದೈವದುರ್ವಿಪಾಕದಿಂದ ಕಬ್ಬಿನ ಗಣಿಕೆಗಳ ಹೊರೆಯನ್ನು ಹೊತ್ತಿತು! ಅಷ್ಟರಲ್ಲಿ ಸುಲ್ತಾನನ ಸೈನಿಕರು ಹಿಂದುಗಳನ್ನು ಸೋಲಿಸಿ ಸುಲಿಗೆಯನ್ನು ನಡೆಯಿಸಿದ್ದರು. ಅದನ್ನು ಕೇಳಿ, ಈ ಸೊಟ್ಟ ಕಬ್ಬಿನ ಸುಲಿಗೆಗಿಂತ ಹೆಚ್ಚಿನ ಸುಲಿಗೆ ದೊರೆವು

ದೆಂದು ಆಶಿಸಪಟ್ಟು, ದೇವರಾಯನನ್ನು ಅಲ್ಲಿಯೇ ಬಿಟ್ಟುಕೊಟ್ಟು ಎರಡನೆಯ ಕಡೆಗೆ ತೆರಳಿದರು. ಕೂಡಲೆ, ದೇವರಾಯನು ಕಬ್ಬಿನ ಹೊರೆಯನ್ನು ಚಲ್ಲಿಕೊಟ್ಟು ತನ್ನ ಸೈನಿಕರನ್ನು ಕೂಡಿಕೊಂಡನು. ಆಗ ಅವರಿಗಾದ ಆನಂದವನ್ನು ಬಣ್ಣಿಸಲಳವಲ್ಲ. ತಮ್ಮ ಮಹಾರಾಜನು ಹೀಗೆ ಜೀವದಮೇಲಿನ ಕುತ್ತಿನೊಳಗಿಂದ ಪಾರಾಗಿ ಬಂದೊಡನೆ ಅವರ ಮೈಯಲ್ಲಿ ಹೊಸ ವೀರಾವೇಶವು ತುಂಬಿ ಅವರು ಇಮ್ಮಡಿ ಹುರುಪಿನಿಂದ ಕಡಂಗಿ ಕಾದಿದರು. ಆದರೆ ದೇವರಾಯನು ತನಗುಂಟಾದ ಆಪತ್ತಿಯನ್ನು ಅಪಶಕುನವೆಂದು ಭಾವಿಸಿ, ಯುದ್ಧ ಮಾಡದೆ ವಿಜಯನಗರಕ್ಕೆ ಮರಳಿದನು. ಆಗ, ಅಹಮ್ಮೂದನಿಗೆ ಆನಂದವಾಯಿತು. ಆತನ ಸೈನಿಕರು ಹಿಂದುಗಳನ್ನು ಸಿಕ್ಕ ಸಿಕ್ಕಲ್ಲಿ ಕೊಚ್ಚಿ ಚಲ್ಲಿದರು, ಮೂರ್ತಿಗಳನ್ನು ಒಡೆದರು, ದೇಶವನ್ನು ಸೂರೆಗೊಂಡರು. ಹಿಂದುಗಳಿಗೆ ಉಂಟಾದ ಅಸಹ್ಯವಾದ ತಾಪವನ್ನು ತಾಳಲಾರದೆ, ಐದುಸಾವಿರ ಶೂರ ಹಿಂದುಗಳು ಸುಲ್ತಾನನ ತಲೆಯನ್ನು ಕಡಿದು ತರುವ ಘೋರ ಪ್ರತಿಜ್ಞೆಯನ್ನು ಮಾಡಿ ಹೊರಟರು. ಗುಪ್ತಚಾರರೂ ಸುಲ್ತಾನನ ಸಂಚಾರದ ಮೇಲೆ ಕಣ್ಣಿಟ್ಟರು. ಸುಲ್ತಾನನು ಒಮ್ಮೆ ಬೇಟೆಯಾಡುವುದಕ್ಕೆ ಸ್ವಲ್ಪ ಜನರನ್ನು ಕರೆದುಕೊಂಡು ಅಡವಿಯಲ್ಲಿ ದೂರ ಹೋಗಿದ್ದ ಸಂಧಿಯನ್ನು ಸಾಧಿಸಿ, ಗಿಡಗನಂತೆ ಆತನ ಮೇಲೆ ದೊಪ್ಪನೆ ಬಿದ್ದರು. ಸುಲ್ತಾನನು ಕೈಯಲ್ಲಿ ಜೀವಹಿಡಿದುಕೊಂಡು ಓಡಿದನು. ಆದರೆ ದೈವ ಬಲವು ಆತನಿಗೆ ಅನುಕೂಲವಿತ್ತು. ಅಷ್ಟರಲ್ಲಿ ಆಕಸ್ಮಿಕವಾಗಿ, ಕೆಲವು ಬಿಲ್ಲಾಳುಗಳು ಹಿಂದಿನಿಂದ ಬಂದು ಹಿಂದುಗಳನ್ನು ಕವಿದರು. ಹಿಂದುಗಳು ಕತ್ತರಿಯಲ್ಲಿ ಸಿಕ್ಕು ಕೊನೆಯವರೆಗೆ ತಲೆಕಾದಿ ಸತ್ತರು. ಹೀಗೆ ಈ ಯುದ್ಧಗಳಲ್ಲಿ ಇಬ್ಬರು ಚಕ್ರವರ್ತಿಗಳಯು ಗಂಡಾಂತರದೊಳಗೆ ಸಿಕ್ಕುವುದು ಆ ಇಬ್ಬರು ಚಕ್ರವರ್ತಿಗಳು ಆಕಸ್ಮಿಕವಾಗಿ ಪಾರಾಗುವುದು ವಿಚಿತ್ರವಾದ ದೈವ ಲೀಲೆಯಲ್ಲವೆ? ಇರಲಿ, ಅನಂತರ ದೇವರಾಯನಿಗೂ ಅಹಮ್ಮದನಿಗೂ ಒಪ್ಪಂದವಾಗಿ ಇಬ್ಬರೂ ವೈಭವದಿಂದ ರಾಜ್ಯವಾಳಿದರು. ಹಿಂದುಗಳಿಗೆ ಮೋಸಮಾಡಿದ ವರಂಗಲ್ಲದವರಿಗೆ ಮಾತ್ರ ತಕ್ಕ ಪ್ರಾಯಶ್ಚಿತ್ತವು ದೊರೆಯಿತು. ಅಹಮ್ಮೂದನು

ಈ ಯುದ್ಧ ಮುಗಿದೊಡನೆ ವರಂಗಲ್ಲಿಗೆ ಒತ್ತಿ ಹೋಗಿ ಅದನ್ನು ಪೂರ್ಣ ವಾಗಿ ನುಂಗಿ ನೀರು ಕುಡಿದನು. ಅಂದಿನಿಂದ ವರಂಗಲ್ಲ ರಾಜ್ಯವು ಇತಿ ಹಾಸದಿಂದ ಪೂರಾ ನಾಮಶೇಷವಾಗಿ ಹೋಯಿತು.

ಅಹಮ್ಮದಶಹನ ತರುವಾಯ ೧೪೩೫ ರಲ್ಲಿ ಅಲ್ಲಾವುದ್ದೀನನೆಂಬ ವನು ಬಾಮಿನಿರಾಜ್ಯಕ್ಕೆ ಸುಲ್ತಾನನಾದನು. ಶೀಘ್ರವೇ ತನ್ನ ತಮ್ಮ ನನ್ನು ದೇವರಾಯನೊಡನೆ ಯುದ್ಧಮಾಡುವುದಕ್ಕೆ ಕಳುಹಿಸಿದನು. ದೇವ ರಾಯನು ಆ ತಮ್ಮನನ್ನು ತನ್ನ ಕಡೆಗೆ ಒಡೆದುಕೊಂಡನು. ತಮ್ಮನು ಅಲ್ಲಾವುದ್ದೀನನ ಮೇಲೆಯೇ ತಿರುಗಿಬಿದ್ದನು. ಆದರೆ, ಮುಂದೆ ಅಣ್ಣ ತಮ್ಮಂದಿರಿಬ್ಬರೂ ಪುನಃ ಕೂಡಿಕೊಂಡರು. ದೇವರಾಯನು ತನ್ನ ಸೈನ್ಯ ದಲ್ಲಿ ಮುಸಲ್ಮಾನರನ್ನಿಟ್ಟುಕೊಂಡು ತನ್ನ ಸೈನಿಕರಿಗೆ ಅವರಿಂದ ಲಷ್ಕರ ಶಿಕ್ಷಣವನ್ನು ಕೊಡಿಸುವ ಕ್ರಮವನ್ನು ಪ್ರಾರಂಭಮಾಡಿದನು. ಈ ರೀತಿ ಯಾಗಿ ದೇವರಾಯನು ತನ್ನ ಆಯುಷ್ಯದಲ್ಲೆಲ್ಲ ವೀರತನದಿಂದ ಕಾದಿ, ಮುಸಲ್ಮಾನರ ವರ್ಚಸ್ಸವನ್ನು ಬೆಳಿಸಗೊಡದೆ ಇರುವಾಗ, ಆತನ ಅರಮನೆ ಯಲ್ಲಿ ಒಂದು ಭಯಂಕರವಾದ ಮೋಸವು ಸಂಭವಿಸಿತು! ಆತನ ತಮ್ಮನೆ ಈ ಮೋಸಗಾರನು. ಆತನ ಮನದಲ್ಲಿ ತಾನು ಅರಸನಾಗಬೇಕೆಂಬ ಕೆಟ್ಟ ಬುದ್ಧಿ ಹುಟ್ಟಿತು. ಆ ತಮ್ಮನು ಶೂರನೂ ಅಲ್ಲ, ಲೋಕಪ್ರಿಯನೂ ಅಲ್ಲ; ಪರಮ ನೀಚನು, ಕ್ರೂರನು, ವಂಚಕನು, ನಿಷ್ಕರುಣಿಯು. ಆತನು ತನ್ನ ಅಣ್ಣನಾದ ದೇವರಾಯನನ್ನೂ ಸಾಮ್ರಾಜ್ಯದೊಳಗಿನ ಯಾವತ್ತು ಪ್ರಮುಖರನ್ನೂ ಕೊಲ್ಲುವುದಕ್ಕೆ ದೊಡ್ಡದೊಂದು ಒಳಸಂಚು ಮಾಡಿದನು. ಆ ಹೇಡಿಯು ತಾನು ಹೊಸದಾಗಿ ಕಟ್ಟಿಸಿದ ತನ್ನ ಅರ ಮನೆಗೆ ಒಂದು ದಿನ!ತನ್ನ ಅಣ್ಣನಿಗೂ ಊರೊಳಿಗನ ಪ್ರಮುಖರೆಲ್ಲರಿಗೂ ಔತಣವನ್ನು ಕೊಟ್ಟನು. ಮರೆಯಲ್ಲಿ ಒಬ್ಬೊಬ್ಬರೇ ಊಟಮಾಡುವುದು ಆಗಿನ ಕಾಲದ ಅರಮನೆಯ ಪದ್ಧತಿ. ಈ ಪದ್ಧತಿಯ ಲಾಭವನ್ನು ತೆಗೆದು ಕೊಂಡು, ಆ ನರಾಧಮನು ಭೋಜನಶಾಲೆಯಲ್ಲಿ ಇಬ್ಬರು ಕೊಲೆಗಡಿಕ ರನ್ನು ಕುಳ್ಳಿರಿಸಿದ್ದನು. ಅತಿಥಿಗಳ ಸತ್ಕಾರಾರ್ಥವಾಗಿ ವಿವಿಧ ವಾದ್ಯಗಳು ಕಿವಿಗಡಚಿಕ್ಕುವಂತೆ ಮೊಳಗುತ್ತಿದ್ದುವು. ಒಬ್ಬೊಬ್ಬನೇ ಅತಿಥಿಯು ಭೋಜ

ನಶಾಲೆಯನ್ನು ಹೊಕ್ಕಕೂಡಲೆ, ಕೊಲೆಗಡಕರಿಂದ ಕೊಲ್ಲಲ್ಪಟ್ಟು ಯಮ ಸದನಕ್ಕೆ ಅತಿಥಿಯಾಗಿ ಹೋಗುತ್ತಿದ್ದನು. ಕಲ್ಪನಾತೀತವಾದ ಈ ಕಪಟ ದುಷ್ಕೃತ್ಯವು ಯಾರಿಗೂ ಗೊತ್ತಾಗಲಿಲ್ಲ. ಈ ಬಗೆಯಾಗಿ, ಆ ನರರಾಕ್ಷಸನು ಪ್ರಮುಖರೆಲ್ಲರನ್ನೂ ಕೊಂದು, ಕೊನೆಗೆ ಅರಸನನ್ನು ಕೊಲ್ಲುವ ಉದ್ದೇಶದಿಂದ ದೇವರಾಯನಿಗೆ ಊಟಕ್ಕೆ ಕರೆಯಲಿಕ್ಕೆ ಬಂದನು. ಬರುವಾಗ ಕೈಯಲ್ಲಿ ಆ ಖೂಳನು ಕೈಸುರಿಗೆಯನ್ನು ಮುಚ್ಚಿದ್ದೊಂದು ತಾಂಬೂಲದ ತಟ್ಟೆಯನ್ನು ತಂದಿದ್ದನು. ದೇವರಾಯನನ್ನು ಊಟಕ್ಕೆ ಎಬ್ಬಿಸಿದನು. ಏನು ತೋಚಿತೋ ಏನೋ, ದೇವರಾಯನು ತನ್ನ ಪ್ರಕೃತಿಯು ಅಸ್ವಸ್ಥವಿರುವಕಾರಣ, ಊಟಕ್ಕೆ ಬರುವುದಿಲ್ಲವೆಂದು ಹೇಳಿದನು. ಆಗ ಆ ನೀಚನಿಗೆ ಅತ್ಯಂತ ನಿರಾಶೆಯಾಯಿತು. ಆ ತಟ್ಟೆಯಲ್ಲಿದ್ದ ಕಠಾರಿಯನ್ನು ಹಿರಿದವನೇ ದೇವರಾಯನ ಎದೆಗೆ ಚುಚ್ಚಿದನು. ದೇವರಾಯನು ರತ್ನಸಿಂಹಾಸನದಿಂದ ಉರುಳಿಕೊಂಡು ಬಿದ್ದನು! ದೇವರಾಯನು ಸತ್ತನೆಂದು ತಿಳಿದು, ಆತನ ತಲೆಯನ್ನು ಕಡಿದು ತರುವುದಕ್ಕೆ ತನ್ನೊಬ್ಬ ಸಂಗಡಿಗನಿಗೆ ಹೇಳಿ, ತಾನು ಆ ರಕ್ತಮಯವಾದ ಕಠಾರಿಯನ್ನು ಕೈಯಲ್ಲಿ ಹಿಡಿದುಕೊಂಡು, ಧಾವಿಸಿ ಅರಮನೆಯ ಹೆಬ್ಬಾಗಿಲಿಗೆ ಬಂದು, "ಇಗೋ ನಾನು ಅರಸನನ್ನೂ ಆತನ ತಮ್ಮಂದಿರನ್ನೂ ಬ್ರಾಹ್ಮಣರನ್ನೂ ಮಂತ್ರಿಗಳನ್ನೂ ಕೊಂದಿರುವೆನು. ಈಗ, ನಾನು ನಿಮ್ಮ ಅರಸು" ಎಂದು ಜನರಿಗೆ ಕೂಗಿ ಹೇಳುತ್ತಿದ್ದನು. ಇತ್ತ, ದೇವರಾಯನ ತಲೆಯನ್ನು ಕಡಿಯುವುದಕ್ಕೆ ಆ ಸಂಗಡಿಗನು ಬಂದನು. ದೇವರಾಯನ ಜೀವವು ಹೋಗಿದ್ದಿಲ್ಲ. ಆದಕಾರಣ, ಆತನು ಚೇತರಿಸಿಕೊಂಡೆದ್ದು ಒಂದೇ ಏಟಿನಲ್ಲಿ ಆ ಸಂಗಡಿಗನನ್ನು ಯಮಸದನಕ್ಕೆ ಅಟ್ಟಿ, ತಾನೂ ಅರಮನೆಯ ಹೆಬ್ಬಾಗಿಲಿಗೆ ಬಂದನು. ಜನರು ತಮಗೆ ಪೂಜ್ಯನಾದ ಅರಸನು ಜೀವದಿಂದಿರುವುದನ್ನು ನೋಡಿದೊಡನೆಯೇ, ಹೆಬ್ಬುಲಿಯಂತೆ ಹಾರಿ ಹೋಗಿ ಆ ರಾಜನ ನರಾಧಮನಾದ ತಮ್ಮನನ್ನು ತುಂಡರಿಸಿ ಒಗೆದರು! ದೇವರಾಯನು ತನ್ನ ಪ್ರಜೆಗಳ ಸಹಾಯದಿಂದ ಸಂಚುಗಾರರೆಲ್ಲರನ್ನೂ ಹಿಡಿದು ಕೊಲ್ಲಿಸಿದನು.

ವಿಜಯನಗರದ ಅರಸನಾದ ದೇವರಾಯನು ಈ ಬಗೆಯಾಗಿ ತನ್ನ ರಾಜಧಾನಿಯಲ್ಲಿ ಸಂಕಟದಲ್ಲಿ ಸಿಲ್ಕಿರುವ ಸಂಧಿಯನ್ನು ಸಾಧಿಸಿ, ವಿಜಯ

ನಗರದ ಕಡುವೈರಿಯಾದ ಬಾಮನಿ ಸುಲ್ತಾನನಾದ ಅಲ್ಲಾವುದ್ದೀನನು, ದೇವರಾಯನು ತನಗೆ ಕಪ್ಪವನ್ನು ಕೊಡಬೇಕೆಂದೂ ಇಲ್ಲವಾದರೆ ಯುದ್ಧವನ್ನು ಸಾರುವೆನೆಂದೂ ಹೇಳಿಕಳುಹಿದನು. ಆದರೆ, ದೇವರಾಯನು ಅತ್ಯಂತ ಧೀರನು, ಆತನು ತಿಲಮಾತ್ರವೂ ಎದೆಗೆಡದೆ, ಕಪ್ಪವನ್ನು ಸರ್ವಥಾ ಕೊಡುವುದಿಲ್ಲವೆಂದು ನಿಕ್ಷುಣ್ಣವಾಗಿ ಹೇಳಿಕಳುಹಿದನು. ಉಭಯತರೂ ಸೈನ್ಯವನ್ನು ಸಜ್ಜುಗೊಳಿಸಿದರು. ಮುದಗಲ್ಲಿನ ಹತ್ತಿರ ಪುನಃ ಎರಡು ತಿಂಗಳವರೆಗೆ ಭಯಾನಕವಾದ ಕದನವಾಯಿತು. ಮೊದಲು ಹಿಂದೂಗಳಿಗೆ ಜಯವಾಯಿತು. ಕೊನೆಯ ಸುರಿಗೆ ಕಾಳಗದಲ್ಲಿ ದೇವರಾಯನ ಮಗನಿಗೆ ಗಾಯವಾಯಿತು. ಆಗ, ದೇವರಾಯನ ಸೈನ್ಯದವರು ಮುದಗಲ್ಲಿನ ಭದ್ರವಾದ ಕೋಟೆಯನ್ನು ಆಶ್ರಯಿಸಿದರು. ಇಬ್ಬರು ಮುಸಲ್ಮಾನ ವೀರರು ಕೋಟೆಯ ಒಳಗೆ ನುಗ್ಗಿ ಬಂದರು. ದೇವರಾಯನ ಸೈನ್ಯದವರು ಅವರನ್ನು ಸೆರೆಹಿಡಿದರು. ಪುನಃ ಹಿಂದೂಗಳ ಮತ್ತು ಹಿಂದೂ ರಾಜ್ಯದ ಗೋಜಿಗೆ ಸುಲ್ತಾನನು ಹೋಗುವುದಿಲ್ಲವೆಂದು ವಚನ ಕೊಟ್ಟರೆ ಮಾತ್ರ ಆ ಮುಸಲ್ಮಾನ ವೀರರನ್ನು ಬಂಧಮುಕ್ತರನ್ನಾಗಿ ಮಾಡಿ ಒಪ್ಪಂದ ಮಾಡಿಕೊಳ್ಳುವೆನೆಂದು ದೇವರಾಯನು ಸುಲ್ತಾನನಿಗೆ ಹೇಳಿ ಕಳುಹಿದನು. ಸುಲ್ತಾನನು ನಿರುಪಾಯನಾಗಿ ಅದಕ್ಕೆ ಒಡಂಬಟ್ಟು, ದೇವರಾಯನೊಡನೆ ಸಂಧಿಯನ್ನು ಮಾಡಿಕೊಂಡನು.

ಈ ರೀತಿಯಾಗಿ, ಪ್ರತಾಪಶಾಲಿಯಾದ ದೇವರಾಯನು ಎಂತಹ ವಿಪತ್ತು ಒದಗಿದರೂ ಧೈರ್ಯಗುಂದದೆ ಧುರಧೀರನಾಗಿ ಕಾದಿ, ಶತ್ರುಗಳನ್ನು ಮರ್ದಿಸಿ ವಿಜಯೋತ್ಸವದಿಂದ ರಾಜ್ಯವಾಳಿ ಮೆರೆದನು.

ಕ್ಷತ್ರಿಯ ಶಿಖಾಮಣಿಯಾದ

ಕೃಷ್ಣದೇವರಾಯ

(೧೫೦೯-೧೫೨೯)

ವಿಜಯನಗರದ ಕೃಷ್ಣದೇವರಾಯನ ಕಾಲವೆಂದರೆ ದಕ್ಷಿಣ ಹಿಂದು ಸ್ಥಾನವು ಪರಮಾವಧಿ ಘನತೆಯನ್ನು ಹೊಂದಿದ ಕಾಲ. ಮುಸಲ್ಮಾನರನ್ನು ಸಂಪೂರ್ಣವಾಗಿ ತಡೆದು ಹಿಡಿದ ಕಾಲ. ಹುಕ್ಕಬುಕ್ಕರು ಶ್ರೀ ವಿದ್ಯಾರಣ್ಯರ ಪ್ರೇರಣೆಯಿಂದ ಸ್ಥಾಪಿಸಿದ ಈ ಕರ್ನಾಟಕ ಸಿಂಹಾಸನವು ದಿನದಿನಕ್ಕೆ ವೃದ್ಧಿಂಗತವಾಗುತ್ತ, ಕೃಷ್ಣದೇವರಾಯನ ಆಳಿಕೆಯಲ್ಲಿ ಅದು ವೈಭವ ಶಿಖರವನ್ನು ತಲುಪಿತು. ಮುಂದೆ, ವಿಜಯ ಶ್ರೀಗೆ ಏರಲು ಅವಕಾಶವೇ ಇಲ್ಲದುದರಿಂದಲೋ ಏನೋ, ಕೃಷ್ಣದೇವರಾಯನ ಆಳಿಕೆ ಮುಗಿದೊಡನೆ ಅವಳು ಆ ಶಿಖರದಿಂದ ಇಳಿಯಲಾರಂಭಿಸಿದಳು; ಮತ್ತು ತೀವ್ರವೆ ಕಾಲುತಪ್ಪಿದ್ದರಿಂದ ಜಾರಿಕೊಂಡು ದೊಪ್ಪನೆ ನೆಲಕ್ಕುರುಳಿದಳು. ಆಗ ಕರ್ನಾಟಕ ವಿಜಯ ಶ್ರೀಯು ವಿಶ್ರಾಂತಿ ನಿದ್ರೆಯನ್ನು ಮಾಡುತ್ತಾ ಮಲಗಿದವಳು ಈವರೆಗೆ ಅವಳು ಘೋರವಾದ ನಿದ್ರೆಯನ್ನು ಮಾಡುತ್ತಲೇ ಮಲಗಿರುವಳು. ಇರಲಿ, ಈಗ ಕರ್ನಾಟಕದ ವೀರತ್ವದ ವರ್ಣನೆಯನ್ನು ಮಾಡುವುದಷ್ಟೆ ನಮ್ಮ ಕರ್ತವ್ಯವಾಗಿರುವುದರಿಂದ, ನಾವು ಈ ಕ್ಷತ್ರಿಯ ಶಿಖಾಮಣಿಯ ವೀರತ್ವವನ್ನು ಇಲ್ಲಿ ವರ್ಣಿಸುತ್ತೇವೆ.

ಕೃಷ್ಣದೇವರಾಯನು ಬಹಳ ಸುಂದರವಾದ ಮತ್ತು ದೃಢವಾದ ಮೈಕಟ್ಟುಳ್ಳವನು. ಆತನು ದಿನಾಲು ಗರಡೀ ಸಾಧನವನ್ನು ತಪ್ಪದೆ ಮಾಡುತ್ತಿದ್ದನು. ಕುದುರೆಯನ್ನೇರುವುದರಲ್ಲಿ ಹೆಸರಾದವನು. ಪ್ರಾತಃ

ಕಾಲದಲ್ಲಿ ಆತನು ಬೇಗನೆ ಎದ್ದು, ಲೋಡುಗಳನ್ನು ಮತ್ತು ಕತ್ತಿಯನ್ನು ತಿರುವುತ್ತಿದ್ದನು. ಆತನ ಮುಖಮುದ್ರೆ ಸದಾ ಗಂಭೀರವೂ ಸ್ವಭಾವವು ಉದಾತ್ತವೂ ಆಗಿತ್ತು. ತನ್ನ ಸೈನ್ಯಕ್ಕೆ ಬಹುಶಃ ತಾನೇ ಸೇನಾಪತಿಯಾಗುತ್ತಿದ್ದನು. ಆತನ ಆಯುಷ್ಯದ ಮುಖ್ಯ ಕಾರ್ಯವೆಂದರೆ ಮುಸಲ್ಮಾನರನ್ನು ಹಣ್ಣುಮಾಡುವುದು. ಆ ಕಾರ್ಯದಲ್ಲಿ ಆತನು ಸಂಪೂರ್ಣವಾಗಿ ಯಶಸ್ವಿಯಾದನು. ಆತನ ಆಳಿಕೆಯಲ್ಲಿ ಮುಸಲ್ಮಾನರು ತೀರ ದುರ್ದಶೆಗೆ ಬಂದರು. ವೈರಿಕುಲಕಾಲದಂಡನಾದ ಕೃಷ್ಣದೇವರಾಯನ ಹೆಸರು ಕೇಳಿದೊಡನೆ ಗದಗದ ನಡುಗುವಷ್ಟು ಆತನ ಶೌರ್ಯದ ಪ್ರತಾಪವು ಬೆಳಗಿತ್ತು. ಆತನು ಮುಸಲ್ಮಾನರನ್ನು ತಡೆದು ಹಿಡಿದುದಲ್ಲದೆ, ದಕ್ಷಿಣ ಮತ್ತು ಪೂರ್ವ ದೇಶಗಳಲ್ಲಿ ಅನೇಕ ಅರಸರನ್ನು ಗೆದ್ದು ವಿಜಯನಗರದ ವೈಭವವನ್ನು ಮಿತಿಮೀರಿ ಬೆಳಿಸಿದನು. ಶ್ರೀರಂಗಪಟ್ಟಣ, ಬಂಕಾಪುರ, ಗೆರಸಪ್ಪೆ, ಕಾಲೀಕತ್ತ, ಭಟಕುಳ, ಬಾರಕೂರ ಮುಂತಾದ ಸ್ಥಳಗಳಲ್ಲಿಯ ಅರಸರೆಲ್ಲರೂ ಆತನ ಮಾಂಡಲಿಕರು. ಅಪ್ರತಿಮ ಪ್ರತಾಪನಾದ ಈತನ ಖಡ್ಗದ ಅಲುಗಿಗೆ ಮೆಯ್ಯೊಡ್ಡಲಾರದೆ ವೈರಿಬಳಗವು ಬಳುಕಿತು.

ಕೃಷ್ಣದೇವರಾಯನು ೧೫೧೨ ನೆಯ ಇಸ್ವಿಯಲ್ಲಿ ಬಾಮನಿರಾಜ್ಯದ ಮೇಲೆ ದಂಡೆತ್ತಿ ಹೋದನು. ರಾಯಚೂರ ಕೋಟೆಯನ್ನು ಮುತ್ತಿದನು. ಆಗ ಮುಸಲ್ಮಾನರಿಗೂ ಹಿಂದುಗಳಿಗೂ ದೊಡ್ಡ ಕಾಳಗವಾಯಿತು. ಮುಸಲ್ಮಾನರು ಮುನಿದು ಕಾದಿದರು, ಹಿಂದುಗಳು ಹರಿದು ಕಾದಿದರು. ಮುನಿಸಿನಿಂದ ಮಾರಾಂತ ವೀರಾದಿಗಳನ್ನು ರಣಕೇಳಿಕುತೂಹಲಿಯಾದ ಕೃಷ್ಣದೇವರಾಯನು ಸಂಗ್ರಾಮರಂಗದಲ್ಲಿ ಎಡೆಬಿಡದೆ ಈಡಾಡಿ ತನ್ನ ಅದ್ಭುತವಾದ ವೀರವಿಭವವನ್ನು ತೋರಿಸಿದನು. ಆಗ, ಶತ್ರುಗಳ ಪೊಂಗು ಅಡಗಿತು, ದರ್ಪವು ಓಗಡಿಸಿತು, ಆ ಕಾಳಗದಲ್ಲಿ ಮುಸಲ್ಮಾನ ವೀರರಲ್ಲನೇಕರು ಕೃತಾಂತನಂತಿರುವ ಕೃಷ್ಣದೇವರಾಯನ ಕೋಪದ ಉಬ್ಬಿಗೆ ಉರಿಯಾದರು. ಕೊನೆಗೆ ಆ ಕೋಟೆಯು ಕೃಷ್ಣದೇವರಾಯನ ಕೈವಶವಾಯಿತು. ಕೃಷ್ಣದೇವರಾಯನು ವಿಜಯಧ್ವಜವನ್ನು ಮೆರೆಯಿಸುತ್ತ ವಿಜಯನಗರಕ್ಕೆ ಮರಳಿ ಬಂದನು.

ಅಷ್ಟರಲ್ಲಿ, ದಕ್ಷಿಣದಲ್ಲಿ, ಉಮತ್ತೂರು ಎಂಬಲ್ಲಿಯ ಮಾಂಡಲಿಕನು ಕೃಷ್ಣದೇವರಾಯನ ವಿರುದ್ಧವಾಗಿ ಬಂಡೆಬ್ಬಿಸಿದನು. ಆತನನ್ನು ದಂಡಿಸುವುದಕ್ಕೋಸ್ಕರ, ಕೃಷ್ಣದೇವರಾಯನು ದಕ್ಷಿಣಕ್ಕೆ ಬಂದನು. ಉಮ್ಮತ್ತೂರಿನ ಗಂಗರಾಜನಿಗೂ ಕೃಷ್ಣದೇವರಾಯನಿಗೂ ಯುದ್ಧವಾಯಿತು. ಆ ಯುದ್ಧದಲ್ಲಿ ಕೃಷ್ಣದೇವರಾಯನು ಮಾರಾಂತಹಿತರ ತಲೆಗಳನ್ನು ಚೆಂಡು ಹೊಯ್ದಂತೆ ಹಾರಿಸುತ್ತಿರಲು, ಮುಂಡಗಳು ಜೊಂಡು ಮುಂದಾಗಿ ಉರುಳಿದವು. ಉಮ್ಮತ್ತೂರ ಅರಸನ ಅಂಕಿತದಲ್ಲಿದ್ದ ಶಿವಸಮುದ್ರದ ಭದ್ರವಾದ ಕೋಟೆಯು ಕೃಷ್ಣರಾಜನ ಹಸ್ತಗತವಾಯಿತು. ಆ ಬಳಿಕ, ಆತನು ಶ್ರೀರಂಗಪಟ್ಟಣವನ್ನು ಹಿಡಿದುಕೊಂಡನು.

ಆ ಬಳಿಕ, ಈ ವೀರನು ಪೂರ್ವದಿಕ್ಕಿನ ಕಡೆಗೆ ವಿಜಯಯಾತ್ರೆಗೆ ಹೊರಟನು. ೧೫೧೩ನೆಯ ಇಸ್ವಿಯಲ್ಲಿ, ಆತನು ಒಡಿಸಾದೇಶದ ಅರಸನ ವಶದಲ್ಲಿರುವ ನೆಲ್ಲೂರು ಜಿಲ್ಲೆಯೊಳಗಿನ ಉದಯಗಿರಿ ಎಂಬ ಕೋಟೆಯ ಮೇಲೆ ಧಾಳಿ ಇಟ್ಟನು. ಉದಯಗಿರಿಯ ಅರಸನ ಸೈನ್ಯಕ್ಕೂ ಕೃಷ್ಣದೇವರಾಯನಿಗೂ ಕಡುತರವಾದ ಕಾಳಗವೆಸಗಿತು. ಕೃಷ್ಣದೇವರಾಯನ ಧಾಳಿಯನ್ನು ಹತ್ತಿಕ್ಕುವುದಕ್ಕೆ ಆ ಅರಸನ ಸೈನ್ಯವು ಬಹಳ ಶ್ರಮಪಟ್ಟಿತು. ಆದರೆ ಅದು ಸಾಧ್ಯವಾಗಲಿಲ್ಲ. ವೈರಿನಿಕರವು ದೂರದಲ್ಲಿ ಬಂದೊಡ್ಡಿರಲು, ಕೃಷ್ಣದೇವರಾಯನು ತನ್ನ ಕರಾಳ ಕರವಾಳವನ್ನೆತ್ತಿ, ರಿಪುಗಳನ್ನು ತರಿದು, ಉದಯಗಿರಿಯ ಅರಸನ ಅರಮನೆಯನ್ನು ಹೊಕ್ಕು ಅವನ ಅತ್ತೆಯನ್ನು ಸೆರೆ ಹಿಡಿದುಕೊಂಡು ವಿಜಯನಗರಕ್ಕೆ ಅವಳನ್ನು ತಂದನು. ಆಮೇಲೆ ಆತನು ಕೊಂಡವೀಡು ಎಂಬ ಕೋಟೆಯನ್ನು ಮುತ್ತಿದನು. ಇದೂ ಓಡಿಸಾದೇಶದ ಅರಸನ ಕೋಟೆಯು. ಅಲ್ಲಿ ಆ ಅರಸನು ಸ್ವತಃ ಕೃಷ್ಣದೇವರಾಯನೊಡನೆ ಕಾಳಗಕ್ಕೆ ಅನುವಾದನು. ಸೆಣಸುವರ ಗಂಡನಾದ ಕೃಷ್ಣದೇವರಾಯನು ರಣದಲ್ಲಿ ಅರಾತಿಭೂಪನ ಬಲಗಳನ್ನು ಉಗ್ರವಾದ ತನ್ನ ಭುಜಾಸಿಯಲ್ಲಿ ಖಣಿಲ್ ಖಣಿಲ್ ಎನ್ನುವಂತೆ ತಳ್ತು ಹೊಯ್ದು, ಆ ಹೊಯ್ಲಿನಲ್ಲಿ ರಿಪು ಸೈನ್ಯವನ್ನು ಉರುಳಿಸಿದನು. ಮುನಿಸಿನಿಂದ ಮಾರಾಂತ ವೀರಾಧಿವೀರರನ್ನು ತನ್ನ ಮೈಗಲಿ

ತನದಿಂದ ಸೋಲಿಸಿ, ಅವರ ಉರಗಳನ್ನು ಥೊಕ್ಕನೆ ಕುತ್ತಿ, ಚಕ್ಕನೆ ಭುಜ ದ್ವಂದ್ವಗಳಿಂದ ಅವುಗಳನ್ನೆತ್ತಿ, ಅವರ ಬಲ್ಗರುಳುಗಳಿಂದ ಬೀರಸಿರಿಗೆ ತೋರಣವನ್ನು ಕಟ್ಟಿದನು. ಎರಡು ತಿಂಗಳು ಹೀಗೆ ಘನ ಘೋರವಾದ ಸಂಗ್ರಾಮವಾದ ಬಳಿಕ, ಆ ಕೋಟೆಯು ಕೃಷ್ಣರಾಜನ ಕೈವಶವಾಯಿತು. ಓಡಿಸಾದೇಶದ ಅರಸನು ಓಡಿ ಹೋದನು. ಕೃಷ್ಣದೇವರಾಯನು ಆತ ನನ್ನು ಬೆಂಕೊಂಡನು. ಕೊಂಡಾಪಲ್ಲಿ ಎಂಬಲ್ಲಿ ಆತನ ಹೆಂಡತಿ ಮತ್ತು ಮಗನು ಇದ್ದ ಸುದ್ದಿಯನ್ನು ಕೇಳಿ, ಕೃಷ್ಣದೇವರಾಯನು ಆ ಕೋಟೆಯ ಮೇಲೆ ಲಗ್ಗೆ ಹತ್ತಿದನು. ಅದು ಆತನ ವಶವಾಯಿತು. ಆ ಕೋಟೆಯ ಲ್ಲಿದ್ದ ಓಡಿಸಾದೇಶದ ಅರಸನ ಹೆಂಡತಿಯನ್ನೂ ಮಗನನ್ನೂ ಆತನು ಸೆರೆ ಹಿಡಿದನು. ಮುಂದೆ ಆತನು ರಾಜಮಹೇಂದ್ರಿಯನ್ನು ಮುತ್ತಿದನು. ಆಗ, ಓಡಿಸಾದೇಶದ ಅರಸನು ಒಪ್ಪಂದಕ್ಕೆ ಆತುರನಾದನು. ಇಬ್ಬ ರೊಳಗೆ ಒಪ್ಪಂದವಾಯಿತು. ಈ ಪ್ರಕಾರವಾಗಿ ಕೃಷ್ಣದೇವರಾಯನು ತನ್ನ ಪೂರ್ವದೇಶದ ವಿಜಯಯಾತ್ರೆಯಲ್ಲಿ ಓಡಿಸಾದೇಶದ ಅರಸನ ಕೈ ಕೆಳಗಿದ್ದ ಉದಯಗಿರಿ, ಬೆಲ್ಲಮಕೊಂಡ, ವಿನ್ನಕೊಂಡ, ಕೊಂಡವೀಡು, ಬಿಝುವಾಡ ಮತ್ತು ರಾಜಮಹೇಂದ್ರಿ ಮುಂತಾದ ಅನೇಕ ಸ್ಥಳಗಳಲ್ಲಿ ಓಡಿಸಾದೇಶದ ಅರಸನಿಗೆ ಇದಿರಾಗಿ, ಆತನ ಸೈನ್ಯವನ್ನು ಅನೇಕ ಕಾಳಗ ಗಳಲ್ಲಿ ಸೋಲಿಸಿದುದರಿಂದ, ಓಡಿಸಾದೇಶದ ಅರಸನು ಆತನಿಗೆ ಶರಣಾ ಗತನಾದನು. ಅಲ್ಲದೆ, ಆತನ ಶೌರ್ಯಕ್ಕೆ ಮೆಚ್ಚಿ, ತನ್ನ ಮಗಳನ್ನು ಕೃಷ್ಣದೇವರಾಯನಿಗೆ ಲಗ್ನಮಾಡಿ ಕೊಟ್ಟನು. ಮತ್ತು ತನ್ನ ರಾಜ್ಯ ವನ್ನು ಈಶಾನ್ಯದಲ್ಲಿ ಕಟಕದವರೆಗೂ ಪಶ್ಚಿಮದಲ್ಲಿ ಸಾಲಸತ್ತದವ ರೆಗೂ ಆತನು ಹಬ್ಬಿಸಿದನು. ಆತನ ಕೀರ್ತಿಯು ದಶದಿಕ್ಕುಗಳಲ್ಲಿ ಡಾವರಿಸುತ್ತಿತ್ತು.

ಆದರೆ, ಇಷ್ಟಾದರೂ ಹಿಂದುಗಳ ಆಗಿನ ಕಾಲದ ಕಡುವೈರಿಗಳಾದ ಮುಸಲ್ಮಾನರ ಗರ್ವಖಂಡನವಾಗಿದ್ದಿಲ್ಲ. ಮತ್ತು ಅವರನ್ನು ಪೂರ್ಣ ವಾಗಿ ಮೆತ್ತಗೆ ಮಾಡದಿದ್ದರೆ ಹಿಂದುಗಳಿಗೆ ಸುಖವಾಗಿ ನಿದ್ರೆ ಹತ್ತುವುದು ಶಕ್ಯವಿದ್ದಿಲ್ಲ. ಹಿಂದಕ್ಕೆ ಅನೇಕ ಸಾರಿ ವಿಜಯನಗರದ ಅರಸರು ಮುಸ

ಲ್ಮಾನರನ್ನು ಸೋಲಿಸಿದ್ದರು. ತದ್ವಿರುದ್ಧವಾಗಿ ಮುಸಲ್ಮಾನರೂ ಹಿಂದೂಗಳನ್ನು ಸೋಲಿಸಿದ್ದರು. ಆದರೆ ಅದರಿಂದ ಮುಸಲ್ಮಾನರ ಹಾವಳಿಯು ಕಡಿಮೆಯಾಗಿದ್ದರೂ ಅವರ ಹಗೆತನವು ನಿರ್ಮೂಲವಾಗಿದ್ದಿಲ್ಲ. ಆದುದರಿಂದ ಕೃಷ್ಣದೇವರಾಯನು ಮುಸಲ್ಮಾನರು ಮುಂದೆ ಎಂದೆಂದಿಗೂ ತಲೆಯೆತ್ತದಂತೆ ಅವರನ್ನು ಪೂರಾ ಬಗ್ಗು ಒಡೆಯಬೇಕೆಂದು ಯೋಚಿಸಿ, ಅಪಾರವಾದ ಸೈನ್ಯವನ್ನು ಕಲೆಹಾಕಲಾರಂಭಿಸಿದನು. ಐದು ವರುಷಗಳವರೆಗೆ, ಕೃಷ್ಣದೇವರಾಯನು ಯುದ್ಧವನ್ನು ಮಾಡುವುದಕ್ಕೆ ಸನ್ನಾಹವನ್ನು ಸಜ್ಜುಗೊಳಿಸುತ್ತಿದ್ದನು. ಪೂರ್ಣ ಸಿದ್ಧತೆಯಾದ ಕೂಡಲೆ ೧೫೨೦ರಲ್ಲಿ ಆತನು ವಿಜಾಪುರದ ಅದಿಲಶಹನನ್ನು ಮುರಿಬಡೆಯುವುದಕ್ಕೆ ನಿಶ್ಚಯಸಿ, ಆತನ ವಶದಲ್ಲಿರುವ ರಾಯಚೂರು ಕೋಟೆಯ ಮೇಲೆ ಧಾಳಿಯಿಟ್ಟನು. ಆಗ ಆತನ ಸೈನ್ಯದಲ್ಲಿ ಸುಮಾರು ಹತ್ತು ಲಕ್ಷ ಜನರಿದ್ದರು. ಈ ಮಹಾಸೇನಾಸಾಗರದೊಂದಿಗೆ ಸಾಗಿ, ಆತನು ರಾಯಚೂರಿನ ಪೂರ್ವದಿಕ್ಕಿನಲ್ಲಿ ಬೀಡುಬಿಟ್ಟನು. ಮತ್ತು ಕೋಟೆಯನ್ನು ಮುತ್ತಿದನು. ಆಗ ವಿಜಾಪುರದಿಂದ, ಅದಿಲ್‌ಶಹನೂ ಮಹಾಸೇನೆಯೊಂದಿಗೆ ಬಂದು ಕೃಷ್ಣಾನದಿಯ ಉತ್ತರ ದಂಡೆಯಲ್ಲಿ ತಳ ಊರಿದ್ದನೆಂದು ಕೇಳಿದನು. ನದಿಯನ್ನು ದಾಟಿ, ರಾಯಚೂರಿಗೆ ೯ ಮೈಲು ಅಂತರದಲ್ಲಿ ಅದಿಲಶಹನು ಬಂದನು. ಕೃಷ್ಣಾನದಿಯು ಹಿಂದೆ ೫ ಮೈಲು ಉಳಿದಿತ್ತು. ಆಗ, ಮುಸಲ್ಮಾನರಿಗೂ ಹಿಂದುಗಳಿಗೂ ಅಭೂತ ಪೂರ್ವವಾದ ಕದನವು ಉಂಟಾಯಿತು. ಆ ಭಯಂಕರ ಕಾಳಗದಲ್ಲಿ ಅರಿಪಡೆ ಮೆಚ್ಚುವಂತೆ ಕೃಷ್ಣದೇವರಾಯನು ತನ್ನ ಶೂರರಾದ ಪಡೆವಳರೊಂದಿಗೆ ಭೋರನೆ ಬಂದು ನಾಲ್ದೆಸೆಗೆ ಕವಿತಪ್ಪ ಶತ್ರುಸೈನ್ಯವನ್ನು ಹೊಯ್ದನು. ಅವೆರಡೂ ಸೈನ್ಯಗಳು ಆಗ ತಳ್ತು ಕಾದಲಾಗಿ, ಉಭಯ ಸೈನಿಕರ ಮಸ್ತಕದ ಸಿಪ್ಪುಗಳು ಹಾರಿ ತಾಕಲಾಡಿ ಅದರಿಂದ ಕಿಡಿಕಿಡಿಗಳು ಸೂಸಿದವು. ಎರಡೂ ದಳಗಳಲ್ಲಿ ವಾಜಿಗಳು ಕಡಿಕಡಿಯಾದುವು. ನೆತ್ತರದ ಕಡಲು ಹರಿಯಿತು. ಕೃಷ್ಣರಾಯನ ಸೈನ್ಯವು, ಕಡಂಗಿ ಗೆಲ್ವಬಗೆಯಿಂದ ಬಂದ ವಿರೋಧಿ ಸೈನ್ಯವನು ಹೊಕ್ಕು, ಇರಿದು, ಅರ್ದು, ತುಳ್ದು ಸುಭಟರನ್ನು ಕೊಂದು ಹಾಕಿತು.

[೧೬]

ಆ ಸೈನ್ಯದಲ್ಲಿ ಸುರಿವ ಸರಳ್ಗಳಿಗೆ ಹಾಯುವ ಚತುರಂಗ ದಳಕ್ಕೆ ಅಣೆದು, ಆರ್ದು ನೂಂಕುವ ಆಸುರತರವಾದ ಸಿಂಧುರ ಘಟಾವಳಿಗೆ ಅಳ್ಕದೆ ಕಾದಿ ಕೃಷ್ಣದೇವರಾಯನ ವೀರರು ರಿಪುಬಲದ ಗರ್ವವನ್ನು ಖಂಡಿಸಿದರು. ಕೃಷ್ಣದೇವರಾಯನು ತನ್ನ ವಿಶಾಲಬಾಹುಗಳ ತಿಂಡಿಯನ್ನು ತೀರಿಸಿಕೊಂಡು, ರಿಪುಗಳ ಕೆನ್ನೀರಸವಿಯನ್ನು ಅನುಭವಿಸಿದನು. ಮುಳಿದು ಇದಿರಾಂತ ದುರ್ಧರ ವಿರೋಧಿಬಳಾಂಬೋಧಿಯನ್ನು ಬಹುಕಾಲದವರೆಗೆ ತಡೆದು, ಹಿಂದಕ್ಕೆ ನೂಕಿದನು. ಗಂಡುದೋರ್ಪರಿಗೆ ಮಾರಿಯಾದ ಆ ಕೃಷ್ಣದೇವರಾಯನ ಖಡ್ಗಾಘಾತಕ್ಕೆ ರಿಪುಸೈನ್ಯವು ನುಚ್ಚುನುರಿಯಾಯಿತು. ಮುಸಲ್ಮಾನರೂ ಅತ್ಯಂತ ರೌದ್ರಾವೇಶವನ್ನು ತಾಳಿ, ಉರವಣೆಯಿಂದ ಕಾದು ಶತ್ರುಸೈನ್ಯವನ್ನು ಹಿಂದಕ್ಕೋಡಿಸಿದರು. ಆಗ ಕೃಷ್ಣದೇವರಾಯನು ಅತುಲ ಧೈರ್ಯವನ್ನು ತೋರಿಸಿ, ತನ್ನ ಇಡೀ ಸೈನ್ಯವನ್ನು ಮುಸಲ್ಮಾನರ ಮೇಲೆ ಹಾಯಿಸಿದನು. ಮುಸಲ್ಮಾನರ ದಂಡು, ನಾಲ್ಕೂದಿಕ್ಕಿಗೆ ಚದರಿ ಓಡಿಹೋಯಿತು. ಕೃಷ್ಣದೇವರಾಯನು ಅವರನ್ನು ಬೆಂಕೊಂಡು, ಅವರ ರುಂಡಗಳ ರಾಶಿಯಿಂದ ರಾಯಚೂರಿನ ನೆರೆಯ ಪ್ರದೇಶವನ್ನೆಲ್ಲ ನೆರೆತುಂಬಿ, ಕೃಷ್ಣೆಯ ಆಚೆಗೆ ಹೋಗಿ, ಅವರನ್ನು ಸದೆ ಬಡೆದನು. ಸುಲ್ತಾನನ್ನು ಸೆರೆ ಹಿಡಿಯುವವನಿದ್ದನು. ಆದರೆ ಸುಲ್ತಾನನು ತಪ್ಪಿಸಿಕೊಂಡು ಆನೆಯನ್ನೇರಿ ಒಬ್ಬನೇ ಜೀವ ಉಳಿಸಿಕೊಂಡು ಓಡಿಹೋದನು. ಸಲಾಬತ್ತಖಾನನೆಂಬ ಸರದಾರನು ಹಿಂದುಗಳ ಮೇಲೆ ವೀರಾವೇಶದಿಂದ ಧಾವಿಸಿ, ಅವರನ್ನು ಸೋಲಿಸುವುದಕ್ಕೆ ಬಹಳ ಪರಾಕ್ರಮವನ್ನು ತೋರಿಸಿದನು. ಆದರೆ ಆತನ ಕುದುರೆಯನ್ನು ಹಿಂದೂ ವೀರನೊಬ್ಬನು ಕೊಂದನು. ಸಲಾಬತ್ತಖಾನನು ಚಪಲತನದಿಂದ ಮತ್ತೊಂದು ಕುದುರೆಯನ್ನೇರಿ ಹಿಂದೂಗಳ ಮೇಲೆ ಹರಿದುಬಿದ್ದನು. ಆದರೆ ಹಿಂದೂಗಳು ಆತನ ಸುತ್ತಲಿನ ವೀರರೆಲ್ಲರನ್ನೂ ತುಂಡರಿಸಿ, ಆತನನ್ನು ಸೆರೆಹಿಡಿದರು. ಆಗ ಮುಸಲ್ಮಾನರು ಎದೆ ಕಳೆದುಕೊಂಡು ದಿಕ್ಕು ದಿಕ್ಕಿಗೆ ಪಲಾಯನ ಮಾಡಿದರು. ಈ ಪ್ರಕಾರವಾಗಿ ಕೃಷ್ಣದೇವರಾಯನು ಅದ್ವಿತೀಯವಾದ ಪರಾಕ್ರಮವನ್ನು ತೋರಿಸಿ, ಮುಸಲ್ಮಾನರನ್ನು ಈ ಯುದ್ಧದಲ್ಲಿ ಪುಟ್ಟಾ ಪೂರಾ ಸೋಲಿಸಿದ ಕಾರಣ, ಮುಸಲ್ಮಾನರು

ವಿಜಯನಗರದ ರಾಜ್ಯದ ಕಡೆಗೆ ಆತನ ಕಾಲದಲ್ಲಿ ಇಣಕಿ ನೋಡಲಿಲ್ಲ. ಇಷ್ಟೆ ಅಲ್ಲ, ಈ ಯುದ್ಧದಲ್ಲಿಯ ಹಿಂದೂಗಳ ವೀರತ್ವವನ್ನು ಮುಸಲ್ಮಾನರು ಕೇಳಿದೊಡನೆ ಗದಗದ ನಡುಗಲಾರಂಭಿಸಿದರು. ಕೃಷ್ಣದೇವರಾಯನ ಕೀರ್ತಿಯು ಈ ವಿಜಯದಿಂದ ಹಿಂದುಸ್ಥಾನದಲ್ಲೆಲ್ಲ ಹಬ್ಬಿತು- ಮತ್ತು ಆತನು ಇದಿರಾಳುಗಳಿಲ್ಲದೆ ಅನೇಕ ವರ್ಷ ಆಳಿ ಮಡಿದನು.

ಕೃಷ್ಣದೇವರಾಯನು ಮಲೆತು ನಿಂತ ಭೂಮಿಪಾಲರ ಹೆಡತಲೆಗಳನ್ನು ದೊಪ್ಪನೆ ಹೊಯ್ದ ಗಂಡನು. ಮಾರ್ಮಲೆವ ಮಾಂಡಲಿಕರನ್ನು ಉರುಳಿಸಿದ ಗಂಡನು. ತುರುಕರ ಪಡೆಯನ್ನು ಮುರಿದಟ್ಟಿದ ಗಂಡನು. ಇಂತಹ ಗಂಡರ ಗಂಡನ ಕಾಲದಲ್ಲಿ ಕರ್ನಾಟಕದ ವೈಭವವು ಅತ್ಯುಚ್ಚವಾದ ಸ್ಥಿತಿಯನ್ನು ಐದಿತು.



ಕಂಠೀರವ ನರಸರಾಜ

ರಣಧೀರನಾದ

ಕಂಠೀರವ ನರಸರಾಜ

(೧೬೩೮-೧೬೫೮)

ಕರ್ನಾಟಕ ಸಾಮ್ರಾಜ್ಯವು ಸುಮಾರು ಒಂದು ಸಾವಿರ ವರುಷಗಳ ವರೆಗೆ ಅಖಂಡವಾಗಿ ಅಟ್ಟಹಾಸದಿಂದ ಆಳಿ, ಮುಪ್ಪಾಗಿ ಕೊನೆಗೆ ತಾಳೀಕೋಟೆಯ ಕಾಳಗದಲ್ಲಿ, ಮಹಾ ಅಶ್ವತ್ಥ ವೃಕ್ಷವು ಉರುಳಿಕೊಂಡು ಬೀಳುವಂತೆ, ಕಡಕೊಂಡು ಬಿದ್ದುದರಿಂದ, ಕರ್ನಾಟಕದಲ್ಲಿ ಮಾತ್ರವೇ ಅಲ್ಲ, ಇಡೀ ಭರತಖಂಡದಲ್ಲಿ ಹಾಹಾಕಾರವೆದ್ದಿತು. ಆಗಿನ ಕಾಲದ ಶತ್ರುಗಳಾದ ಮುಸಲ್ಮಾನರು ಸ್ವಾಭಾವಿಕವಾಗಿಯೇ ಆ ವಿಜಯದಿಂದ ಉಬ್ಬಿದವರಾಗಿ ಪೈಮರೆತು ಕೊಲೆಸುಲಿಗೆಗಳನ್ನು ನಡಿಸಿದರು. ೧೫೬೫ನೆಯ ಇಸ್ವಿಯ ನಂತರದ ೬೦-೭೦ ವರುಷಗಳೆಂದರೆ ಹಿಂದುಸ್ಥಾನವು-ವಿಶೇಷತಃ ಕರ್ನಾಟಕವು ಕಲ್ಪನಾತೀತವಾದ ಕಷ್ಟಗಳನ್ನನುಭವಿಸಿದ ಕಾಲವು. ಆದರೆ, ಹಿಂದೂಜನರು ತಾಳೀಕೋಟೆಯ ಮಹಾಯುದ್ಧದಲ್ಲಿ ಸಂಪೂರ್ಣವಾಗಿ ಸೋತಿದ್ದರೂ ಅವರ ಶೌರ್ಯವು ನಷ್ಟವಾಗಿರಲಿಲ್ಲ. ಅವರ ಉತ್ಸಾಹವು ಕುಗ್ಗಿರಲಿಲ್ಲ; ವೀರಶ್ರೀಯು ವಿಲಯವಾಗಿರಲಿಲ್ಲ; ಅಭಿಮಾನವು ಅಡಗಿರಲಿಲ್ಲ. ಆದುದರಿಂದ, ವಿಜಯನಗರದ ಸಾಮ್ರಾಜ್ಯವು ನಷ್ಟವಾಗಿದ್ದರೂ ಅದರ ಅರಸರು ನಾಮಶೇಷರಾಗಿದ್ದರೂ ಸಾಮಾನ್ಯಜನತೆಯಲ್ಲಿ ತಮ್ಮ ಶತ್ರುಗಳ ಬಗ್ಗೆ ಇದ್ದ ಭಯಂಕರವಾದ ದ್ವೇಷವು ಮೇಲಿಂದ ಮೇಲೆ ಹೊರಹೊಮ್ಮುತ್ತಿತ್ತು. ಮುಸಲ್ಮಾನರನ್ನು ಹತ್ತೊತ್ತಿ ಪುನಃ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂಬ ತೀಕ್ಷ್ಣವಾದ ಲವಲವಿಕೆಯೂ, ಇದ್ದ ಹಿಂದೂ ರಾಜ್ಯಗಳನ್ನು ಬಲಪಡಿಸಬೇಕೆಂಬ ಆಕಾಂಕ್ಷೆಯೂ

ಸಾಮಾನ್ಯ ಜನತೆಯಲ್ಲಿ ಕೂಡ ಕಂಡುಬರುತ್ತಿದ್ದವು. ಮಹಾರಾಷ್ಟ್ರ ಸಾಮ್ರಾಜ್ಯದ ಉದಯವೂ, ಮೈಸೂರ ರಾಜ್ಯದ ದೃಢತೆಯೂ ಈ ತೀಕ್ಷ್ಣವಾದ ಅಸಂತೋಷದ ಪರಿಣಾಮಗಳು. ಉತ್ತರದಲ್ಲಿ ಶ್ರೀ ಶಿವಾಜಿಯು ಹುಟ್ಟಿ, ಮುಸಲ್ಮಾನರೊಡನೆ ಕಾದಿ ಅವರನ್ನು ಸೋಲಿಸಿ ಮಹಾರಾಷ್ಟ್ರ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಸುಮಾರು ಅದೇ ಕಾಲಕ್ಕೆ, ದಕ್ಷಿಣದಲ್ಲಿ ರಣಧೀರನಾದ ಕಂಠೀರವ ನರಸರಾಜನು ರಣದುಲ್ಲಾಖಾನನಂಥ ಶೂರ ವೀರನನ್ನು ೧೬೩೯ನೆಯ ಇಸ್ವಿಯಲ್ಲಿ ಪುಟ್ಟಾಪೂರಾ ಸೋಲಿಸಿ, ಮೈಸೂರಿನ ಸಿಂಹಾಸನವನ್ನು ಭದ್ರಪಡಿಸಿದನು. ಶೌರ್ಯದಲ್ಲಿಯೂ ಸಾಹಸದಲ್ಲಿಯೂ ಸ್ವಾಭಿಮಾನದಲ್ಲಿಯೂ ಹಿಂದೂತ್ವದ ಸಂರಕ್ಷಣೆಯಲ್ಲಿಯೂ ಮೈಸೂರ ಸಂಸ್ಥಾನವು ಮಹಾರಾಷ್ಟ್ರ ಅರಸರಿಗೆ ತಿಲಪ್ರಾಯವೂ ಕಡಿಮೆಯಾಗಿರಲಿಲ್ಲ. ಮಹಾರಾಷ್ಟ್ರ ಸಾಮ್ರಾಜ್ಯವು ಹೊಯ್ದಾಡುತ್ತ ಹೊಯ್ದಾಡುತ್ತ, ಕೊನೆಗೆ ಪೇಶ್ವೆಯರ ಕಾಲದಲ್ಲಿ ಇಂಗ್ಲಿಷರಿಂದ ಪೂರ್ಣವಾಗಿ ಗ್ರಸ್ತವಾಗಿಹೋಯಿತು. ಕರ್ನಾಟಕರೆಲ್ಲರಿಗೂ ಅಭಿಮಾನಕ್ಕೆ ಆಸ್ಪದವಾಗಿರುವ ಮೈಸೂರಿನ ಕರ್ನಾಟಕ ಸಂಸ್ಥಾನವು ಮಾತ್ರ, ಕನ್ನಡಿಗರ ಪೂರ್ವವೈಭವದ ಸ್ಮಾರಕವಾಗಿ ಇನ್ನೂ ನಿಂತಿರುತ್ತದೆ. ಇರಲಿ.

ಕರ್ನಾಟಕ ಸಾಮ್ರಾಜ್ಯವೆಂಬ ಮಹಾ ಅಶ್ವತ್ಥವೃಕ್ಷವು ಕಡಕೊಂಡು ಬಿದ್ದರೂ, ಅದರ ಶಾಖೆಗಳು ಅಲ್ಲಲ್ಲಿ ನೆಲದವರೆಗೆ ಇಳಿದು ಬೇರುಬಿಟ್ಟುಕೊಂಡಿದ್ದವು. ಅದರದೊಂದು ಶಾಖೆಯು ಮೈಸೂರ ಸೀಮೆಯಲ್ಲಿ ನೆಟ್ಟು, ಅದಕ್ಕೆ ಮೊಳಕೆ ಒಡೆದಿತ್ತು. ಅಲ್ಲಿ, ಚಾಮರಾಜನೆಂಬವನು ಚಿಕ್ಕ ಅರಸನಾಗಿ ಆಳುತ್ತಿದ್ದನು. ಆತನು ತೀರಿಕೊಂಡಾಗ, ಮಾರನಾಯಕನೆಂಬ ಪಾಳಯಗಾರನು ಪ್ರಬಲನಾಗಿ, ಚಾಮರಾಜನ ಮಗಳನ್ನು ಮದುವೆಯಾಗುವುದಕ್ಕೆ ಹವಣಿಸಿದನು. ಚಾಮರಾಜನ ಹೆಂಡತಿಯ ಮನಸ್ಸಿನಲ್ಲಿ, ತನ್ನ ಮಗಳನ್ನು ಮಾರನಾಯಕನಿಗೆ ಕೊಡಬೇಕೆಂದಿರಲಿಲ್ಲ. ಆಗ, ಆತನು ಅವಳನ್ನು ಪರಿಪರಿಯಿಂದ ಪೀಡಿಸತೊಡಗಿದನು. ಅವಳು ಆ ಕಾಲಕ್ಕೆ ಉತ್ತರದಿಂದ ಅಲ್ಲಿಗೆ ಬಂದು ನೆಲಸಿದ್ದ ಯದುರಾಯನೆಂಬ ವೀರನನ್ನು ಮೊರೆಹೊಕ್ಕಳು. ಯದುರಾಯನು ತನ್ನ ತಮ್ಮನ ಸಹಾಯದಿಂದ

ಮಾರನಾಯಕನನ್ನು ಕೊಂದನು. ಆಗ, ಚಾಮರಾಜನ ಹೆಂಡತಿಯು ಯದುರಾಯನಿಗೆ ತನ್ನ ಮಗಳನ್ನು ಲಗ್ನಮಾಡಿಕೊಟ್ಟು, ಸಂಸ್ಥಾನದ ಅರಸೊತ್ತಿಗೆಯನ್ನು ಅವನಿಗೆ ಒಪ್ಪಿಸಿದಳು. ಇದೇ ಈಗಿನ ಮೈಸೂರು ಸಂಸ್ಥಾನದ ಮೂಲವು. ಈ ಚರಿತ್ರನಾಯಕನಾದ ರಣಧೀರ ಕಂಠೀರವ ನರಸರಾಜನು ಈ ಯದುರಾಯನಿಂದ ಹನ್ನೆರಡನೆಯವನು.

ನರಸರಾಜನ ತಂದೆಯು ಕೆಲಕಾಲ ಅರಸನಾಗಿ ಆಳಿದರೂ ಆತನಿಗೆ ವೈರಾಗ್ಯ ಹುಟ್ಟಿದುದರಿಂದ, ಆತನು ನರಸರಾಜನು ಹುಟ್ಟುವ ೩೭ ವರ್ಷಗಳ ಪೂರ್ವದಲ್ಲಿಯೇ ರಾಜಸನ್ಯಾಸವನ್ನು ಸ್ವೀಕಾರಮಾಡಿ, ಒಂದು ಹಳ್ಳಿಯಲ್ಲಿ ಬಡವನಂತೆ ವಾಸಮಾಡಿದ್ದನು. ನರಸರಾಜನು ಆ ಹಳ್ಳಿಯಲ್ಲಿ ಹುಟ್ಟಿದನು. ಈತನು ಬಹಳ ಪರಾಕ್ರಮಶಾಲಿ. ಚಿಕ್ಕಂದಿನಿಂದ ಅಂಗ ಸಾಧನವನ್ನು ಮಾಡುವುದರಲ್ಲಿಯೂ ಶಸ್ತ್ರಗಳನ್ನು ಉಪಯೋಗಿಸುವುದರಲ್ಲಿಯೂ ಬಹಳ ಕುಶಲನು. ಒಮ್ಮೆ, ತಿರುಚನಾಪಳ್ಳಿಯ ಅರಸನ ಆಶ್ರಯದಲ್ಲಿದ್ದ ಜಟ್ಟಿಯೊಬ್ಬನು, ತನಗಿಂತ ಗಟ್ಟಿಗರಾರೂ ಇಲ್ಲವೆಂಬ ಹೆಮ್ಮೆಯಿಂದ, ತನ್ನ ದಟ್ಟಿಚಲ್ಲಣಗಳನ್ನು ಕೋಟೆಯ ಅಗಸೆ ಬಾಗಿಲಿಗೆ ತೂಗಹಾಕಿ, ಎಂಥ ಶೂರಪುರುಷನಾದರೂ ಅದರ ಕೆಳಗಿನಿಂದ ಹಾಯ್ದು ಹೋಗುವಂತೆ ವ್ಯವಸ್ಥೆಮಾಡಿದ್ದನು. ಈ ಸುದ್ದಿಯು ಕರ್ಣಪರಂಪರೆಯಿಂದ, ನರಸರಾಜನ ಕಿವಿಗೆ ತಲುಪಿತು. ಅದನ್ನು ಕೇಳಿ, ನರಸರಾಜನ ಕಡೆಗಣ್ಣುಗಳು ಕೆಂಪುಸೂಸಿದವು, ಆತನ ಕುಡಿಮೀಸೆ ಕುಣಿಯಿತು. ಕೂಡಲೆ, ಆತನು ತನ್ನ ವೇಷವನ್ನು ಬದಲಿಸಿಕೊಂಡು, ಸಾಮಾನ್ಯ ಜಟ್ಟಿಯಂತೆ ತಿರುಚನಾಪಲ್ಲಿಗೆ ಹೋಗಿ, ಅಗಸೆ ಬಾಗಿಲಿಗೆ ಕಟ್ಟಿದ್ದ, ಆ ಜಟ್ಟಿಯ ದಟ್ಟಿ ಚಲ್ಲಣಗಳನ್ನು ಹರಿದೊಗೆದನು. ಆಗ, ಆ ಜಟ್ಟಿಗೂ ನರಸರಾಜನಿಗೂ ಮಲ್ಲಯುದ್ಧವಾಯಿತು. ಆ ಯುದ್ಧದಲ್ಲಿ, ನರಸರಾಜನು ಆ ಜಟ್ಟಿಯನ್ನು ಸೋಲಿಸಿ, ಆತನ ಕೊರಳು ಕೊಯ್ದು ಚಲ್ಲಿದನು. ಆತನ ಶೌರ್ಯಕ್ಕೆ ಅರಸನು ಮೆಚ್ಚಿ, ಆತನಿಗೆ ವಿಶೇಷ ಮರ್ಯಾದೆಯನ್ನು ಮಾಡಬೇಕೆಂದು ಯೋಚಿಸಿದನು. ಆಗ, ನರಸರಾಜನು, ತಾನು ಸಾಮಾನ್ಯ ಜಟ್ಟಿಯಲ್ಲವೆಂದೂ ಮೈಸೂರ ದೊರೆಯಮನೆತನದವನೆಂದೂ ಅಗಸೆಯ ಬಾಗಿಲಿಗೆ ಚೀಟಿಯನ್ನು ಕಟ್ಟಿಟ್ಟು ತನ್ನ ಊರಿಗೆ ಬಂದುಬಿಟ್ಟನು.

ಹೀಗೆ ಊರಿಗೆ ಬರುವಾಗ ದಾರಿಯಲ್ಲಿ, ಒಂದು ಬಳಪದ ಕಂಬ ವನ್ನು ಕಂಡು ಅದನ್ನು ತನ್ನ ಪ್ರೀತಿಯ 'ವಿಜಯನಾರಸಿಂಹ' ವೆಂಬ ಕತ್ತಿಯಿಂದ ಒಂದೇ ಏಟಿಗೆ ಕಡಿದು ಸೀಳು ಮಾಡಿದನು. ಮುಂದೆ, ತುರುಗದೇರಾಟ, ಗಜಾರೋಹಣ, ಭಲ್ಲೆ, ಬಾಕು, ಕಠಾರಿ ಮುಂತಾದ ಶಸ್ತ್ರಪ್ರಯೋಗ ಇವುಗಳಲ್ಲಿ ಅವನು ಅಂಗವಣೆಯನ್ನು ಕಲಿತನು.

ನರಸರಾಜನ ತಂದೆಯು ರಾಜಸನ್ಯಾಸವನ್ನು ತೆಗೆದುಕೊಂಡದುದ ರಿಂದ, ರಾಜ್ಯವು ನರಸರಾಜನ ಚಿಗಪ್ಪನ ಸಂತತಿಯ ಕಡೆಗೆ ಹೋಗಿತ್ತು. ಆ ವಂಶದಲ್ಲಿಯ ಇಮ್ಮಡಿರಾಜನೆಂಬ ೨೧ ವಯಸ್ಸಿನ ಅರಸನು ವಿಷ ಪ್ರಯೋಗದಿಂದ ಕೊಲ್ಲಲ್ಪಟ್ಟದುದರಿಂದ ಆತನ ಹೆಂಡತಿಯು ನರಸ ರಾಜನನ್ನು ದತ್ತಕ ತೆಗೆದುಕೊಂಡಳು. ಆಗ, ಅರಸೊತ್ತಿಗೆಯು ನರಸ ರಾಜನಿಗೆ ಪ್ರಾಪ್ತವಾಯಿತು. ದೇಶದಲ್ಲಿ, ಮುಸಲ್ಮಾನರ ಪೀಡೆಯಿಂದ ಜನರೆಲ್ಲರೂ ಅತ್ಯಂತ ಅಸಂತುಷ್ಟರಾಗಿದ್ದರು. ಮುಸಲ್ಮಾನರು ಸುಜನ ರನ್ನು ಹಿಂಡಿ ಹಿಳಿದು ಬಹಳ ಗಜಬಜ ಮಾಡಿದರು; ಗೋವುಗಳನ್ನು ಸದೆಬಡೆದು, ದೇವತಾ ಶಿಲೆಗಳನ್ನೊಡೆದು, ಪಾವನ ಸಾಧ್ವಿಯರನ್ನು ಭಂಗಕ್ಕೆ ತಂದು ಹಾವಳಿಯನ್ನು ಮಾಡಿದರು. ಇಂಥ ಭಯಂಕರ ಪರಿ ಸ್ಥಿತಿಯಲ್ಲಿ ನರಸರಾಜನು ಪಟ್ಟವೇರಿದನು. ಮುಸಲ್ಮಾನರನ್ನು ಬಗ್ಗು ಬಡೆ ಯುವುದೇ ಆತನ ಮೊದಲನೆಯ ಕರ್ತವ್ಯವಾಯಿತು. ಹಾಗೆ ಮಾಡುವು ದಕ್ಕೆ ಆತನಿಗೆ ಅನಾಯಾಸವಾಗಿ ಒಂದು ಸಂಧಿಯೂ ದೊರೆಯಿತು. ಗುರಿಕಾರ ಚನ್ನಯ್ಯನೆಂಬವನೊಬ್ಬನು ಮೈಸೂರ ದೇಶದಿಂದ ಓಡಿಹೋಗಿ, ವಿಜಾಪುರದ ಪಾದಶಹನ ಆಶ್ರಯದಲ್ಲಿ ನಿಂತು, ಇನ್ನೂರು ಕುದುರೆಗಳಿಗೆ ಅಧಿಪತಿಯಾಗಿದ್ದನು. ಆತನು ಮುಸಲ್ಮಾನರು ಶ್ರೀರಂಗ ಪಟ್ಟಣವನ್ನು ಮುತ್ತಬೇಕೆಂದು ಪಾದಶಹನ ಕಿವಿಯೂದಿದನು. ಪಾದಶಹನು ಅದಕ್ಕೆ ಸಮ್ಮತಿಸಿ, ತನ್ನ ಸರದಾರರೊಳಗೆ ಅತ್ಯಂತ ಶೂರನಾದ ರಣದುಲ್ಲಾ ಖಾನನನ್ನು ಸೈನ್ಯದೊಂದಿಗೆ ದಕ್ಷಿಣಕ್ಕೆ ಕಳುಹಿದನು. ಆತನು ಒಡನೆ ಇಕ್ಕೇರಿಯನ್ನು ಸೆಳೆದು, ತುರುಕರ ಪಡೆಯನ್ನು ಶ್ರೀರಂಗ ಪಟ್ಟಣದ ಮೇಲೆ ಸಾಗಿಸಿದನು. ರಣದುಲ್ಲಾಖಾನನ ಪಡೆಯು ರೌದ್ರಾವೇಶದಿಂದ ಪಟ್ಟಣ

ವನ್ನು ಮುತ್ತಿತು. ಬಿರುದಿನ ಡಾಲ ರಾವುತರು ಕುಣಿಯುವ ಕುದುರೆಗಳ ನ್ನೇರಿ ಬಿಂಕದಿಂದ ಕೋಟೆಯನ್ನು ಲಗ್ಗೆ ಇಟ್ಟರು. ಆತನ ಕೈಗತ್ತಿಯ ಬವರಿಗರು ದುರ್ಗದಾಳ್ವರಿಯ ಮೇಲೆ ತುಡುಗಿನಿಂದೇರಲಿಕ್ಕೆ ಯತ್ನಿಸಿದರು; ಬಳಸಿದ ತಳಿಯು ಮುರಿದು ಕೋಟೆಯ ಮೇರುವೆಗಳಿಗೆ ಕಿಚ್ಚನ್ನಿಕ್ಕಿದರು. ಆ ದಳ್ಳುರಿಯು ಮುತ್ತಿ ಮುಳಿದು ಸುತ್ತಲಿನ ಬನವನ್ನು ಸುಟ್ಟಿತು. ಆಗ, ಚಲದಂಕಮಲ್ಲನಾದ ಕಂಠೀರವ ನರಸರಾಜನು ಕಣ್ಗಿಡಿಗಳನ್ನು ಸೂಸುತ್ತ, ಪುರವನ್ನೊತ್ತರಿಸಿ ಮುತ್ತಿಗೆಯನ್ನಿಕ್ಕಿ ಸೆಳೆಯಲು ಬಂದ ರಣ ಮುಲ್ಲಾಖಾನನ ಸೈನ್ಯದೊಂದಿಗೆ ಪ್ರಬಲ ಪರಾಕ್ರಮದಿಂದ ಕಾದಿದನು. ಬರಸಿಡಿಲಿನಂತೆ ಆತನ ಸೈನ್ಯದ ಮೇಲೆ ಎರಗಿ ಬಿದ್ದು, ಮುಂಚೂಳಿಯ ಕಾಳಗದಲ್ಲಿ, ಮಾರ್ಬಲವನ್ನು ಹೊಕ್ಕು ಅದನ್ನು ಕುಟ್ಟಿ ಕೋಲಾಹಲವನ್ನೆಬ್ಬಿಸಿದನು. ಆತನ ಸೈನಿಕರು ದುರಗಲಿತನದಿಂದ ಹೋರಾಡಿ, ಕೋಟೆಯ ತೆನೆಗೆ ತುಡುಗಿನಿಂದ ಏರಿಬರುವ ತುಡುಗಣಿ ತುರುಕರ ಸೈನ್ಯವನ್ನು ತರಿದು ತೂರಿದರು. ಕೆಲವರನ್ನು ಸೀಕರಿಯಾಗಿ ಉರುಳಿಸಿದರು. ಮುಸಲ್ಮಾನರು ತಲೆಹರಿಗೆಗಳನ್ನೊಡ್ಡಿಕೊಳ್ಳುತ್ತ, ಅಲಗಿನ ಗಾಯಗಳನ್ನೆಣಿಸದೆ, ಮೇಲಕ್ಕೇರಿ ಬಂದು ಕೋಟೆಯನ್ನು ಕೈವಶಮಾಡಿಕೊಳ್ಳುವುದಕ್ಕೆ ವಿಶ್ವಪ್ರಯತ್ನ ಮಾಡಿದರು. ಎಷ್ಟು ಉರುಬಿನಿಂದ ಕಾದಿದರೂ ಅದು ವಶವಾಗಲಿಲ್ಲ. ಆಗ, ರಣದುಲ್ಲಾಖಾನನ ಸೈನ್ಯದ ಧೈರ್ಯವು ಕರಗಿತು, ಪೌರುಷವು ಬತ್ತಿತು. ನರಸರಾಜನ ಸೈನ್ಯದಲ್ಲಿಯ ಬಿರುದಿನ ಹೊಂತಕಾರಿಗಳು ಉಬ್ಬುಗುದುರೆಗಳ ಸಾಲಮೋಹರದಲ್ಲಿ ಹೊಕ್ಕು ಉರವಣಿಸಿದರು. ಎತ್ತುಗಲ್ಲು, ಏರುಗಲ್ಲು, ಕವಣೆಗಲ್ಲು, ಅರೆಗಲ್ಲು ಮುಂತಾದವುಗಳಿಂದ ಕೋಟೆಯ ಮೇಲಿದ್ದವರು ಕೆಳಗಿದ್ದ ಮುಸಲ್ಮಾನರನ್ನು ತೆರಪಿಲ್ಲದೆ ಕೊಂದರು. ಮೊನೆಗಾರರು ಅರಿಬಲದ ಮೊನೆಮುರಿದರು. ಕಗ್ಗೊಲೆಯ ಕಾಳಗಕ್ಕೆ ಪ್ರಾರಂಭವಾಯಿತು. ಮುಸಲ್ಮಾನರನ್ನು ಹಿಂದುಗಳು ಸಿಕ್ಕಸಿಕ್ಕಲ್ಲಿ, ತರಿದು ತುಂಡರಿಸಿ ತೂರಿದರು. ತೊರೆಯುತ್ತ ಮೊರೆಯುತ್ತ, ರಕ್ತವನ್ನು ಸುರಿಸುತ್ತ ಮುಸಲ್ಮಾನ ಸೈನಿಕರು ದಿಕ್ಕಾಪಾಲಾಗಿ ಓಡಿದರು. ಅನೇಕರು ಉರುಳುತ್ತ, ನರಳುತ್ತ, ತೆರಳುತ್ತ, ಶತ್ರುಗಳ ಕಾಲುಗ

ಳಲ್ಲಿ ಬಿದ್ದರು. ನರಸರಾಜನ ಈ ಅಸಮಾನವಾದ ಪರಾಕ್ರಮದ ಆಯತವನ್ನು ನೋಡಿ, ರಣದುಲ್ಲಾಖಾನನ ಪಂಥಪಾಡುಗಳೆಲ್ಲವೂ ಹೇಳಹೆಸರಿಲ್ಲದೆ ಹೋದುವು. ನರಸರಾಜನ ಸೈನ್ಯವು ಆಗಸಕ್ಕೆ ಅಡರುವ ತೇಜಿಗಳನ್ನೂ ರಣಗಲಿಯಾನೆಗಳನ್ನು ತೆಗೆದುಕೊಂಡು, ಅರಿಸೈನ್ಯವನ್ನು ಜಡಿದಟ್ಟಿ ಕಣ್ಗೆಡಿಸಿತು. ಆಗ ರಣದುಲ್ಲಾಖಾನನ ಮಬ್ಬು ಅಡಗಿತು. ಆತನು ನರಸರಾಜನಿಗೆ ಮೊರೆಹೊಕ್ಕು ಸಂಧಾನವನ್ನು ಮಾಡಿಕೊಂಡನು. ಈ ರೀತಿಯಾಗಿ, ಪರಬಲಶಾರ್ದೂಲನಾದ ರಣಧೀರ ಕಂಠೀರವ ನರಸನು ಮುಸಲ್ಮಾನರ ಗರ್ವವನ್ನು ಭಂಗಿಸಿ, ಕರ್ನಾಟಕ ಸಿಂಹಾಸನದ ಗೌರವವನ್ನು ದೃಢಪಡಿಸಿದನು. ಆತನು ೧೬೪೧ ರಿಂದ ೧೬೫೯ರ ವರೆಗೆ ದಿಗ್ವಿಜಯವನ್ನು ಕೈಕೊಂಡು, ಅನೇಕ ಪಾಳಯಗಾರರನ್ನು ಮುರಿದು, ರಾಜ್ಯವನ್ನು ವಿಸ್ತರಿಸಿದನು. ಬೆಟ್ಟದಪುರ, ಕುಣಿಗಲ್ಲು, ಧಣಾಯಕನ ಕೋಟೆ, ಸತ್ಯಮಂಗಲ ಮುಂತಾದವುಗಳೆಲ್ಲವೂ ಆತನ ಕಾಲದಲ್ಲಿಯೇ ಮೈಸೂರಿಗೆ ಸೇರಿದವು.

ಶೂರರ ಶೌರ್ಯವನ್ನು ನೋಡಿ ಶೂರರಿಗೆ ಆನಂದವಾದರೆ ಹೇಡಿಗಳಿಗೆ ದುಃಖವಾಗುತ್ತದೆ. ತಿರುಚಿನಾಪಲ್ಲಿಯ ಅರಸನು ಇಂತಹ ಹೇಡಿಯು. ಆತನು ನರಸರಾಜನ ಅತುಲ ಪರಾಕ್ರಮವನ್ನು ಕೇಳಿ, ಹೊಟ್ಟೆಯಲ್ಲಿ ಉರಿಯಲಾರಂಭಿಸಿದನು. ಆದರೆ, ಆ ಪುರುಷಸಿಂಹನನ್ನು ಇದಿರಿಸುವ ಧೈರ್ಯವು ಆತನಿಗೆಲ್ಲಿ? ನರಸರಾಜನನ್ನು ಗುಪ್ತರೀತಿಯಾಗಿ ಕೊಲ್ಲಿಸುವುದಕ್ಕೆ ಆತನು ಇಪ್ಪತ್ತೈದು ಜಟ್ಟಿಗಳನ್ನು ವೇಷಾಂತರಗಳಿಂದ ಶ್ರೀರಂಗಪಟ್ಟಣಕ್ಕೆ ಕಳುಹಿದನು. ಅವರು ಜಲಮಾರ್ಗದಿಂದ ಕನ್ನಕೊರೆದು, ಅರಸನ ಅಂತಃಪುರವನ್ನು ಹೊಕ್ಕು, ಅಲ್ಲಿಯ ಕಂಭಗಳ ಹಿಂದೆ ಅಡಗಿಕೊಂಡು ನಿಂತುಕೊಂಡು, ಹೊತ್ತು ಸಾಧಿಸಿ ನರಸರಾಜನನ್ನು ಸದ್ದಿಲ್ಲದೆ ಕೊಂದು ಬಿಡುವ ಹವಣಿಕೆಯಲ್ಲಿದ್ದರು. ಅಷ್ಟರಲ್ಲಿ, ನರಸರಾಜನಿಗೆ ಅವರ ಸುಳಿವು ತಿಳಿಯಿತು. ಕೂಡಲೆ, ಆತನು ತನ್ನ ವಿಜಯನಾರಸಿಂಹ ವೆಂಬ ಕತ್ತಿಯನ್ನು ಹಿರಿದು, ಕೊಲೆಗಡಕರ ಮೇಲೆ ಏರಿಹೋದನು. ಅವರೆಲ್ಲರೂ ಒಟ್ಟಾಗಿ ಆತನ ಮೇಲೆ ಬಿದ್ದು ಆತನನ್ನು ಕತ್ತರಿಸಿ ಒಗೆಯುವುದಕೆ

ಪ್ರಯತ್ನಪಟ್ಟರು. ಆದರೆ ನರಸರಾಜನು ಕೈಚಳಕದಿಂದ ಅವರಲ್ಲಿ ಅನೇಕರನ್ನು ಯಮಸದನಕ್ಕೆ ಅಟ್ಟಿ, ಮಿಕ್ಕವರನ್ನು ಪಾದಾಕ್ರಾಂತವಾಗಿ ಮಾಡಿಕೊಂಡನು. ಈ ಸುದ್ದಿಯನ್ನು ತಿರುಚಿನಾಪಲ್ಲಿಯ ಹೇಡಿ ಅರಸಿನಿಗೆ ತಿಳುಹುವುದಕ್ಕೆ ಅವರನ್ನು ಹಿಂದಕ್ಕಟ್ಟಿದನು.

ಈ ರೀತಿಯಾಗಿ, ಕಂಠೀರವ ನರಸರಾಜನು ಅನೇಕ ಸಂದರ್ಭಗಳಲ್ಲಿ ತನ್ನ ಶೌರ್ಯವನ್ನು ತೋರ್ಪಡಿಸಿ, ಮುಸಲ್ಮಾನರ ಸೊಕ್ಕುಮುರಿದು ಸುಡಗರದಿಂದ ಆಳಿ ಮಡಿದನು.

ಕಪನಪ್ರಚಂಡನಾಧ

ಮತ್ತಿ ತಿಮ್ಮಣ್ಣನಾಯಕ

(೧೫೬೭-೧೫೮೭)

ಪಾಳಯಗಾರರು ಕರ್ನಾಟಕದಲ್ಲಿ ನೆಲೆಸಿದುದು ೧೩ ನೆಯ ಶತಮಾನಕ್ಕೆ ಮೊದಲು. ವಿಶೇಷವಾಗಿ ಅವರು ಬೇಡರ ಜಾತಿಗೆ ಸೇರಿದವರು. ಇವರ ಶೌರ್ಯವನ್ನು ಕಂಡೆ ಮುಸಲ್ಮಾನರು ಇವರನ್ನು ಅಂಜಿಕೆಯಿಲ್ಲದವರೆಂದು ಕರೆದರು. ಇವರಲ್ಲಿ ಗುಮ್ಮನಾಯಕವಂಶ ಮುಂಚಿನದು. ವಿಜಯನಗರದ ಸ್ಥಾಪನೆಯಾದ ಬಳಿಕ ೧ನೆಯ ಬುಕ್ಕರಾಯನು ಗುಮ್ಮನಾಯಕನ ಮನೆತನದವರನ್ನು ತನ್ನ ಸಾಮ್ರಾಜ್ಯದ ಅಧೀನನಾಯಕರನ್ನಾಗಿ ಮಾಡಿಕೊಂಡನು. ವಿಜಯನಗರದ ರಾಯರಿಗೆ ಬಿಕ್ಕಟ್ಟಿನ ಪ್ರಸಂಗ ಒದಗಿದಾಗ ಇವರ ಸಹಾಯವೂ ಬೇಕಾಗುತ್ತಿತ್ತು. ಆಗ ಈ ವೀರನಾಯಕರು ತಮ್ಮ ಸೈನ್ಯವನ್ನು ಕಟ್ಟಿಕೊಂಡುಹೋಗಿ ಯುದ್ಧ ಮಾಡುತ್ತಿದ್ದರು. ಹೀಗೆ ಸಹಾಯಮಾಡುವುದಕ್ಕೂ ವಿಶೇಷವಾಗಿ ತಮ್ಮ ಸತ್ವ ಸಂರಕ್ಷಣೆಗೂ ಹೊಸ ರಾಜ್ಯಗಳನ್ನು ಅಂಗಯ್ಯ ಳವಡಿಸಿಕೊಳ್ಳುವುದಕ್ಕೂ ಈ ನಾಯಕರು ತಮ್ಮ ದಂಡನ್ನು ಯಾವಾಗಲೂ ಅತ್ತಿಂದಿತ್ತ ಒಯ್ಯಬೇಕಾಗುತ್ತಿತ್ತು. ಹೀಗೆ ಪರಿಭ್ರಮಿಸುತ್ತಿರುವ ಪಡೆಗೆ ಪಾಳಯವೆಂದೂ ಅದರ ನಾಯಕರಿಗೆ ಪಾಳಯಗಾರರೆಂದೂ ಹೆಸರು. ಈ ಪಾಳೆಯಗಾರರ ಪೂರ್ವಜರು ವಿಜಯನಗರದ ರಾಜ್ಯಾರಂಭಕ್ಕೆ ಮುಂಚೆಯೇ ಇಲ್ಲಿ ಬೀಡು ಬಿಟ್ಟಿದ್ದರೂ ಕರ್ನಾಟಕ ಸಿಂಹಾಸನ ಸ್ಥಾಪನೆಯಾದ ಬಳಿಕವೇ ಪಾಳಯಗಾರರೆಂಬ ಹೆಸರು ಪ್ರಚಾರಕ್ಕೆ ಬಂದಿತು. ಗುಮ್ಮನಾಯಕವಂಶದ

ಪಾಳಯಗಾರರ ಮಧ್ಯಕಾಲದಲ್ಲಿ ಇನ್ನೊಂದು ಪಾಳೆಯಗಾರರ ಮನೆತನವು ಪ್ರಬಲವಾಯಿತು. ಅದೆಂದರೆ ಮತ್ತಿ ಪಾಳೆಯಗಾರರದು. ನಮ್ಮ ಕಥಾನಾಯಕನಾದ ಮತ್ತಿಯ ತಿಮ್ಮಣ್ಣ ನಾಯಕನೆಂಬ ಕೆಚ್ಚೆದೆಯ ಕಟ್ಟಾಳು ಈ ಮತ್ತಿ ಪಾಳೆಯಗಾರ ವಂಶದ ಮೂಲಪುರುಷ.

ವಾಲ್ಮೀಕಿ ಗೋತ್ರದವರೆಂದು ಹೇಳಲ್ಪಡುವ ಕಾಮಗೇತಿ ವಂಶದಲ್ಲಿ ಹುಟ್ಟಿದ ಸಬ್ಬಗಡಿ ಓಬನಾಯಕ, ಜಡವಿನಾಯಕ, ಬುಳ್ಳನಾಯಕ ಎಂಬ ಸಹೋದರರು ಉತ್ತರದಿಂದ ಬಂದರು. ತಮ್ಮ ಸಂಗಡ ಪರಿವಾರವೂ ಮನೆದೇವರಾದ ಅಹೋಬಲ ನರಸಿಂಹಮೂರ್ತಿಯ ಪೆಟ್ಟಿಗೆ, ತುರುಗಳು, ಕುರಿಗಳು, ಕೊಲ್ಲಾರಿ ಬಂಡಿಗಳು ಮುಂತಾದ ಕಂಪಳ (ಸರಂಜಾಮು) ವನ್ನು ಅವರು ಹೊರಡಿಸಿದ್ದರು. ಹಾದಿಯಲ್ಲಿ ವಿರುಪಾಕ್ಷೇಶ್ವರನನ್ನು ಸಂದರ್ಶಿಸಿ ಹಂಪೆಯ ಸೊಬಗನ್ನು ನೋಡಿಕೊಂಡು ಮುಂದೆ ಸಾಗಿದರು. ಆಗ ಆನೆಗೊಂದಿಯ, ವಿರುಪಾಕ್ಷೇಶ್ವರನ ಪೂಜಾರ್ಯರಾದ ಕರಿಜೋಯಿಸ, ವಿರೂಪಾಕ್ಷ ಜೋಯಿಸ ಎಂಬಿಬ್ಬರು ಹುಡುಗರು ಈ ನಾಡ ತಳವಾರರ ಬೆನ್ನುಹತ್ತಿ ಬಂದರು. ಆ ಮೂವರು ನಾಯಕರೂ ಬಿಳಿಜೋಡಿನ ಬಳಿಯಲ್ಲಿ ರೊಪ್ಪ (Fold for sheep ?) ಹಾಕಿಕೊಂಡಿದ್ದು ಮೂರು ತಿಂಗಳ ಕಾಲ ಕಳೆದರು. ಆ ಬಿಳಿಜೋಡಿನ ಜೋಯಿಸರಿಗೆ ಮಕ್ಕಳಿಲ್ಲದ್ದರಿಂದ ಈ ನಾಯಕರ ಹತ್ತಿರವಿದ್ದ ಇಬ್ಬರು ಪೂಜಾರ್ಯರ ಹುಡುಗರನ್ನು ಭೋಗಪಟ್ಟಿ ಬರಸಿಕೊಟ್ಟು ತಮ್ಮ ತರುವಾಯಕ್ಕಾಗಿ ನಿಯಮಿಸಿಕೊಂಡರು. ಆ ನಾಯಕರು ಮುಂದೆ ನೀರುತಡಿ ಎಂಬ ಊರ ನೆರೆಯಲ್ಲಿ ತಂಗಿದರು. ಅಲ್ಲಿಯೊಂದು ಗುಡಿಯನ್ನು ಕಟ್ಟಿಸಿ ಕುಲದೇವತೆಯನ್ನು ಅದರಲ್ಲಿ ಸ್ಥಾಪನೆ ಮಾಡಿದರು. ಬರುಬರುತ್ತ ಅವರು ಸುತ್ತುಮುತ್ತಲಿನ ಹಳ್ಳಿಗಳಲ್ಲಿದ್ದುಕೊಂಡು ಆ ದೇವರಿಗೆ ನಡೆದುಕೊಳ್ಳುತ್ತಿದ್ದರು. ಇಷ್ಟೆಲ್ಲ ಈ ತಿಮ್ಮಣ್ಣನಾಯಕನ ಪೂರ್ವವೃತ್ತವಾಯಿತು. ಆ ಮೂವರು ನಾಡ ತಳವಾರರಲ್ಲಿ ಹಿರಿಯನಾದ ಸಬ್ಬಗಡಿ ಓಬನಾಯಕನೇ ಈತನ ತಂದೆ.

ಈ ತಿಮ್ಮಣ್ಣನಾಯಕನು ಮತ್ತಿಗ್ರಾಮದಲ್ಲಿ ನಿಂತನು, ಆದುದರಿಂದ ಈತನಿಗೆ ಮತ್ತಿ ತಿಮ್ಮಣ್ಣನಾಯಕನೆಂದು ಹೆಸರಾಯಿತು. ಇವನ

ಕಕ್ಕ ಜಡಕಲ್ಲುನಾಯಕ (ಜಡವಿನಾಯಕ) ನ ಮಗ ಹಿರೀಹನುಮನಾಯಕನು ಸಾಗಲೆ ಗ್ರಾಮದಲ್ಲಿ ಇದ್ದನು ; ಇನ್ನೊಬ್ಬ ಕಕ್ಕ ಬುಳ್ಳನಾಯಕನ ಮಕ್ಕಳು ಚಿಕ್ಕಹನುಮನಾಯಕ ಓಬಣ್ಣನಾಯಕರು ಬಿಳಿಜೋಡಿನಲ್ಲಿ ವಾಸಮಾಡಿದರು. ತಿಮ್ಮಣ್ಣನಾಯಕನು ತನ್ನ ಸುತ್ತುಮುತ್ತಲಿನ ನಾಡಿನಲ್ಲಿ ಪ್ರಬಲನಾಗುತ್ತ ನಡೆದನು. ಆಗ ವಿಜಯನಗರದ ಅವನತಿಗೆ ಆರಂಭವಾಗತೊಡಗಿತ್ತು. ಮುಸಲ್ಮಾನರೆಲ್ಲ ಒಟ್ಟು ಸೇರಿ ಕರ್ನಾಟಕ ಸಿಂಹಾಸನವನ್ನು ಕಿತ್ತೊಗೆಯಲು ಹವಣಿಸುತ್ತಿದ್ದರು. ಈ ಕೋಲಾಹಲದಲ್ಲಿ ತಮಗೆ ಆಸರವಾಗಿರಬೇಕೆಂದು, ವಿಜಯನಗರದ ರಾಯರು ತಮ್ಮ ಸಾಮ್ರಾಜ್ಯದಲ್ಲಿಯ ವೀರರನ್ನು ತಮ್ಮ ಮಿತ್ರರನ್ನಾಗಿ ಮಾಡಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ವಿಜಯನಗರದ ಮುಖ್ಯ ಕಾರಭಾರಿಯಾಗಿದ್ದ, ರಾಜಸಂತತಿಯ ಸಾಳ್ವ ನರಸಿಂಗರಾಯನ ದೃಷ್ಟಿ ಈ ಮತ್ತಿ ತಿಮ್ಮಣ್ಣನ ಕಡೆಗೆ ಹೊರಳಿತು. ತಮ್ಮ ಸಾಮ್ರಾಜ್ಯಕ್ಕೆ ಈತನಿಂದ ವಿಶೇಷ ಸಹಾಯವಾಗಬಹುದೆಂದು ಈತನ ಧೀರವೃತ್ತಿ ವೀರಕಳೆಗಳಿಂದ ಗುರುತು ಹಿಡಿದು ಹೊಳಲಕೆರೆಯ ನಾಯಕತನವನ್ನು ಈ ತಿಮ್ಮಣ್ಣನಾಯಕನಿಗೆ ಕೊಡಿಸಿದನು. ಈತನು ವಿಜಯನಗರದ ರಾಯರ ವಿಶೇಷ ಗೌರವಕ್ಕೆ ಪಾತ್ರನಾಗಿ ಹಿರಿಯೂರ ನಾಯಕತನವನ್ನೂ ಕೆಲದಿನಗಳಲ್ಲಿ ಪಡೆದುಕೊಂಡನು. ಚಿಲ್ಲಹಳ್ಳಿಯ ಓದುವ ತಿಮ್ಮವ್ವ ಎಂಬವಳು ಈ ತಿಮ್ಮಣ್ಣನಾಯಕನನ್ನು ಮದುವೆಯಾದಳು.

ಮುಂದೆ ನಾಲ್ಕು ವರ್ಷಗಳವರೆಗೆ ತಿಮ್ಮಣ್ಣನಾಯಕನು ರಂಗಪಟ್ಟಣವನ್ನು ಕಟ್ಟಿಸಿದನು. ಆದರೆ ಎರಡು ವರುಷಗಳಲ್ಲಿಯೇ ತರೀಕೆರೆಯ ಪೂವಳ ಹನುಮಪ್ಪನು ಐದು ಗ್ರಾಮಗಳನ್ನು ತೆಗೆದುಕೊಂಡು, ಹೊಸದಾಗಿ ಕಟ್ಟಿದ ಆ ರಂಗಪಟ್ಟಣಕ್ಕೆ ಲಗ್ಗೆ ಹತ್ತಿದನು. ಇದನ್ನು ಕೇಳಿದೊಡನೆ ತಿಮ್ಮಣ್ಣನಾಯಕನು ಭುಗಿಭುಗಿಲೆಂದು ಸಿಟ್ಟಾಗಿ ಕಟ್ಟಿರುಳಲ್ಲಿಯೇ ಪಾಳಯವನ್ನೆತ್ತಿಕೊಂಡು ನೂಲೋಕಣಿವೆಯಲ್ಲಿ ಹಾಯ್ದು ದುರ್ಗದ ಗುಡ್ಡಕ್ಕೆ ಬಂದನು. ಅಷ್ಟರಲ್ಲಿ ವೈರಿಗಳು ಅದನ್ನು ಸೂರೆಗೊಂಡು ಹಾಳುಮಾಡಿದ್ದರು. ಮುಂದೆ ೩೫ ವರುಷಗಳ ಬಳಿಕ ತಿಮ್ಮಣ್ಣನಾಯಕನ ಮೊಮ್ಮಗನು ಮತ್ತೆ ಅದನ್ನು ಕಟ್ಟಿಸಿದನು. ರಂಗಪಟ್ಟಣವು

ಮುಗ್ಗಿದ ಬಳಿಕ ತಿಮ್ಮಣ್ಣನಾಯಕನು ಮೇಲ್ದುರ್ಗದಲ್ಲಿಯೇ ನಿಂತನು. ಅಲ್ಲಿ ಆತನಿಗೆ ಸಿದ್ಧಪುರುಷರ ದರ್ಶನವಾಯಿತು. ಸಳನಿಗೆ ಜಿನಮುನಿಯೂ ಹುಕ್ಕನಿಗೆ ವಿದ್ಯಾರಣ್ಯರೂ ಮಾರ್ಗದರ್ಶಕರಾದಂತೆ ತಿಮ್ಮನಾಯಕನಿಗೆ ಆ ಸಿದ್ಧಪುರುಷರು ಹಾದಿ ತೋರಿಸಿದರು. 'ಅರಿತು ನಡೆದರೆ ಆರುಪಟ್ಟು ಮರೆತು ನಡೆದರೆ ಮೂರುಪಟ್ಟು' ಎಂದು ಅವರು ಉಪದೇಶಿಸಿದರು. ತಿಮ್ಮಣ್ಣನಾಯಕನು ಆ ಸಿದ್ಧರ ಅಪ್ಪಣೆಯಂತೆ ಅಲ್ಲಿಯೇ ಇದ್ದು ಮೇಲ್ದುರ್ಗದ ಕೋಟೆಯನ್ನೂ ಅರಮನೆಯನ್ನೂ ಕಟ್ಟಿಸಿದನು.

ತಿಮ್ಮಣ್ಣನಾಯಕನು ಇನ್ನೂ ಪ್ರೌಢಾವಸ್ಥೆಯಲ್ಲಿ ಕಾಲಿಕ್ಕುತ್ತಿರುವಾಗಲೇ ತಾಳೀಕೋಟೆಯ ಕಾಳಗವಾಗಿ ವಿಜಯನಗರದ ಸಾಮ್ರಾಜ್ಯವು ನುಚ್ಚುನುರಿಯಾಯಿತು. ಆಗ ತಿಮ್ಮಣ್ಣನಾಯಕನ ತಂದೆಯವರು ಈ ಕಡೆ ಬಂದು ೮-೯ ವರುಷಗಳು ಮಾತ್ರವೇ ಆಗಿದ್ದವು. ಈತನ ಪಾಳಯವು ಚಿಕ್ಕದಾಗಿದ್ದುದರಿಂದ ಈತನಿಗೆ ಯುದ್ಧಕ್ಕೆ ಹೋಗುವ ಪ್ರಸಂಗ ಬರಲಿಲ್ಲ. ಜನರ ಕಣ್ಣಿಗೆ ಕಾಣುವಷ್ಟು ತಿಮ್ಮಣ್ಣನಾಯಕನು ಬಲಿತುದೆಂದರೆ ವಿಜಯನಗರವು ನಷ್ಟವಾದ ಬಳಿಕ. ಆಗಲೂ ವಿಜಯನಗರದ ಅರಸು ಮನೆತನದವರು ಬೇರೆ ಬೇರೆ ಕಡೆಗೆ ರಾಜಧಾನಿಗಳನ್ನು ಮಾಡಿಕೊಂಡು ಆಳುತ್ತಲೇ ಇದ್ದರು. ದಿನದಿನಕ್ಕೆ ಸೊರಗುತ್ತ ನಡೆದ ವಿಜಯನಗರದವರು ಬೆಳೆಯುತ್ತ ನಡೆದ ತಿಮ್ಮಣ್ಣನಾಯಕನನ್ನು ಮೆಚ್ಚಿಸಿಕೊಳ್ಳಬೇಕಾಯಿತು. ಅವರು ಅದಕ್ಕಾಗಿ ಚಿತ್ರದುರ್ಗ, ಮೇಲುದುರ್ಗಗಳ ನಾಯಕತ್ವವನ್ನು ತಿಮ್ಮಣ್ಣನಾಯಕನಿಗೆ ಕೊಟ್ಟರು. ನಾಯಕನಿಗೆ ಆ ವಿರೂಪಾಕ್ಷಜೋಯಿಸನ ಮಗ ಪರಶುರಾಮಪ್ಪನು ಸರ್ವಾಧಿಕಾರಿಯಾದನು. ಪರಶುರಾಮಪ್ಪನ ನಂಬಿಗೆಯ ವೃತ್ತಿಗೆ ಸಂತುಷ್ಟನಾದ ತಿಮ್ಮಣ್ಣನಾಯಕನು ಆತನ ಪರಂಪರೆಗೆಲ್ಲ "ಹರಿಯದ ಹಚ್ಚಡ ಮುರಿಯದ ಒಡವೆ" ಆಗಬೇಕೆಂದು ಕೆಲವು ಹಳ್ಳಿಗಳ ಸೇನುಭೋಗತನವನ್ನು ಆತನಿಗೆ ಕೊಟ್ಟನು. ಆ ಬಗ್ಗೆ ಶಿಖಾಮೊಹರು ರುಜುವಿನಿಂದ ಶಾಸನ ಬರೆದುಕೊಟ್ಟನು. ಇದು ತಿಮ್ಮಣ್ಣನಾಯಕನ ಆಯುಷ್ಯದ ಆದಿಭಾಗದ ಚರಿತ್ರೆಯಾಯಿತು.

ವಿಜಯನಗರದವರು ಈ ತಿಮ್ಮಣ್ಣನಾಯಕನಿಗೆ ಇಷ್ಟೊಂದು ಹೆಚ್ಚಳವನ್ನು ಕೊಟ್ಟುದು ಕೆಲವು ಕ್ಷುದ್ರರ ಹೊಟ್ಟೆಯಕಿಚ್ಚಿಗೆ ಕಾರಣವಾಯಿತು. ಅವರೆಲ್ಲ ರಾಯರ ಕಿವಿಯಲ್ಲಿ ಏನೇನು ಊದಿದರೋ ಏನೋ, ಇವನ ಮೇಲೆ ವಿಜಯನಗರದವರಿಗೆ ವೈಮನಸ್ಸು ಹುಟ್ಟಿತು. ತಿಮ್ಮಣ್ಣನಾಯಕನನ್ನು ಅಡಗಿಸಬೇಕೆಂದು ವಿಜಯನಗರ ಸಂಸ್ಥಾನದವರು ವೀರ ಸಾಳ್ವ ನರಸಿಂಹರಾಯನನ್ನು ದೊಡ್ಡ ದಂಡಿನೊಡನೆ ಕಳುಹಿದರು. ಆತನು ಬಿತ್ತರದಿಂದ ಬಂದು ದುರ್ಗವನ್ನು ಬಲವಾಗಿ ಸುತ್ತಿ ಮುತ್ತಿದನು. ಅಸಹಾಯ ಶೂರನಾದ ತಿಮ್ಮನಾಯಕನು ಪ್ರತೀಕಾರಕ್ಕೆ ಕೂಡಲೆ ಸಿದ್ಧನಾದನು. ಈ ಕದನಕ್ಕೆ ಮುಂಚೆಯೆ, ಮೊನೆಗಾರನಾದ ಈತನು ಪಟ್ಟ ಅನನ್ಯ ಸಾಹಸವೂ ಸಾಹಸಕ್ಕಿಂತ ಮಿಗಿಲಾಗಿ ತೋರ್ಪಡಿಸಿದ ಮನೋದಾರ್ಢ್ಯತೆಯೂ ಜನರನ್ನು ಬೆರಗುಗೊಳಿಸುವಂತಿವೆ. ನರಸಿಂಹರಾಯನ ದಂಡಾಳುಗಳೆಲ್ಲ ಮಲಗಿದ್ದೆ ಹೋಗಿದ್ದಾಗ ನಟ್ಟಿರುಳಿನಲ್ಲಿ ಈ ಗಂಡಾಳಾದ ತಿಮ್ಮಣ್ಣನಾಯಕನು ಆ ಬೀಡಿನೊಳಗೆ ಹೊಕ್ಕನು. ಆತನು ಅರಸಗುದುರೆಯ ಕಣ್ಣಿಯನ್ನು ಬಿಚ್ಚಿ ಅದನ್ನು ಓಡಿಸಿಕೊಂಡು ಬರುವವನಿದ್ದನು. ಸಪ್ಪಳಕ್ಕೆ ಲಾಯದವನಿಗೆ ಎಚ್ಚರವಾಗಿ ಆತನು ನಿದ್ದೆಗಣ್ಣಿನಲ್ಲಿ ಎದ್ದು ಕುದುರೆಯಕಡೆಗೆ ಬಂದನು. ನಾಯಕನು ಕುಳಿತಲ್ಲಿಯೇ ಒರಗಿಕೊಂಡುಮೇಲೆ ಹುಲ್ಲನ್ನು ಮುಚ್ಚಿಕೊಂಡನು. ಲಾಯದವನು ಅಲ್ಲಿಗೆ ಬಂದು ಕುದುರೆಯ ಜಗ್ಗಾಟದಿಂದ ಕಿತ್ತುಹೋಗಿರುವ ಗೂಟವನ್ನು ನೆಲದಲ್ಲಿ ಗಟ್ಟಿಯಾಗಿ ಬಡಿದು ಕುದುರೆಯನ್ನದಕ್ಕೆ ಮತ್ತೆ ಕಟ್ಟಿಹೋಗಿ ಮಲಗಿಕೊಂಡನು. ಆ ಗೂಟವು ನಾಯಕನ ಬಲದ ಅಂಗಯ್ಯಲ್ಲಿ ನಾಟಿ ನೆಲದಲ್ಲಿ ಸೇರಿಕೊಂಡಿತ್ತು! ಆದರೆ ತಿಮ್ಮಣ್ಣನಾಯಕನು ಮಿಟ್ಟುಮಿಸಗಲಿಲ್ಲ, ಹಾಯ್ ಎನ್ನಲಿಲ್ಲ. ತಿರುಗಿ ಕಾವಲುಗಾರನಿಗೆ ನಿದ್ರೆಹತ್ತುವವರೆಗೆ ಹಾಗೆ ಮಲಗಿದ್ದನು. ಆ ಬಳಿಕ ತನ್ನ ಎಡಗಯ್ಯಿಂದ ಸೊಂಟದಲ್ಲಿರುವ ಕತ್ತಿಯನ್ನು ತೆಗೆದುಕೊಂಡು ಬಲದ ಮುಂಗಯ್ಯನ್ನು ಕೊಯ್ದು ಹಾಕಿಬಿಟ್ಟನು. ಆ ಮೊಂಡಗಯ್ಗೆ ಬಟ್ಟೆಯನ್ನು ಸುತ್ತಿಕೊಂಡು ಮತ್ತೆ ಆ ಕುದುರೆಯನ್ನು ಬಿಚ್ಚಿಕೊಂಡು ಅದರ ಮೇಲೇರಿ ಓಡಿಸುತ್ತ ದುರ್ಗಕ್ಕೆ ನಡೆದನು. ಈ ಸಾಹಸ ಇಲ್ಲಿಗೇ ನಿಲ್ಲಲಿಲ್ಲ. ನರಸಿಂಗರಾಯನ ಅರಸಾನೆಯನ್ನು ಮಾವುತರು ನೀರು

ಕುಡಿಸುವುದಕ್ಕೆ ಕೆರೆಗೆ ತಂದರು. ಇದನ್ನು ಕಂಡು ಪಾಳಯಗಾರನು ಬಿಲ್ಲನ್ನು ಕಾಲಿನಲ್ಲಿ ಮೆಟ್ಟಿಹಿಡಿದು ಹೆದೆಗೆ ಅಂಬನ್ನೇರಿಸಿ ಆನೆಯ ಹಣೆಗೆ ಗುರಿಗಟ್ಟಿ ಎಡಗೈಯ್ಯಿಂದ ತುಯಿದು (ಎಳೆದು) ಬಿಟ್ಟನು. ತನ್ನ ಭ್ರೂಮಧ್ಯಕ್ಕೆ ತಾಗಿದ ಒಂದೇ ಒಂದು ಬಾಣದ ಏಟಿನಿಂದ ಆನೆ ಕಿರ್ರನೆ ಕಿರಚಿಕೊಂಡು ಬಿದ್ದು ಪ್ರಾಣಬಿಟ್ಟಿತು. ಇದರಿಂದ ನರಸಿಂಹರಾಯನು ಇನ್ನಷ್ಟು ರೇಗಿ ಮುತ್ತಿಗೆಯನ್ನು ಭದ್ರಪಡಿಸಿ ಲಗ್ಗೆಯಿಟ್ಟನು. ಒಕ್ಕಯ್ಯವನಾದರೂ ತಿಮ್ಮಣ್ಣನಾಯಕನ ಪರಾಕ್ರಮ ಮುಕ್ಕಾಗಿರಲಿಲ್ಲ. ಆತನು ಯುದ್ಧಕ್ಕೆ ಅಣಿಯಾದನು. ಅವನೊಡನೆ ಸಾಯಲು ಸಿದ್ಧರಾದ ವೀರರು ಕಠಾರಿ ಬರ್ಜಿಗಳನ್ನೂ, ಅಂಬುಬಿಲ್ಲುಗಳನ್ನೂ, ಕರ್ನಾಟಕ ಕೋವಿ ಫಿರಂಗಿಗಳನ್ನೂ, ಹರಪನಹಳ್ಳಿಯ ಬಾಣಗಳನ್ನೂ ಸಜ್ಜುಗೊಳಿಸಿಕೊಂಡು ಯುದ್ಧಕಣಕ್ಕಿಳಿದರು. ಅಸಾಮಾನ್ಯ ಶೂರನಾದ ನರಸಿಂಹರಾಯನಿಗೂ ಕದನ ಪ್ರಚಂಡನಾದ ತಿಮ್ಮಣ್ಣನಾಯಕನಿಗೂ ಕಾಳಗಕ್ಕೆ ಮೊದಲಾಯಿತು. ಕರ್ನಾಟಕ ಕೋವಿಗಳೂ ತೋಪುಗಳೂ ದಢಬಢಲ್ಲನೆ ಹಾರಿ ನರಸಿಂಗ ರಾಯನ ಸೇನೆಯನ್ನು ಹಾರಿಸಿದವು. ಕೋಟೆಯನ್ನು ನುಗ್ಗಬೇಕೆಂದು ಉರವಣೆಯಿಂದ, ಪಾಳಯಗಾರರನ್ನು ಬರ್ಜಿ ಕಠಾರಿಗಳಲ್ಲಿ ಇರಿದಿರಿದು ಒತ್ತಿ ಬರುತ್ತಿರುವ ಅರಿಬಲದಲ್ಲಿ ನಾಯಕನ ಕಡೆಯವರು ಹರಪನಹಳ್ಳಿಯ ಬಾಣಗಳನ್ನು ಉಪಯೋಗಿಸಿದರು. ಅವುಗಳು ವೈರಿಸಮೂಹವನ್ನು ಅಲಗಿನಿಂದ ಚುಚ್ಚಿಯೂ ಮದ್ದಿನ ಉರಿಯಿಂದ ಸುಡುತ್ತಲೂ ರಣರಂಗದಲ್ಲಿ ವಿಶೇಷವಾಗಿ ಹಾವಳಿ ಮಾಡಿದವು. ತಿಮ್ಮಣ್ಣನಾಯಕನು ನರಸಿಂಗ ರಾಯನ ಅರಸುಗುದುರೆಯನ್ನೇರಿ ಬರ್ಜಿಯ ಯುದ್ಧವನ್ನು ಮಾಡಿದನು. ವಿಜಯನಗರದ ಸೇನೆ ತಲ್ಲಣಿಸಿ ಬೆಂಗೊಟ್ಟಿತು. ನರಸಿಂಗರಾಯನ ಆಟೋಪವು ಕುಗ್ಗಿತು. ಆತನು ಮೋರೆ ತಗ್ಗಿಸಿಕೊಂಡು ಹಿಂತಿರುಗಬೇಕಾಯಿತು. ಅರಿರಾಜ ಮಾನಮರ್ದನನಾದ ತಿಮ್ಮನಾಯಕನು ಜಯಶೀಲನಾದನು. ಆದರೂ ಉಪ್ಪುಂಡ ಉಪಕಾರಕ್ಕಾಗಿ ಮತ್ತೂ ವಿಜಯನಗರದ ರಾಜರ ಅಧೀನನಾಗಿಯೇ ಇದ್ದನು.

ತಿಮ್ಮಣ್ಣನಾಯಕನು ಕೈಯಿಕ್ಕಿದ ಕಾಳಗಗಳಲ್ಲಿ ಆತನಿಗೆ ಸೋಲೆಂಬುದಿಲ್ಲ. ಆತನು ವಿಜಯನಗರದ ರಾಯರಿಗೆ ಕಲಬುರ್ಗೆಯು ಗೆಲಿದು ಕೊಟ್ಟನು. ಕಲಬುರ್ಗಿಯವರು ವಿಜಯನಗರದವರೊಡನೆ ಕಾಲುಕೆದರಿ ಜಗಳ ತೆಗೆದರು. ಅವರ ಬಿಂಕವನ್ನು ಹಿಂಗಿಸುವುದಕ್ಕಾಗಿ ರಾಯರು ಸಾಳ್ವ ನರಸಿಂಗರಾಯನನ್ನು ಮಹಾಬಲದೊಡನೆ ಕಳುಹಿದರು. ಆತನು ಬಂದು ಕಲಬುರ್ಗೆಗೆ ಲಗ್ಗೆಯಿಟ್ಟನು. ಆ ಕೋಟೆಯೊಳಗಿನ ದಳಪತಿಯು ಒಳ್ಳೇ ಘಟಕನಾಗಿದ್ದನು. ಇಬ್ಬರಲ್ಲಿಯೂ ಆರು ತಿಂಗಳವರೆಗೆ ಕಾದಾಟವಾಯಿತು. ನರಸಿಂಗರಾಯನ ದೋರ್ದಂಡಕ್ಕೆ ಅರಿಸೇನಾಧೀಶನ ದರ್ಪವು ಮಣಿಯಲಿಲ್ಲ. ಕಲಬುರ್ಗೆಯ ಮೇಲೆ ತಮ್ಮವರ ಕೈ ಏನೂ ನಡೆಯದಿದ್ದುದನ್ನು ಕಂಡು ವಿಜಯನಗರದರಾಯರು ಚಿಂತಾಕ್ರಾಂತರಾದರು. ಅವರಿಗೆ ತಿಮ್ಮಣ್ಣನಾಯಕನ ತೋಳಾರ್ಪಿನ ನೆನಪಾಯಿತು. "ನಿಮ್ಮ ಕೈಯನ್ನು ನೋಡಬೇಕೆಂದಿದ್ದೇವೆ. ಕಲಬುರ್ಗೆಗೆ ದಾಳಿಯಿಟ್ಟು ಅದನ್ನು ತೆಗೆದುಕೊಳ್ಳಬೇಕು'' ಎಂದು ರಾಯರು ಆತನ ಕಡೆಗೆ ಬರೆದು ಕಳುಹಿಸಿದರು. ತಿಮ್ಮಣ್ಣನಾಯಕನು ತನ್ನ ಪಾಳಯವನ್ನು ತೆಗೆದುಕೊಂಡು ಕಲಬುರ್ಗೆಯ ಮೇಲೆ ಸಾಗಿದನು. ಸಾಳ್ವ ನರಸಿಂಗರಾಯನ ಮುತ್ತಿಗೆಯನ್ನು ತೆಗೆಯಿಸಿ ಅವನು ತನ್ನ ದಂಡಿನೊಡನೆ ಕೋಟೆಯಮೇಲೆ ಏರಿಹೋದನು. ತನ್ನ ಬಲವನ್ನು ಎರಡಾಗಿ ವಿಂಗಡಿಸಿದನು. ಒಂದಕ್ಕೆ ತಾನು ಮುಂದಾಳು; ಇನ್ನೊಂದಕ್ಕೆ ಅಣ್ಣನಾದ ಓಬಳಣ್ಣ ಧುರೀಣ. ೨೦೦೦ ಹತ್ತಿಯ ಅಂಡಿಗೆಗಳನ್ನು ಅಗಳತೆಗೆ ಹಾಕಿಸಿ ಎರಡು ನಿಟ್ಟಿನಿಂದ ಲಗ್ಗೆ ಹತ್ತಿದರು. ಕೋಟೆಯ ಮೇಲಿನ ತೋಪುಗಳು ಅದ್ಭುತವಾದ ಧ್ವನಿಯಿಂದ ಹಗೆಗಳ ಮೇಲೆ ಕೆಂಡವನ್ನು ಕಾರಿದವು. ನಾಯಕನ ಪಾಳಯದವರ ಕೂರಂಬುಗಳು ಸುಯ್ಗುಟ್ಟುತ್ತ ಕಲಬುರ್ಗೆಯವರ ಎದೆಯನ್ನು ಚ್ಚಳಿಸಿದವು. ತಿಮ್ಮಣ್ಣನಾಯಕನು ಬರಿ ಎಡಗಯ್ಯಿಂದಲೇ ಮಹಾಪರಾಕ್ರಮವನ್ನು ಪ್ರಕಟಿಸಿದನು. ಕಲಬುರ್ಗೆಯವರ ಕೈಯಳವು ನಿಂತಿತು. ಇವರ ಕೈ ಬಲವಾಯಿತು. ೪-೫ ಗಳಿಗೆಯಲ್ಲಿ ತಿಮ್ಮಣ್ಣನಾಯಕನು ಕೋಟೆಯ ಬಾಗಿಲನ್ನು ತೆರೆದು ತುಳಿಲಾಳ್ಗಳೊಡನೆ ಒಳನುಗ್ಗಿದನು. ಒಳಗೆ ಯುದ್ಧವು ಮತ್ತೂ ಮುಂದರಿಯಿತು. ವೀರರ ಬಿಸಿನೆತ್ತರು ಮೊಣಕಾಲು ಮಟ್ಟ

ಹರಿದು ಬಾಗಿಲಿನಿಂದ ಕೆಳಕ್ಕೆ ಧುಮುಕುತ್ತಿತ್ತು. ಕಲಬುರ್ಗೆಯವರ ಸೊಕ್ಕು ಅದರೊಡನೆ ತೇಲಿಹೋಯಿತು. ಅವರು ಆಯುಧಗಳನ್ನು ಕೆಳ ಗಿರಿಸಿದರು. ತಿಮ್ಮಣ್ಣನಾಯಕನು ಧರ್ಮಕಹಳೆಯನ್ನು ಹಿಡಿಸಿದನು. ಕದನವು ನಿಂತಿತು. ಈ ವಿಜಯವನ್ನು ಕೇಳಿ ರಾಯರಿಗೆ ಹಿಡಿಸಲಾರ ದಷ್ಟು ಆನಂದವಾಯಿತು. ಅವರು ಆತನನ್ನು ಕರೆಯಿಸಿಕೊಂಡು ಮೂರು ತಿಂಗಳವರೆಗೆ ಅರಮನೆಯಲ್ಲಿ ಆದರದಿಂದ ಇರಿಸಿಕೊಂಡಿದ್ದರು. ತಿಮ್ಮಣ್ಣ ನಾಯಕನಿಗೆ ಚಿನ್ನದ ಮುಲಾಮಿನ ದೊಡ್ಡ ಶಂಖ ಚಕ್ರದ ಜೊತೆ ಯೊಂದನ್ನೂ, ಅಂದಳ ಮತ್ತು ಮೊಸಳೆಬಾಯಿ ಜೋಡೊಂದನ್ನೂ ಫಿರಂ ಗಿಯೊಂದನ್ನೂ ಸತ್ತಿಗೆಯೊಂದನ್ನೂ ಚಿನ್ನದ ಹಸ್ತವೊಂದನ್ನೂ ಹಗಲು ದೀವಟಿಗೆಯೊಂದನ್ನೂ ಅಮೂಲ್ಯವಾದ ಉಡುಗರೆಯನ್ನೂ ವಿಜಯನಗ ರದ ರಾಯರು ಮೆಚ್ಚಾಗಿಕೊಟ್ಟರು. ಅಲ್ಲದೆ “ ಹಗಲು ಕಗ್ಗೋಟಿ ಮಾನ್ಯ’’ ಎಂಬ ಬಿರುದನ್ನೂ ಬಿರುದನ್ನು ಹೊಗಳಲಿಕ್ಕೆ ಭಟರನ್ನೂ ಕೊಟ್ಟರು.

ಈ ಪ್ರಕಾರವಾಗಿ ತಿಮ್ಮನಾಯಕನು ನಾಡಿನಲ್ಲಿ ತನ್ನ ಬೆಳಕನ್ನು ಕೆಡವಿ ವಿಜಯನಗರದವರಲ್ಲಿ ಉನ್ನತ ಪದವಿಯನ್ನು ಪಡೆಯುತ್ತಿರುವು ದನ್ನು ಕುಹಕಿಗಳಿಂದ ಸೈರಿಸಿಕೊಳ್ಳುವುದಾಗಲಿಲ್ಲ. ಅವರು ರಾಯರ ಕಡೆಗೆ ಬಹಳವಾಗಿ ಇವನ ವಿರುದ್ಧ ಚಾಡಿಯನ್ನು ದೂರಿದರು. ಈ ಕ್ಷುದ್ರಗಳಿಗೆಲ್ಲ ರಾಯರು ಕಿವಿಗೊಟ್ಟು ತಿಮ್ಮಣ್ಣನಾಯಕನನ್ನು ವಿಜಯ ನಗರಕ್ಕೆ ಕರೆಯಿಸಿಕೊಂಡು ಬಂಧಿಸಿ ಸೆರೆಯಲ್ಲಿಟ್ಟನು. ಆತನ ಸಂಗಡಿಗ ರಾಗಿ ಬಂದಿದ್ದ ಅಣ್ಣನಾದ ಓಬಳಣ್ಣನೂ ದಾದನಾಯಕನೂ ಇನ್ನು ಕೆಲವರೂ ಆತನೊಡನೆ ಬಂಧನಕ್ಕೊಳಗಾದರು. ಅವರು ತಲೆತಪ್ಪಿಸಿ ಕೊಂಡು ದುರ್ಗವನ್ನು ಸೇರಿದರು. ಆದರೆ ತಿಮ್ಮಣ್ಣನಾಯಕನು ರಾಜಾ ಜ್ಞೆಯನ್ನು ಮೀರಬಾರದೆಂದು ವಿಜಯನಗರದಲ್ಲಿಯೇ ಇದ್ದು ಮರಣ ಹೊಂದಿದನು.

ಅರಿಶಿರಮರ್ದಿನಿಯಾದ

ಓಬವ್ವ

(೧೭೭೯)

ಘಟಪಟ ನ್ಯಾಯದಲ್ಲಿ ತೊಡಗಿದ ವೇದಾಂತಿಗಳು ಜೀವವು ಅಮರವೆಂದು ಸಿದ್ಧಪಡಿಸಲಿಕ್ಕೆ ಎಷ್ಟು ಪ್ರಯತ್ನಪಟ್ಟರೂ, ಎಲ್ಲಿಯವರೆಗೆ ಆ ತತ್ವವು ಆಚರಣೆಯಲ್ಲಿ ಇಳಿದಿಲ್ಲವೋ ಅಲ್ಲಿಯವರೆಗೆ ಆ ಒಣ ವೇದಾಂತದ ಮಾತಿನಿಂದೇನೂ ಪ್ರಯೋಜನವಾಗುವುದಿಲ್ಲ. ಅದೇ, ಯಾರ ಆಚರಣೆಯಲ್ಲಿ ಜೀವವು ಅಮರವೆಂಬುದು ಇಳಿದಿರುವುದೋ ಅವರು ಬಾಯಿಯಿಂದ ವೇದಾಂತದ ಗುಡ್ಡಗುಡ್ಡದಂಥ ಮಾತುಗಳನ್ನಾಡದಿದ್ದರೂ ಅವರು ನಿಜವಾದ ವೇದಾಂತಿಗಳೇ. ಹಿಂದೂಧರ್ಮವು ಹಲಕೆಲವು ತತ್ವಗಳನ್ನು ಸಾಮಾನ್ಯ ಜನರ ಮನದಲ್ಲಿ ಕೂಡ ಅತ್ಯಂತ ಆಳವಾಗಿ ನಡಿಸಿಟ್ಟು, ಆ ತತ್ವಗಳಿಗೋಸ್ಕರ ಅವರು ಪ್ರಾಣವನ್ನು ಅರ್ಪಿಸಲು ಕೂಡ ಸಿದ್ಧರಾಗುವಂತೆ ಮಾಡಿದೆ. ಪತಿಯ ಸಲುವಾಗಿಯೂ ಸ್ವಾಮಿಯ ಸಲುವಾಗಿಯೂ ಮನುಷ್ಯನು ತನ್ನ ಪ್ರಾಣವನ್ನು ಕೊಡಬೇಕೆಂಬ ಮಾತು ಒಂದು ಕಾಲದಲ್ಲಿ ಈ ದೇಶದಲ್ಲಿ ಸಾಮಾನ್ಯರೆಂದು ತೋರುವವರಲ್ಲಿಯೂ ಆಳವಾಗಿ ಊರಿಕೊಂಡಿತ್ತು.

ಚಿತ್ರದುರ್ಗದಲ್ಲಿ ೧೮ನೆಯ ಶತಮಾನದಲ್ಲಿ ಆಗಿಹೋದ ಓಬವ್ವ ಎಂಬ ಸಾಮಾನ್ಯ ಹೆಣ್ಣುಮಗಳು ಇದೇ ಮಾದರಿಯವಳು. ಅವಳು ಓದಲಿಕ್ಕೆ ಕಲಿತವಳಲ್ಲ. ಅವಳು ಗಹನಪಂಡಿತಳಲ್ಲ; ಉಚ್ಚವೆನಿಸಿಕೊಳ್ಳುವ ಕುಲದಲ್ಲಿ ಹುಟ್ಟಿದವಳೂ ಅಲ್ಲ. ಆದರೆ, ಅವಳಿಗೆ ಒಂದು ಮಾತು ಪೂರ್ಣ ಮನವರಿಕೆಯಾಗಿತ್ತು. ಅದೇನೆಂದರೆ ಶತ್ರುಗಳು ಕೋಟೆಯಲ್ಲಿ ಕಳ್ಳತನ

ದಿಂದ ಹೊಕ್ಕರೆ ಜೀವದ ಹಂಗು ತೊರೆದು ಅವರನ್ನು ತಡೆಯಬೇಕೆಂಬ ಮಾತು. ಆದುದರಿಂದ, ಅವಳು ಚಿತ್ರದುರ್ಗದ ಕೋಟೆಯಲ್ಲಿ ಹೈದರ ಅಲ್ಲಿಯ ದಂಡು ಹೊಕ್ಕು ಹಾವಳಿ ಮಾಡುತ್ತಿರುವಾಗ, ಒಬ್ಬಳೇ ಧೈರ್ಯ ದಿಂದ ಶತ್ರುಗಳನ್ನು ಕೇವಲ ಒಂದು ಒನಿಕೆಯಿಂದ ತಡೆದು ಹಿಡಿದು, ಕೊನೆಗೆ ವೀರಸ್ವರ್ಗವನ್ನು ಪಡೆದಳು!

ಈ ಒಬವ್ವನು ಚಿತ್ರದುರ್ಗದಲ್ಲಿದ್ದ ಒಬ್ಬ ಕಹಳೆಯವನ ಹೆಂಡತಿ. ದುರ್ಗದ ಸಾಮಾನ್ಯ ನಿವಾಸಿಗಳಲ್ಲೊಬ್ಬಳು. ಅವಳಿಗೆ ದೇಶಾಭಿಮಾನ, ದೇಶಸೇವೆ ಇವುಗಳ ಬಗ್ಗೆ ಯಾರೂ ಉದ್ದುದ್ದವಾದ ಉಪದೇಶವನ್ನು ಮಾಡಿರಲಿಲ್ಲ. ಇವರು ನಮ್ಮವರು, ಇವರು ನಮ್ಮ ಶತ್ರುಗಳು ಎಂಬು ದಿಷ್ಟೇ ಅವಳಿಗೆ ಗೊತ್ತು. ಆದರೆ, ಮಿಕ್ಕವರಂತೆ ಅವಳು ಪ್ರಸಂಗ ಒದ ಗಿದಾಗ ಜೀವಕ್ಕೆ ಹೆದರಿ ಹಿಂಜರಿಯುವ ಹೆಣ್ಣುಮಗಳಲ್ಲ. ಸಂಕಟ ಸಮಯದಲ್ಲಿ, ನಾನೀ ಎನ್ನುವ ಗಂಡುಗಲಿಗಳಿಗಿಂತಲೂ ಈ ಹೆಣ್ಣುಗಲಿಯು ಹೆಚ್ಚಿನ ಶೌರ್ಯವನ್ನು ತೋರಿಸುವ ಧೈರ್ಯವುಳ್ಳವಳು. ಸಿಂಹವು ಹೆಣ್ಣಾ ದರೇನು ಗಂಡಾದರೇನು? ಅದರ ವಿಕ್ರಾಂತವು ಯಾವಾಗಲೂ ಜಾಜ್ವಲ್ಯ ಮಾನವಾಗಿಯೇ ಇರುವುದು. ದುರ್ಗವನ್ನು ಹೈದರ ಅಲ್ಲಿಯು ಮುತ್ತಿ ದಾಗ ಈ ಸಿಂಹಿಣಿಯು ತನ್ನ ತೋಳ್ಬಲ್ಪಿನಿಂದ ಕೆಲವು ಕಾಲ ಹೈದರ ಅಲ್ಲಿಯ ಸೇನಾಶರಧಿಯನ್ನು ತಡೆದುಹಿಡಿದಳು.

ಒಂದಕ್ಕೊಮ್ಮೆ ಹೈದರನು ವಿಪುಲ ವೀರಸನ್ನಾಹದೊಡನೆ ಚಿತ್ರ ದುರ್ಗವನ್ನು ಮುತ್ತಿ, ಪಾಳಯಗಾರನಾದ ಕಡೆಯ ಮದಕರಿನಾಯಕ ನೊಂದಿಗೆ ಅತಿ ವಿಕ್ರಮದಿಂದ ಕಾದಿ, ಕೋಟೆಯನ್ನು ತೆಗೆದುಕೊಳ್ಳಲಿ ಕ್ಕಾಗದೆ ನಿರಾಶೆ ಹೊಂದಿ ಹಿಂದಿರುಗಿದ್ದನು. ಆಬಳಿಕ, ಆತನು ತನ್ನ ಮಗನಾದ ಟೀಪುವನ್ನು ೨೦೦೦ ಕುದುರೆ ದಳದೊಡನೆ ಚಿತ್ರದುರ್ಗದ ಮೇಲೆ ದಾಳಿ ಇಡುವುದಕ್ಕೆ ಕಳುಹಿದನು. ಆಗ ಕೂಡ, ಕೋಟೆಯು ಶತ್ರುಗಳ ಕೈವಶವಾಗಲಿಲ್ಲ. ಹೈದರನು ಮತ್ತೆ ಒಂದು ಲಕ್ಷ ತುಳಿಲಾಳು ಗಳನ್ನು ಕೂಡಿಕೊಂಡು ದುರ್ಗದ ಮೇಲೆ ದಾಳೀಮಾಡಿದನು. ಪಾಳೆಯ ಗಾರನ ದಂಡೂ, ಕೋಟೆಯನ್ನೇರಲಿಕ್ಕೆ ಹವಣಿಸುವ ಹಗೆಗಳನ್ನು ಕತ್ತರಿಸ

ತೊಡಗಿತು. ಹೈದರನ ದಂಡಿನವರು ಕಡುತರವಾಗಿ ಹೊಯ್ದಾಡಿದರೂ ಅವರಿಗೆ ಕೋಟೆಯನ್ನು ನುಗ್ಗಲು ಸ್ವಲ್ಪವೂ ಆಸ್ಪದ ಸಿಕ್ಕಲಿಲ್ಲ. ಆತನ ಸೈನ್ಯದಲ್ಲಿ ಅನೇಕರು ಸತ್ತುಹೋಗಿ, ಕಂದುಕವೆಲ್ಲ ಹೆಣದಲ್ಲಿ ಮುಚ್ಚಿ ಹೋಯಿತು. ಎಷ್ಟು ಗುಂಡುಗಳನ್ನು ಹೊಡೆದರೂ ಕೋಟೆ ತುಸುವಾದರೂ ಜಗ್ಗಲಿಲ್ಲ. ಕೋಟೆಯ ಮೇಲಿದ್ದವರ ಏಟುಗಳನ್ನು ತಾಳಲಾರದೆ, ಹೈದರನ ಸೇನೆ ಹಿಂದೆಗೆಯ ತೊಡಗಿತು. ಪಾಳಯಗಾರನ ಪೌರುಷಕ್ಕೆ ಹೈದರನು ಬೆರಗಾಗಿ, ಕೋಟೆಯನ್ನು ಕೈವಶಮಾಡಿಕೊಳ್ಳುವುದಕ್ಕೆ ಬೇರೆ ಉಪಾಯವನ್ನು ಯೋಚಿಸುವ ಯೋಚನೆಯಲ್ಲಿ ತೊಡಗಿದನು. ಕೋಟೆಯನ್ನು ಒಡೆಯುವುದಂತೂ ಅಸಾಧ್ಯವಾಯಿತು. ಬೇರೆ ಉಪಾಯವೆಂದರೆ, ಕೋಟೆಯಲ್ಲಿ ಕಳ್ಳತನದಿಂದ ನುಗ್ಗಲು ಯತ್ನಿಸುವುದು. ಆದುದರಿಂದ, ಆತನು ಕೋಟೆಯನ್ನು ಸೇರುವುದಕ್ಕೆ ಎಲ್ಲಿಯಾದರೂ ಕಳ್ಳದಾರಿಯೇನಾದರೂ ಉಂಟೋ ಹೇಗೆಂಬುದನ್ನು ತಿಳಿದುಕೊಳ್ಳುವುದನ್ನು ಗೊತ್ತುಪಡಿಸಿದನು. ಆತನ ದಂಡಿನವರು ಕೋಟೆಯನ್ನು ಏರಿಹೋಗಲಿಕ್ಕೆ ಎಲ್ಲಿಯಾದರೂ ಒಂದು ಕಳ್ಳಹಾದಿಯಿರುವುದೋ ಎಂದು ನೋಡಲಾರಂಭಿಸಿದರು. ಹೈದರ ಅಲ್ಲಿಯ ಬೇಹುಗಾರರು ವೇಷಗಳನ್ನು ಹಾಕಿಕೊಂಡು ಬೆಟ್ಟದ ಸುತ್ತಲು ತಿರುಗುವಾಗ ಒಬ್ಬ ಹೆಂಗುಸು ಮಡಕೆಯಲ್ಲಿ ಮೊಸರನ್ನು ತೆಗೆದುಕೊಂಡು ಒಂದು ಬಂಡೆಯ ಸಂದಿಯಲ್ಲಿ ನುಸುಳಿ ಕೋಟೆಯ ಮೇಲೆ ಏರಿಹೋದುದನ್ನು ಕಂಡರು. ಈ ಸುಳುವನ್ನು ತಿಳಿದು ಹೈದರನ ದಂಡಿನವರು ಆ ಕಡೆ ಕೋಟೆಗೆ ಏಣಿ, ಉಡು ಮೊದಲಾದುದನ್ನು ಏರಿಸಿ ಲಗ್ಗೆ ಹತ್ತಿದರು. ಆಗ, ಅವರಿಗೆ ಒಂದು ದೊಡ್ಡಬಂಡೆಗಲ್ಲಿನಲ್ಲಿ ಒಂದು ಚಿಕ್ಕ ಸಂದು ಇದ್ದುದು ಕಾಣಿಸಿತು. ಅದರಲ್ಲಿ ಒಬ್ಬ ಮನುಷ್ಯನು ಹೊಟ್ಟೆ ಹೊಸೆದುಕೊಂಡು ಹೋಗುವುದಕ್ಕೆ ಮಾತ್ರ ಅನುವು ಇತ್ತು. ಒಳಗೆ ದಟ್ಟವಾದ ಕತ್ತಲೆ. ಬಂಡೆಗಲ್ಲಿನ ಸಂದಿಯೊಳಗಿಂದ ಮೇಲಕ್ಕೇರಿ ಹೋಗುವ ಉದ್ದೇಶದಿಂದ, ಅನೇಕ ವೀರರು ಒಬ್ಬೊಬ್ಬರಾಗಿ ಒಳಗೆ ನುಗ್ಗಿದರು. ಆ ಬಂಡೆಯ ಮೇಲ್ಗಡೆಗೆ ಈ ಓಬವ್ವನ ಗಂಡನಾದ ಕಹಳೆಯವನು ಇರುವ ಸ್ಥಳ. ಆತನು ತನ್ನ ಕೆಲಸವನ್ನು ಮುಗಿಸಿಕೊಂಡು ಗುಡಿಸಲಿಗೆ ಊಟಕೆ ಹೋಗಿದ್ದನು. ಓಬವ್ವನು ಗಂಡನಿಗೆ ಊಟಕ್ಕೆ ಬಡಿಸಿ, ನೀರು ತರುವು

ದಕ್ಕೆ ಬಂಡೆಗಲ್ಲಿನ ಸಮೀಪಕ್ಕೆ ಇರುವ ಒಂದು ಕೊಳಕ್ಕೆ ಹೋದಳು. ಆಗ, ಅವಳಿಗೆ ಆ ಬಂಡೆಗಲ್ಲಿನ ಸಂದಿಯೊಳಗಿಂದ ಯಾರೊ ಮೇಲಕ್ಕೇರಿ ಬರುವ ಸಪ್ಪಳ ಕೇಳಿಸಿತು, ಶತ್ರುಗಳಿಗೆ ಕಳ್ಳಕಂಡಿಯು ಗೊತ್ತಾಯಿತೆಂದೂ ಅವರು ಮೇಲಕ್ಕೇರಿ ಬಂದು ಕೋಟೆಯನ್ನು ಹೊಕ್ಕರೆ ಸರ್ವವೂ ನಾಶವಾಗುವುದೆಂದೂ ತರ್ಕಿಸಿ, ಅವಳು ತನ್ನ ಗುಡಿಸಲಿಗೆ ಧಾವಿಸಿದಳು. ಅಷ್ಟರಲ್ಲಿ ಗಂಡನು ಅಲ್ಲಿ ಇರಲಿಲ್ಲ. ಆತನು ಊಟಮಾಡಿ ಹೊರಟು ಹೋಗಿದ್ದನು. ಇನ್ನು ಆತನನ್ನು ಹುಡುಕುತ್ತ ಹೋಗುವುದು ವಿಹಿತವಲ್ಲವೆಂದು ಬಗೆದು, ಆ ವೀರಳು ಗುಡಿಸಲಿನೊಳಗಿದ್ದ ಒಂದು ಒನಕೆಯನ್ನೆತ್ತಿಕೊಂಡು ಓಡಿ ತಿರುಗಿ ಆ ಬಂಡೆಗಲ್ಲಿನ ಬಾಯಿಗೆ ಬಂದು ನಿಂತುಕೊಂಡಳು. ಆ ಸಂದಿಯೊಳಗಿಂದ ಒತ್ತೊತ್ತಿಬರುವ ಕಟ್ವಾಳುಗಳನ್ನು ಒಬ್ಬೊಬ್ಬನ್ನುರತನ್ನಕೈವನಿಕೆಯಿಂದ ಕುಟ್ಟಿ ನೆಲಕ್ಕೆ ಕೆಡುಹಿದಳು. ಅಲ್ಲಿ ಶತ್ರುಗಳ ಹೆಣದ ದೊಡ್ಡದೊಂದು ರಾಶಿ ಬಿದ್ದಿತು. ಶತ್ರುಗಳನ್ನು ವನಕೆಯಿಂದ ಕುಟ್ಟಿಕುಟ್ಟಿ ಓಬವ್ವನ ಕೈಗಳು ಸೋತುಹೋದುವು. ಆದರೆ, ಮಾಡುವುದೇನು? ಒಂದುಕ್ಷಣ ಕೈ ನಿಲ್ಲಿಸಿದ್ದರೆ ಶತ್ರುಗಳು ಏರಿಬರುತ್ತಿದ್ದರು. ಮಿಕ್ಕವರನ್ನು ಕರೆಯಲು ಅವಕಾಶವಿರಲಿಲ್ಲ. ಹೀಗೆ ಬಹುಕಾಲದವರೆಗೆ ಅವಳು ತನ್ನ ಮುಸುಲಾಯುಧದಿಂದ ಯುದ್ಧಮಾಡಿ ಶತ್ರುಗಳನ್ನುಯಮಸದನಕ್ಕಟ್ಟಿದಳು. ಅಷ್ಟರಲ್ಲಿ, ಆಕೆಯ ಗಂಡನು ಅವಳನ್ನುಹುಡುಕವುದಕ್ಕೆಂದು ಬಂದು ನೋಡುತ್ತಾನೆ! ಓಬಿಯ ಮೈಕೈಗಳು ರಾಮಾರಕ್ತವಾಗಿ ಹೋಗಿದ್ದುವು. ಅವಳ ಕಣ್ಣೆದುರಿಗೆ ಅವಳಿಗೆ ಶತ್ರುಗಳೇ ಕಾಣುತ್ತಿದ್ದರಲ್ಲದೆ ಮತ್ತಾರೂ ಕಾಣುತ್ತಿರಲಿಲ್ಲ. ಗಂಡನು ಬಂದರೂ ಅವಳು ಅವನನ್ನುಗುರುತಿಸದೆ, ಆತನೂ ಶತ್ರುವಿನ ಕಡೆಯವನೆಂದೇ ತಿಳಿದು ಅವಳು ಆತನ ಮೇಲೆ ವೀರಾವೇಶದಿಂದ ಏರಿಹೋದಳು. ಈ ಸಂಧಿಯನ್ನು ಸಾಧಿಸಿ ಶತ್ರುಗಳು ಆ ಸಂದಿಯೊಳಗಿಂದ ಏರಿ ಬಂದು ಓಬ್ಬವ್ವನನ್ನು ಅಟ್ಟಿಕೊಂದರು. ಈ ಬಗೆಯಾಗಿ, ಓಬವ್ವನು ಅತುಳವಾದ ಶೌರ್ಯವನ್ನು ತೋರಿಸಿ, ತನ್ನ ದೊರೆಯ ಕೋಟೆಯನ್ನು ಉಳಿಸುವುದಕ್ಕೆ ತನ್ನ ಜೀವದ ಬಲಿಯನ್ನು ಕೊಟ್ಟಳು!

ಆಧಾರ ಗ್ರಂಥಗಳು

1. Inscriptions from Mysore and Coorg by Mr. Rice.
2. Epegraphia Karnatica volumes.
3. Epegraphia Indica volumes.
4. Ancient History of the Deccan by G. Jouveau-Deebrevil.

೫. ಪಾಳಯಗಾರರು ಎಂ. ಎಸ್. ಪುಟ್ಟಣ್ಣ ಬಿ. ಎ.,

೬. ಚಿತ್ರದುರ್ಗದ ಪಾಳಯಗಾರರು ಎಂ. ಎಸ್. ಪುಟ್ಟಣ್ಣ ಬಿ. ಎ.,

೭. ಕರ್ನಾಟಕ ಸಾಮ್ರಾಜ್ಯ ಸಂಪುಟ ೧ ಮತ್ತು ೨ ರಾ. ಹ. ದೇಶಪಾಂಡೆ ಎಂ. ಎ., ಧಾರವಾಡ.

೮. ಕರ್ನಾಟಕ ಕವಿಚರಿತೆ ಭಾಗ ೧-೨-೩ ಶ್ರೀ ಆರ್. ನರಸಿಂಹಾಚಾರ್ಯ ಎಂ. ಎ.,

9. Mythic society Journal vol. XX.

10. Ancient India by S. Krishnaswami Iyengar.

೧೧. ಕಂಠೀರವ ವಿಜಯ—ಗೋವಿಂದ ವೈದ್ಯ.

೧೨. ಕನ್ನಡ ಐದನೆಯ ಪುಸ್ತಕ (ಮೈಸೂರ ಪ್ರಾಂತದ್ದು.)

೧೩. ಮಹಿಸೂರು ಸಂಸ್ಥಾನದ ಚರಿತ್ರ—ಎಂ. ಶ್ಯಾಮರಾವ ಎಂ. ಎ.,

14. A forgotten Empire-Robert sewell.

ಶಬ್ದಕೋಶ.

ಅ

ಅಗುರ್ವು = ಘೋರ ರೂಪ, ಅಂಜಿಕೆ ಬರುವಂಥ ಆಕಾರ.
ಅಗ್ರಾಹವ = ಮುಖ್ಯಕಾಳಗ.
ಅಂಕಚೇರಿಯರು = ಶೂರರು.
ಅಂಗವಣೆ = ಕೌಶಲ್ಯ, ಚಾತುರ್ಯ, ಸಾಧನ.
ಅಟ್ಟವಣಿಗೆ = ಅಟ್ಟ. ಅಟ್ಟಣ.
ಅಣ್ಮು = ಪರಾಕ್ರಮ, ಸಾಮರ್ಥ್ಯ.
ಅಣೆದು = ತಾಗಿ (ಅಣೆ=ತಾಕು).
ಅದಟು, ಅಧಟು = ಶೌರ್ಯ, ಧಿಟ್ಟತನ.
ಅವಷ್ಟಂಬ = ಆಶ್ರಯ.
ಅಳ್ಕು = ನಿರ್ವೀರ್ಯವಾಗು.
ಅಳುಕಿಸು = ಅಂಜಿಸು.

ಆ

ಆಘಾಟ = ಎಲ್ಲೆ, ಸೀಮೆ, ಮರ್ಯಾದೆ.
ಆರ್ದಾರ್ದು = ಗರ್ಜಿಸಿ ಗರ್ಜಿಸಿ (ಆರ್=ಕೂಗು, ಧ್ವನಿಮಾಡು).
ಆಂತವರು = ಇದಿರಾದವರು. ಪ್ರತಿಭಟಿಸಿದವರು.
ಆಯತ = ಅಳತೆ, ಪ್ರಮಾಣ.
ಆರ್ಪು = ಶೌರ್ಯ.
ಆಳ್ದನು = ಆಳುವವನು, ಒಡೆಯನು.
ಆಳ್ವರಿ = ಪ್ರಾಕಾರ, ಸುತ್ತಲಿನ ಗೋಡೆ.

ಇ

ಇಟ್ಟಣಿಸಿ = ಗುಂಪಾಗಿ ಬಂದು.

ಈ

ಈಳ್ದುಕೊಂಡು = ಸೆಳೆದುಕೊಂಡು.

ಉ

ಉಚ್ಚಳಿಸು = ಒತ್ತರದಿಂದ ಹೊರಗೆಬರು.
ಉಡುಗಿಸು = ಕುಂಠಿತವಾಗಿ ಮಾಡು.
ಉಬ್ಬುಗುದುರೆಗಳು = ಸೊಕ್ಕಿದ ಕುದುರೆಗಳು.
ಉರ್ಕು = ಸಾಮರ್ಥ್ಯ.

ಎ

ಎಡವಟ್ಟಾದ = ಅಡ್ಡಾಡಿ, ಅಡ್ಡಹಾದಿ ಹಿಡಿಯುವ.

ಒ

ಒಕ್ಕಲಿಕ್ಕಿ = ಚಲ್ಲಾಪಿಲ್ಲಿಯಾಗಿ ಮಾಡಿ.
ಒಕ್ಕೈಯವ = ಒಂದೇ ಕೈಯುಳ್ಳವ.
ಒನ್ನುಡಿ = ಒಂದೇ ನುಡಿ, ಏಕಭಾಷೆ.
ಒಳ್ಪು = ಒಳುಪು, ಕೆಚ್ಚು, ಗೌರವ.

ಓ

ಓಗಡಿಸು = ಓಕರಿಸು. ಕುಂದು.

ಕ

ಕಗ್ಗೊಲೆಯಕಾಳಗ = ಅತ್ಯಂತ ಕೊಲೆಯಾದ ಕಾಳಗ.
ಕಟಕ = ಸೈನ್ಯ.
ಕಟ್ಟಾಜ್ಞಾಣತಿ = ಕಟ್ಟಪ್ಪಣೆ.
ಕಟ್ಟಾಳುತನ = ಬಂಟತನ.
ಕಡಂಗಿ = ಹುರುಪುಗೊಂಡು, ರಭಸದಿಂದ.

ಕಡಿಕಡಿಯಾಗು = ತುಂಡು ತುಂಡಾಗು.
ಕಡಿಖಂಡವಾಗಿ = ಕಡಿದುತುಂಡಾಗಿ.
ಕಡೆಗಾಲ = ಪ್ರಳಯಕಾಲ.
ಕಣೆ = ಬಾಣ.
ಕಂಪಳ = ಗುಂಪು.
ಕರಡ = ಒಣ ಹುಲ್ಲು.
ಕರವತ್ತ = ಕರಗಸ.
ಕರವಾಳ = ಕತ್ತಿ.
ಕರಾಳಾಸಿ = ಉಗ್ರವಾದ ಕತ್ತಿ.
ಕವರ್ದು = ಸುಲಿಗೆ ಮಾಡಿ, ಒತ್ತಾಯದಿಂದ ತೆಗೆದುಕೊಂಡು.
ಕವಳಿಸು = ನುಂಗು.
ಕುತ್ತಿ = ಹಿಚುಕಿ.
ಕುಂಭಿ = ಆನೆ.
ಕೂರಾದ = ಹದನವಾದ.
ಕೆಚ್ಚಾಳು = ವೀರ.
ಕೆನ್ನೀರು = ರಕ್ತ.
ಕೈಸುರಿಗೆ = ಕೈಗತ್ತಿ, ಚಿಕ್ಕಕತ್ತಿ.
ಕೊಳಗುಳ = ಕಾಳಗ, ಯುದ್ಧ.
ಕೋಟಜ.= ಕಪ್ಪು, ಕರ.

ಗ

ಗಂಡ = ವೀರ, ಶತ್ರು, ಕಲಿ.
ಗಂಡಪೆಂಡಾರ = ಒಂದು ತರಹದ ಆಭರಣ.
ಗಂಡುದೋರ್ಪರಿಗೆಮಾರಿ = ಪೌರುಷದ ಬಿಂಕವನ್ನು ತೋರಿಸುವವರಿಗೆ ಶತ್ರು.
ಗಾಂಗೇಯ = ಭೀಷ್ಮ.
ಗೊಂದಳಿಸಿ = ಗಜಬಜಿಸಿ. ಗುಂಪುಗೂಡಿ.

ಘ

ಘಟಕ = ಗಟ್ಟಿಗ.
ಘಟಿಕಾಸ್ಥಾನ = ಪಾಠಶಾಲೆ.
ಘರಟ್ಟ = ಬೀಸುಗಲ್ಲು.

ಚ

ಚಲದಂಕಮಲ್ಲ = ಚಲಹಿಡಿದು ಹೋರಾಡುವ ಶೂರ.

ಛ

ಛಲದಂಕಮಲ್ಲ = ಛಲ ಹಿಡಿದು ಹೋರಾಡುವ ಶೂರ.

ಜ

ಜಗ್ಗಲಿಲ್ಲ = ವಶವಾಗಲಿಲ್ಲ, ಬಗ್ಗಲಿಲ್ಲ.
ಜೊಂಡು = ದಟ್ಟವಾದ ಮೀಸೆಗಳು.

ತ

ತಕ್ಕಿನ ವಿಕ್ರಮಾರ್ಜುನ=(ತಕ್ಕು=ದೊಡ್ಡ ಬಹಳ ಶೂರನಾದ ಅರ್ಜುನ.)
ತನಿವೀರರಸ = ಪರಿಪಕ್ವವಾದ ವೀರರಸ.
ತರವಾರ = ಕತ್ತಿ, ಖಡ್ಗ.
ತಳಿಯಮುರಿ = ಸುತ್ತುಗಟ್ಟನ್ನು ಮುರಿ, ಬೇಲಿಯನ್ನು ಮುರಿ.
ತಳ್ತಿರಿದು = ತಳ್ತು + ಇರಿದು = ತಿಕ್ಕಿ ಇರಿದು
ತಲೆಹರಿಗೆ = ತಲೆಗಳನ್ನು ಸಂರಕ್ಷಿಸುವ ಢಾಲು.
ತಾಗಿ ತಡೆವರನ್ನು = ಹೊಂದಿಕೊಂಡು ಅಡ್ಡಗಟ್ಟುವವರನ್ನು.
ತುಡುಕಿರಿದು = ತುಡುಕಿ + ಇರಿದು. ತುಡುಕು = ಗಟ್ಟಿಯಾಗಿ ಹಿಡಿ.
ತುತ್ತಿ = ನುಂಗಿ (ತುತ್ತು = ತುತ್ತುಮಾಡು, ನುಂಗು).
ತುಯಿದು = ಎಳೆದು (ತುಯಿ = ಎಳೆ)
ತುಳಿಲಾಳು = ಶೂರರು, ಬಂಟರು (ತುಳಿಲ್ = ಶೂರ)
ತೂಳ್ದು = ಬೆನ್ನಟ್ಟಿ (ತೂಳ್ = ಬೆನ್ನಟ್ಟು).

ತೆನೆ (ಕೋಟೆಯ) = ತುದಿ, ಪ್ರಾಕಾರಾಗ್ರ.
ತೊತ್ತಳದುಳಿ = ನುಗ್ಗುನುಗ್ಗಾವಂತೆ, ತುಳಿ.
ತೊವಲು = ತೊಗಲು, ಚರ್ಮ.
ತೋರ್ಕೆವೆತ್ತ = ತೋರಿಕೆಯನ್ನು ಪಡೆದ.
ತೋಳ್ತೀನು / ತೋಳ್ತಿಂಡಿ } = ಸಾಹಸವನ್ನು ತೋರಿಸುವ ಇಚ್ಛೆ ಆತುರತೆ.
ತೋಳ್ಬಲ್ಪು = ತೋಳಿನ ಸಾಮರ್ಥ್ಯ
ತೋಳ್ವೊಯ್ಯು = ತೋಳಿನಿಂದ ಹೊಯ್ಯು.

ದ

ದಿಗ್ಭಿತ್ತಿ = ದಿಕ್ಕುಗಳೆಂಬ ಗೋಡೆಗಳು.
ದುರಗಲಿತನ = ಶೂರತನ, ಧುರದಲ್ಲಿಯ ಶೂರತನ.
ದೋರ್ಬಲ = ತೋಳಿನ ಸಾಮರ್ಥ್ಯ.
ದೋರ್ವಿಕ್ರಮಾಡಂಬರ = ತೋಳಿನ ಸಾಮರ್ಥ್ಯದ ಆಡಂಬರ, ತೋರಿಕೆ.

ನ

ನನ್ನಿಯ = ಪ್ರೀತಿಯ.
ನಿಕೇತನ = ಮನೆ.
ನಿಸಿತಖಡ್ಗ = ಹದನವಾದ ಖಡ್ಗ.
ನಿಕ್ಷುಣ್ಣವಾಗಿ = ಸ್ಪಷ್ಟವಾಗಿ.
ನೆಗಳ್ತೆ = ಪ್ರಸಿದ್ಧಿ, ಕೀರ್ತಿ.
ನೇರ್ಪಡಿಸಿ = ಚೆನ್ನಾಗಿ ಸರಿಪಡಿಸಿ.

ಪ

ಪ್ಡಲ್ವಡಿಸಿ = ಚದರಿಸಿ, ಮುರಿದು.
ಪಡೆಗೊಂಡು = ಸೈನ್ಯವನ್ನು ತೆಗೆದುಕೊಂಡು.
ಪಡೆವಳ = ಸೇನಾಪತಿ.
ಪರ್ಯಾಣ = ಕುದುರೆಯ ಥಡಿ, ಜೀನು.

ಪ

ಪಾರುಪತ್ಯಮಾಡು = ದಂಡಿಸು.
ಪೆರಗಿಕ್ಕಿ = ಹಿಂದಕ್ಕೆಸರಿಸಿ (ಪೆರಗು = ಹಿಂಭಾಗ).
ಪೇಚಿನಲ್ಲಿ = ಗಂಡಾಂತರದಲ್ಲಿ.
ಪೇಸೇಳಿಕೊಂದು = (ಪೇಸು = ಹೇಸಿಗೆ) ಹೇಸಿಗೆ ಏಳುವಂತೆ ಕೊಂದು.
ಪೊಂಗು = ಧೈರ್ಯ.
ಪೊನ್ನತೊಡರು = ಒಂದು ತರದ ಬಂಗಾರದ ಆಭರಣ.
ಪೊಗಳ್ತೆ = ಹೊಗಳಿಕೆ.

ಬ

ಬಲ್ಪು = ಶೌರ್ಯ.
ಬಲ್ಗರುಳು = ದೊಡ್ಡಕರಳು.
ಬಲ್ಬಂಟರು = ಹಿರಿದಾದ ಶೂರರು.
ಬವರೆ = ಕಾಳಗ.
ಬಳಸು = ಸುತ್ತುಗಟ್ಟು.
ಬಾರಿಗೆ = ಹೊಡೆತಕ್ಕೆ, ಸರತಿಗೆ,
ಬಿಣ್ಪು = ಗೌರವ.
ಬಿತ್ತರದಿಂದ = ವಿಸ್ತಾರದಿಂದ.
ಬೀರ = ವೀರ್ಯ.
ಬೆಂಗೊಡದ = ಬೆನ್ನುಕೊಡದ.
ಬೇಗುದಿಗೊಳ್ಳು = ದುಃಖಪಡು.
ಬೇಹಿನವರು, ಬೇಹುಗಾರರು = ಗುಪ್ತಚಾರರು.
ಬೊಬ್ಬಿರಿ = ಆರ್ಭಟಿಸು.

ಭ

ಭುಜಬಲಾವಷ್ಟಂಬ = ಭುಜಬಲದ ಆಶ್ರಯ
ಭೋಗಪಟ್ಟಿ = ಇನಾಮು.

ಮ

ಮದವಾರಣ = ಮದೋನ್ಮತ್ತವಾದ ಆನೆ.
ಮದ್ದಾಳು = ಮತ್ತರಾದ ಆಳುಗಳು.
ಮನ್ನೆಯರು = ಮುಖ್ಯಸ್ಥರು, ಮಾನ್ಯರು.
ಮಲೆತುನಿಂತ = ಸೊಕ್ಕಿಗೆ ಬಂದ, ಎರಿಕುಳಿತ.
ಮಲೆಯಾಳು = ಗುಡ್ಡಗಾಡಜನರು.
ಮುಸಗಿ = ತಿಕ್ಕಿ, ಮುಸೆದು.
ಮುಸೆವೆತ್ತ = ದಹನವಾದ.
ಮಾರ್ಪಡೆ-ಭೀಮ = ಇದಿರಾದ ಸೈನ್ಯಕ್ಕೆ ಭೀಮನಂತಿರುವವ.
ಮಾರ್ಮಲೆವ = ಸೊಕ್ಕಿ, ಇದಿರಾಗಿ ನಿಂತ.
ಮಿಕ = ಕಾಡು ಹಂದಿ.
ಮುಂಚೂಳಿಯ ಕಾಳಗ = ಎಲ್ಲಕ್ಕೂ ಮುಂದೆ ಹೋದ ಚೂಣಿಯ (ಸೈನಿಕರ) ಕಾಳಗ.
ಮುಡಿಪಾಗಿಡು = ವಿಶಿಷ್ಟ ಕಾರ್ಯಕ್ಕೋಸ್ಕರ ತೆಗೆದಿಡು.
ಮುನ್ನೀರು = ಸಮುದ್ರ.
ಮುಂಬಿಟ್ಟು = ಮುಂದಕ್ಕೆ ಸಾಗಿಹೋಗಿ.
ಮೆಳೆ = ದಟ್ಟವಾದ ಬಿದುರುಗಳ ಗುಂಪು.
ಮೇರುವೆ = ಎತ್ತರವಾದ ಸ್ಥಳ, ಮೇಡು,
ಮೇಲಂಕವಣಿ = (ಅಂಕವಣಿ = ಎದೆಗೆ ಕಟ್ಟಿಕೊಳ್ಳುವ ಥಾಲು.)
ಮೊನೆಮುರಿದು = ಸಾಮರ್ಥ್ಯವನ್ನು ಕುಂದಿಸಿ (ಮೊನೆ=ಸಾಮರ್ಥ್ಯ)
ಮೊನೆಗಾರರು = ಶೂರರು (ಮೊನೆ=ಕಾಳಗ).
ಮೋಹರ = ಕಾಳಗ.

ರ

ರಟ್ಟಘರಟ್ಟ = ರಟ್ಟ ಅರಸರಿಗೆ ಬೀಸುಕಲ್ಲಿನಂತಿರುವ.
ರಾವಿ = ಹೊಂಚು ಹಾಕಿಕೊಂಡು ತಪ್ಪಿಸಿಕೊಳ್ಳುವುದಕ್ಕೆ ನೆಲಕ್ಕೆ ಹೊಂದಿ.
ರೊಪ್ಪೆಹಾಕಿಕೊಂಡು = ಕುರಿಗಳನ್ನು ಒಂದೆಡೆಗೆ ಕಟ್ಟಿಕೊಂಡು.

ಲ

ಲಾಲಾಜಲಪ್ರವಾಹ=ಕುದುರೆಯ ಬಾಯಿಂದಹೊರಟ ಜೊಲ್ಲಿನ ಪ್ರವಾಹ

ವ

ವಾರಾಸಿಪರ್ಯಂತ = ಸಮುದ್ರ ಪರ್ಯಂತ.
ವಾಹಿನಿ = ಸೈನ್ಯ.
ವಿಕ್ರಮವೈಭವ = ಶೂರತನದ ಸೊಬಗು.
ವಿಕ್ರಾಂತ = ಶೂರತನ.
ವಿಜಿಗೀಷುವೃತ್ತಿ = ಜಯಿಸುವ ಇಚ್ಛೆ.
ವೀರಾಡಂಬರ = ಶೌರ್ಯವನ್ನು ತೋರಿಸುವುದು.
ವೈರಿಕುಲ ಕಾಲದಂಡ = ವೈರಿಕುಲಕ್ಕೆ ಯಮನಂತೆ.

ಸ

ಸಲೆಸಂದು = ಚೆನ್ನಾಗಿ ಹೊಂದಿಕೊಂಡು.
ಸಾರಸ್ವತ = ಸಾಹಿತ್ಯ.
ಸಾಲಮೋಹರ = (ಮೋಹರ = ಸಂಗ್ರಾಮ) ಕಾಳಗದ ಸಾಲು.
ಸಾಹಣಿ = ಕುದುರೆ ಏರುವುದರಲ್ಲಿ ಧುರೀಣ.
ಸಿಲುಬೆ = ಶೂಲ.
ಸೀಕರಿಯಾಗಿ = ಸುಟ್ಟು ಬೂದಿಯಾಗಿ.
ಸುತ್ಥಣಿಯರು = ಕಾಲುದಳದವರು-
ಸುರಿಗೆಕಾರ = ಕತ್ತಿಗಳನ್ನು ಹಿಡಿದವರು.
ಸುರುಟು = ಮುದುಡಿಕೊಂಡು.
ಸೂಕರಾನೀಕ = ಕಾಡು ಹಂದಿಗಳ ಸಮೂಹ.
ಸೆಣಿಸು = ಕೋಪಗೊಳ್ಳು.
ಸೌಸವ = ಕಂಪು, ವಾಸನೆ, ಗಂಧ.

ಹ

ಹಿಂಚಿಸಿ = ಹಿಂದಕ್ಕೆ ಹಾಕಿ.

ಶುದ್ಧೀಕರಣ

(ಅ) ಸಹಜವಾಗಿ ಗೊತ್ತಾಗುವ ಮುದ್ರಣದ ಮತ್ತು ಕೈತಪ್ಪಿನ ದೋಷಗಳು.

ಪುಸ್ತಕ ಪ್ರವೇಶ

ಪುಟ	ಸಾಲು	ಶುದ್ಧ
೨	೭	ಓದಲಿಕ್ಕೆ
,,	೮	ಕಾಲಕ್ಕೆ
೪	೫	ಪರಿಪಕ್ವದಶೆಗೆ
೩	೪	ಮಿಕ್ಕ ಕಡೆಗೆಲ್ಲಿಯೂ

ಮೂಲ ಪುಸ್ತಕ

ಪುಟ	ಸಾಲು	ಶುದ್ಧ
೨	೧೨	ಪಠನ
೩	೩	ಚಾಣಕ್ಯ
೩	೪	ನಿರ್ಮೂಲ
,,	೭	ಮದಾಂಧ
೪	೧೫	ಜರ್ಜರಿತನನ್ನಾಗಿ
೫	೩	ಆಕಸ್ಮಿಕವಾಗಿ
,,	೨೪	ಆಜ್ಞಾಪಿಸಿದನು
೭	೬	ಹುಟ್ಟುತ್ತದೆ
೯	೮	ಅರಸರನ್ನೂ
,,	೯	ಸುಕುಮಾರತೆಯಲ್ಲಿಯೇ
,,	೧೪	ಆತನಿಗೆ
,,	೧೯	ಅರಸನಾದೊಡನೆ
,,	೨೧	ವಿರುದ್ಧವಾಗಿ
೧೧	೧೯	ತೀಕ್ಷ್ಣವಾದ
೧೨	೩	ಕೊಂಡೊಡನೆಯೆ
,,	೪	ಮೇಲೆ
೧೩	೬	ಪಾತಾಳಕ್ಕೊತ್ತಿ
,,	೧೮	ಕೆನ್ನಾಲಗೆ
,,	೨೦	ಹರ್ಷವರ್ಧನನ
೧೪	೭	ಕಟ್ಟಕಡೆಯ
,,	೧೫	ನೆರವುಗೊಡುವ
೧೫	೮	'ಆತನಿಗೆ' ಹೆಚ್ಚಿಗೆ ಬಿದ್ದಿದೆ]
೧೭	೧೫	ಕುತ್ತುಗಳು
೧೮	೯	ಬೇಯ್ಯುತ್ತದೆ
೧೯	೫	ಬೆನ್ನುಗಟ್ಟಿ
,,	೯	ಕಕ್ಕುಲಾತಿ
೨೦	೧೯	ಸ್ವಾರ್ಥಿಯೆಂದು
೨೧	೫	ಅರ್ಹನಾರೆಂಬುದನ್ನು
,,	೧೮	ಅಂತವರೊಡನೆ
,,	,,	ಆ ದೇಶವನ್ನು
,,	೨೨	ಉಳಿಸಿಕೊಂಡನಲ್ಲದೆ
೨೩	೫	ಪ್ರಾರಂಭಕ್ಕೂ
೨೬	೫	ಹುರಿದುಂಬಿಸಿಗೊಂಡು

೮

ಪುಟ	ಸಾಲು	ಶುದ್ಧ	ಪುಟ	ಸಾಲು	ಶುದ್ಧ
೨೬	೧೧	ಕಲಿಮಾರ್ತಂಡ	,,	೧೯	ಕಡುಗಲಿ
,,	೧೩	ಕಟ್ಟಾಣತಿ	,,	೨೨	ಇದಿರಾಂತು
,,	೨೩	ಅನಂತರ	೩೮	೧	ಬಸಿರೊಳಗೆ
೨೭	೧೩	ಖಡ್ಗಾಘಾತ	,,	೭	ಅವಿತುಕೊಂಡು
,,	,,	ಬಣವೆ	,,	೧೪	ಹೊಡೆತ
,,	೧೯	ಮೊರೆಹೊಕ್ಕು	೩೯	೧೭	ಕಪ್ಪಕಾಣಿಕೆ
,,	೨೩	ಮಳಖೇಡಕ್ಕೆ	,,	೧೮	ದೇಶವನ್ನು
೨೮	೧	ಇಷ್ಟುಹೊತ್ತಿಗೆ	೪೧	೧೨	ವಾಙ್ಮಯ ಸ್ಥಿತಿ
೨೯	೮	ಪುರುಷ	,,	೧೩	ದೊರೆಗಳು
,,	೨೦	ಆದರೆ	,,	೧೬	ಅವರ
೩೦	೧	ಶ್ರೀಃ ಪ್ರತಿವಸತಿ	೪೨	೭	ಇಕ್ಕಟ್ಟಿನ
೩೧	೫	ಕೈಗೊಟ್ಟರೆ	೪೩	೩	ಪುನಃ
,,	೧೨	ಬಿಟ್ಟುಕೊಂಡಿರುವಾಗ	೪೪	೧೮	ತರಿದೊಟ್ಟಿ
,,	೧೩	ಆಕಸ್ಮಿಕವಾಗಿ	೪೫	೧೦	ತೈಲಪನು
,,	,,	ಸುದ್ಧಿ	,,	೨೪	ಛಬ್ಬಿ
,,	೧೮	ಧ್ರುವ ಗೋವಿಂದ	,,	,,	ತೈಲಪನು
೩೨	೪	ಸೈಗೊಟ್ಟನು	೪೭	೧	ಭದ್ರಕ
,,	೧೨	ಗೋವಿಂದನ ವಶಕ್ಕೆಪೂರಾ	,,	೩	ಕ್ರಾಕಲಿಕ
,,	೧೪	ಫಲದ್ರೂಪ	,,	೫	ಕುಂಭ
೩೩	೪	ಆದರ ಬುದ್ಧಿ	,,	೮	ಘೂರ್ಜರ
೩೪	೧೧	ತೋರಿಸುವ	೪೮	೭	ತುಂಬಿದ್ದರೂ
೩೫	೩	ಬಾದಾಮಿಯ ಚಾಳುಕ್ಯ	,,	೧೧	ಕಟ್ಟಿಸುತ್ತಾರೆ
೩೭	೨	ಒಂದೇ ಮೈಯಲ್ಲಿ	೪೯	೧೩	ಚದರಿದವು
,,	೧೨	ಚೋಳರ....ರಾಷ್ಟ್ರ	,,	೨೧	ಧೈರ್ಯೋದ್ದಾಮ
		[ಕೂಟರ	,,	೨೪	ಅಸುವನ್ನು
,,	೧೬	ಅಕ್ಷೋಹಿಣದ	೫೦	೯	ಸ್ತಂಭ

ಪುಟ	ಸಾಲು	ಶುದ್ಧ
೫೦	೯	ರಾಷ್ಟ್ರಕೂಟ
,,	೧೯	ಚೋಳರ
೫೧	೧೨	ಮೌಕ್ತಿಕ
೫೨	೧೧	ಮೊಳಗಿದರು
,,	೧೩	ಅಕ್ಕಾದೇವಿಯೂ
೫೪	೧೧	ಮೊರೆಹೊಕ್ಕು
೫೫	೭	ಅಂತಹರಲ್ಲಿ
,,	೧೭	ಶಾಂತಿಯಿಂದ
೫೬	೨೫	ತೀಕ್ಷ್ಣ
೫೭	೧೨	ನವಿಗಳ ನಡುವಿನ ಬೆಣ್ಣೆಯಂಥ]
,,	೧೭	ಪೆರ್ಮಾಡಿ
,,	೨೧	ಕೇರಳ ಧರಿಣೀಶ
,,	೨೨	ಕೊಲ್ಲಿಪಾಕಿಗೆ
,,	೨೬	ಸುಟ್ಟುದರ
೫೮	೧೦	ಝುಟಿತಿ
೫೯	೨	ವರೆಗೆ
೬೦	೧೧	ಮೊರೆಹೋಗದ
೬೨	೨೦	ಹೆಗಲುಗೊಟ್ಟು
,,	೨೬	ಭೂಭೃದ್ವರ್ಗ
,,	,,	ಧರಿಣೀಶ
,,	೨೭	ಶ್ರೀಗೆ ಅದನ್ನು
೬೫	೨೪	ಒಬ್ಬರನ್ನೊಬ್ಬರು
,,	೨೫	ತೆಕ್ಕೆ
೬೮	೨೦	ಎಲ್ಲಿಯೂ
೬೮	೨೩	ಸಂಭವಿಸಬಹುದೆಂದು
೬೮	,,	ಎರಗಿದ ಎಡಬಲದ
೭೧	೧೪	ವಿಶೇಷವೇನೆಂದರೆ
,,	೨೩	ಅಗಳತೆಗಳಾಗಿದ್ದವು
೭೨	೧೪	ಅಚ್ಚುಗಿ
೭೩	೪	ಸ್ಥಿತಿ
೭೪	೫	ಮಾಂಡಲಿಕ
,,	೭	ತನ್ನಗೋಸ್ಕರ
,,	೧೬	ಆಳತೊಡಗಿದನು
,,	೧೮	ವಿಶೇಷ ಸಂಗತಿ
,,	೨೦	ಚಕ್ರವರ್ತಿಗಳೆಂದೆನ್ನಿಸಿಕೊಳ್ಳು]
,,	೨೩	ಗ್ರಸ್ತವಾಗಿ
೭೫	೧೩	ಪ್ರಾಬಲ್ಯಕ್ಕೆ
೭೬	೧೪	ವಿಷ್ಣುವರ್ಧನನು
,,	೧೯	ವಿಧ್ವಂಸನ
೭೭	೪	ಗೆದೆಯುತ್ತಿರುವಾಗ
,,	೨೪	ಜಿಗಿಯಿತು
೭೮	೨	ಪುರಿಗೆರೆ
,,	೬	ಸೊಸೆಯೂರು ಅಥವಾ ಶಶಕಪುರದಲ್ಲಿ ದಹನ ಮಾಡಲ್ಪಟ್ಟಿತು
,,	೯	ಕರ್ನಾಟಕದ
೭೯	೫	ಎಲ್ಲರಲ್ಲಿಯೂ ಶ್ರೇಷ್ಠನಾದ]

ಪುಟ	ಸಾಲು	ಶುದ್ಧಿ	ಪುಟ	ಸಾಲು	ಶುದ್ಧಿ
೭೯	೮	ರಾಜ್ಯಕ್ರಾಂತಿ	೮೭	೭	'ಇದರಲ್ಲಿ' ಲೋಪ
,,	೧೩	ಅಣ್ಣಿಗೇರಿ			ಮಾಡಬೇಕು]
೮೦	೨೩	ದೊಡ್ಡ	,,	೧೧	ಕಾದಿ
೮೧	೧೦	ಪರಾಕ್ರಮಿಯು	,,	೧೨	ಬಲ್ಲಾಳು
,,	೧೧	'ಆತನೊಡನೆ' ಓದ	೮೮	೭	ವೀರಬಲ್ಲಾಳ
		ಬೇಡಿರಿ]	೮೯	೯	ವೀರಬಲ್ಲಾಳನ ವಿಶ್ವಾ
,,	೧೩	ಪೆರ್ಮಾಡಿ			ಸಕ್ಕೆ ಪಾತ್ರನಾದ
,,	೨೩	"ಆದರೆ" ಓದಬೇಡಿರಿ	,,	೧೭	ಇಂತಹ ಈ ಗರುಡರು
೮೨	೮	ಹಿಡಿದುಕೊಂಡುದರಿಂದ	೯೧	೬	ದಕ್ಷಿಣದಲ್ಲಿ ಪ್ರವೇಶಿಸಿ
,,	೨೦	ಎದುರಿಸಿದನು	೯೧	೧೯	ಆ ಕುದುರೆಯನ್ನೇರು
೮೩	೫	ಇಸ್ವಿಯ			ವುದು]
,,	೮	ಧಾರಣ	೯೨	೧೨	ಸಾವಿರ
,,	೨೦	ನಿಜಭುಜಪ್ರತಾಪದಿಂದ	,,	೧೬	ಆನೆಗಳು
,,	೨೩	ಅದನ್ನು ಮಸೆದನು	೯೩	೧೧	ಉರವಣೆಯಿಂದ ಕಾದಿ
೮೪	೯	ಉಪಯೋಗಿಸಿ	೯೪	೬	ದೇಶಕ್ಕೆ ಬಂದು
,,	೧೫	ಅವರು	,,	೯	ಕರ್ತವ್ಯ
,,	೧೯	ಬುದ್ಧ	೯೫	೫	ಅಂಗುಷ್ಠ
೮೫	೧೯	ಮಾರ್ಕ್ವಿಸ ಇಟೋ ಎಂ	,,	೨೪	ಅವಳು ಗಂಡನಮುಂದೆ
		ಬ....ಮಂತ್ರಿಯು ಇದ	೯೬	೧	ಆತನನ್ನು ಪಾರು ಮಾ
		ಕ್ಕೆ ಬದಲಾಗಿ ನೋಗಿ			ಡಿಕೊಂಡು]
		ಎಂಬ .... ದಂಡನಾಯ	,,	೪	ಮಂತ್ರಿಯು
		ಕನು ಎಂದು ಓದ	,,	೧೫	ಒಬ್ಬ ಬಂಟನು
		ಬೇಕು	೯೮	೨೫	ಬಾಹ-ಉದ್ದೀನನ
೮೬	,,		೧೦೦	೫	ತಿರುಹಿದ
೮೭	೩	"ಗರುಡರು" ಎಂಬು	೧೦೨	೨	ಹಾವಳಿಯ ಮೂಲಕ
		ದೊಂದು]	,,	೯	(ಓಡಿಸಿ)ದವು

ಪುಟ	ಸಾಲು	ಶುದ್ಧಿ	ಪುಟ	ಸಾಲು	ಶುದ್ಧಿ
೧೦೨	೧೮	ಆದರೆ	೧೧೧	೧೮	ಹುದುಗಿಕೊಂಡು
೧೦೩	೧೯	ಅಟ್ಟಿಕೊಟ್ಟನು	೧೧೨	೫	ಒರಂಗಲ್ಲದ
೧೦೪	೪	ಭುಜಾವಷ್ಟಂಭ	,,	೮	,,
,,	೧೩	ವರ್ಣಿಸಲಸದಳವು	,,	೧೧	,,
,,	೧೪	ರಣಕ್ರಂದನದ	,,	೧೬	,,
,,	೨೩	ಓಡಿಹೋಗಲಾರಂಭಿಸಿತು]	೧೧೩	೧೬	ಗಿಡುಗನಂತೆ
			,,	೧೭	ಕೈಯ್ಯಲ್ಲಿ
,,	,,	ಆಕಸ್ಮಿಕವಾಗಿ	,,	೨೦	ತಲೆಗೊಟ್ಟು
೧೦೫	೩	ತಿಂಗಳವರೆಗೆ	,,	೨೧-೨೨	ಇಬ್ಬರು ಚಕ್ರವರ್ತಿಗಳು ಗಂಡಾಂತರದೊಳಗೆ ಸಿಕ್ಕುವುದುಅವರಿಬ್ಬರೂ
೧೦೬	೯	ಬಿಟ್ಟುಕೊಡೆನೆಂದು			
,,	೨೪	ಆಟೋಪಕ್ಕೆ			
,,	೨೬	ಒಂಬತ್ತು	,,	೨೫	ಒರಂಗಲ್ಲ
೧೦೭	೧೩-೧೪	“ಈ ನೃಪೇಂದ್ರನ ಅರಮನೆಯಲ್ಲಿ” ಎಂಬುದು ೧೬ನೆಯ ಸಾಲಿನಲ್ಲಿ “ಅನವರತವಾಗಿ ಹರಿಯುತ್ತಿತ್ತು” ಎಂಬುದರ ಹಿಂದೆ ಇರತಕ್ಕದ್ದು	೧೧೪	೧	,,
			,,	೧೦	ತನ್ನ ಸೈನಿಕರಿಗೆ
			,,	೨೪	ಕೊಲೆಗಡಕ
			೧೧೭	೧೯	ಗರಡಿಯ ಸಾಧನ
			೧೧೮	೫	ಹಣ್ಣು ಮಾಡಿದುದು
			೧೧೯	೮	ಕೃಷ್ಣರಾಜನಿಗೆ ಹಸ್ತಗತವಾಯಿತು]
,,	೧೬	ಬಿದರ ಮೆಳೆ	೧೨೧	೫	ಬಡೆಯ
,,	೧೯	ಧಾರಿಣಿ	,,	೨೫	ಸೈನ್ಯವನ್ನು
೧೦೯	೧೦	ನೆಲೆಗೊಂಡಿತ್ತು	,,	೨೬	ತೂಳ್ದಿ
೧೧೦	೧೩	ನೆಲೆಗೊಂಡಿತ್ತು	೧೨೨	೧೦	ಕಾದಿ
೧೧೧	೩	ಒರಂಗಲ್ಲ	,,	೧೬	ಸುಲ್ತಾನನನ್ನು
,,	[illegible]	ಮುರಿಬಡೆದು	೧೨೩	೨	ಇಷ್ಟೇ ಅಲ್ಲ
,,	೧೫	ತುತ್ತಾಗತಕ್ಕವನೇ.	೧೨೫	೫	ಉಬ್ಬಿದವರಾಗಿ

ಪುಟ	ಸಾಲು	ಶುದ್ಧ
೧೨೫	೧೮	ತ್ವೇಷವು
೧೨೬	೧೬	ಕಡೆದುಕೊಂಡು
,,	೧೯	ಒಡೆದಿತ್ತು
೧೨೮	೬-೭	ತೆಗೆದುಕೊಂಡುದರಿಂದ
,,	೮	ಕೊಲ್ಲಲ್ಪಟ್ಟುದರಿಂದ
೧೩೦	೧೮	ಎದುರಿಸುವ
,,	೨೧	ಕಂಬಗಳ
,,	,,	ಒಗೆಯುವದಕ್ಕೆ
೧೩೧	೨	ಅಟ್ಟಿ
,,	೩	ಅರಸನಿಗೆ
೧೩೨	೬	ಕಂಡು
೧೩೨	೧೦	ಬಿಕ್ಕಟ್ಟಿನ
೧೩೩	೧೦	ವಿರೂಪಾಕ್ಷೇಶ್ವರನನ್ನು
,,	೧೨	ಪೂಜಾರಿಗಳಾದ
,,	೧೬	ಬಿಳಿಚೋಡಿನ
,,	೧೭	ಪೂಜಾರಿಗಳು
೧೩೪	೩	ಬಿಳಿಚೋಡಿನ
೧೩೬	೧೨	ಮಲಗಿ ನಿದ್ದೆ
,,	೧೨	ನಿಟ್ಟಿರುಳಲ್ಲಿ
,,	೧೩	ಅರಸುಗುದುರೆ
೧೩೬	೧೯	ಬಡೆದು....ಗೂಟಕ್ಕೆ
,,	೨೨	ಹಾಗೆಯೇ
೧೩೭	೨	ಮೆಟ್ಟಿ ಹಿಡಿದು
,,	೩	ಎಡಗೈಯಿಂದ
,,	೬	ಒಕ್ಕೈಲ್ಯಯ್ಯವ
,,	೯	ಬರ್ಚೆ

ಪುಟ	ಸಾಲು	ಶುದ್ಧ
೧೩೭	೧೦	ಸಾವರಿಸಿಕೊಂಡು
,,	೨೦	ಅರಸುಗುದರೆ
೧೩೮	೨-೩	ಕಲುಬುರ್ಗೆಯನ್ನು ದ್ದು ಕೊಟ್ಟನು
,,	೨೪	ಕೈಯ್ಯಳವು
೧೩೯	೧೬	ಕುಹಕಿಗಳಿಂದ
,,	೧೯	ಸೆರೆಯಲ್ಲಿಟ್ಟರು
೧೪೧	೧-೨	ತಡೆಯಬೇಕೆಂದು
,,	೨೨	ಟೀಪುವನ್ನು
,,	೨೫	ದಾಳಿ ಮಾಡಿದನು
೧೪೨	೩	ಕಂದಕವೆಲ್ಲ
,,	೮	ಯೋಜಿಸುವ
,,	೧೧	ಕೈಯ್ಯೊನಿಕೆಯಿಂದ
,,	೨೬	ಊಟಕ್ಕೆ
,,	೨೭	ಹೋಗಿದ್ದನು
೧೪೩	೨	ಯಾರೋ ಮೇಲಕ್ಕೇ[illegible]
,,	೯	ಬಾಯಿಗೆ
,,	೧೨	ಒನಿಕೆ
೧೪೪	೩	Epigraphia
	೪	,, ,,

ಶಬ್ದಕೋಶ.

ಪುಟ	ಸಾಲು	ಶುದ್ಧ
೧	೧೧	ಅವಷ್ಟಂಭ
೨	೧೦	ಅಡ್ನಾಡಿ
,,	೧೨	ಒಕ್ಕೈಲ್ಯಯ್ಯವ
೩	೧೮	ಕೊಳುಗಳ

ಪುಟ	ಸಾಲು	ಶುದ್ಧ	ಪುಟ	ಸಾಲು	ಶುದ್ಧ
೩	೧೯	ಕಪ್ಪ	೬	೧೭	ವೀರ
,,	೨೩	ತೋರಿಸುವವರಿಗೆ	,,	೨೪	ಭುಜಬಲಾವಷ್ಟಂಭ
		ನೃತ್ಯ]	೭	೩	ಮತ್ತನಾದ ಆಳು
೪	೪	ಬೀಸುವ ಕಲ್ಲು	,,	೭	ಹದನವಾದ
,,	೧೩	(ತಕ್ಕು=ದೊಡ್ಡ)	,,	೧೧	(ಸೈನ್ಯದ)
,,	೨೦	ತುಡುಕು=ತಡವು	,,	೧೭	(ಅಂಕ+ಮಣಿ) ಕುದು
,,	೨೩	(ತುಳಿಲ್=ಶೌರ್ಯ)			ರೆಯ ಥಡಿಗೆ ಹಚ್ಚಿದ
,,	,,	ಶೂರ, ಬಂಟ			(ಹಿತ್ತಾಳಿಯ ಮತ್ತು
,,	೨೪	ತೂಳ್ದಿ (ತೂಳ್ದು=			ಬೆಳ್ಳಿಯ) ವಿವಿಧ ಹೂವು
		ಬೆನ್ನಟ್ಟು)			ಗಳು ಅಥವಾ ಬಿಲ್ಲೆ
೫	೧೭	ನಿಶಿತಖಡ್ಗ			ಗಳು
೬	೧೧	ಹಿರಿದಾದ			

(ಆ) ರೂಢಿಯಲ್ಲಿದ್ದು ವ್ಯಾಕರಣವಿರುದ್ಧವಾದ ಮತ್ತು ಅನ್ಯ ಕಾರಣಗಳ ಮೂಲಕ ಚರ್ಚೆಗೆ ಅರ್ಹವಾದ ಶಬ್ದಗಳು.

ಪುಟ	ಸಾಲು	ಶುದ್ಧ	ಪುಟ	ಸಾಲು	ಶುದ್ಧ
೨	೨೪	ದುಶ್ಚಟ	೩೧	೧೪	ಕೆಂಡವ್ವಾದನು
೩	೧೮	ಕ್ಷತ್ರಿಯರ ಮಾತ್ರವೇ	೩೨	೧೨	ಪೂರಾ
೮	೨೫-೨೬	ಚಿಕ್ಕ ಬಾಲಕನು	,,	೨೫	ಕಲಾಪ್ರೇಮಿಯು,
೯	೧೨	ಚಿಗಪ್ಪ			ಕವಿಯು
೧೮	೯	ಖಡ್ಗಾವಲೋಕವೆಂಬ	೩೫	೧	ವೃಕ್ಷವು ಮುದುಕವಾಗಿ
೧೯	೫	ಬೆನ್ನುಕಟ್ಟಿ	೩೬	೧೩	ಭೂತರಾಯವೆಂಬ
೨೧	೫	ಕೇವಲ ತನ್ನ ಗೌರವವ			ಕಲ್ಪವೃಕ್ಷ
		ನ್ನಷ್ಟೇ]	೩೭	೨೧	ಸಗರತ್ರಿನೇತ್ರ
,,	[illegible]	ರಾಜ್ಯಲೋಭಗ್ರಸ್ತ	೩೯	೫	ಕಲಚೂರ್ಯರಿಗೆ ನೆರ
		ನಲ್ಲವೆಂದು			ವಾದುದು
೩೦	೧೨	ಇರಿಸಿಡಲು	,,	೨೨	ಅಥಟ

ಪುಟ	ಸಾಲು	ಶುದ್ಧ	ಪುಟ	ಸಾಲು	ಶುದ್ಧ
೪೨	೩	ಸಣ್ಣಾಗಿ ಸುಡುತ್ತಿತ್ತು	೧೧೦	೧೪	ಗೊಂದಲವು
೪೪	೨೪	ಯುದ್ಧಯಾತ್ರೆಗೆ			
೫೭	೧೬	ಚೋಳ ಅರಸನು	೧೧೧	೨೨	ವೀರರನ್ನು ಉ
೫೮	೧೪	ಪರಾಕ್ರಮವನ್ನು			
		ತೋರಿಸಿದನು	೧೧೩	೧	ಆಶೆಪಟ್ಟು
,,	೧೭	ಸಮ್ಮುಖವನ್ನು ಸಾರ್ದನು	,,	೧೫	ಸ್ವಲ್ಪ ಜನರನ
೬೨	೨೦	ತಾನೊಬ್ಬನೇ	೧೧೪	೩	ಇತಿಹಾಸದಿಂದ
		ಹೆಗಲುಕೊಟ್ಟು	,,	೧೩	ಬೆಳಿಸಗೊಡದೆ
೮೧	೧೧೩	ಅನ್ಯಮಲಿಪರ	,,	೧೫-೧೬	ಕೆಟ್ಟ ಬುದ್ಧಿ
೮೪	೫	ವಿಶೇಷ ಜನರು	೧೧೫	೨೭	ಸಿಲ್ಕಿರುವ
೮೮	೪	ಬಲ್ಲಾಳನೇ ತನ್ನ ಗುರು	೧೧೬	೮	ಸುರಿಗೆ ಕಾಳಗ
		ಎಂದು ಬಗೆದಿದ್ದನು	,,	೧೧	ಕೋಟೆಯ ಒಳ
,,	೧೯	ತರವಾರಿಯ ಬಾರಿಗೆ			ನು
೯೦	೬	ಪರಮಾಯುಷ್ಯವೆಲ್ಲವೂ	೧೧೮	,,	ಹೆಸರು ಕೇಳಿ
		ತನ್ನ ಆಳ್ವನಿಗಾಯ್ತೆ	೧೧೯	೧೫	ಶ್ರಮಪಟ್ಟಿತು
		ನಿಸಿದನು	೧೨೨	೧೧	ಇಡೀ ಸೈನ್ಯ
		ನೆನಪು ತಯಿತು	,,	೨೪	ಎದೆ ಕಳೆದುಕೊ
೯೭	೨೬	ಉತ್ತರ ಕೊಟ್ಟನು	೧೨೫	೧೭	ಸಾಮಾನ್ಯ ಜನ
೧೦೧	೧೮	ಸ್ಥಾಪಿಸಿದ್ದು	೧೨೬	೧೯	ಮೊಳಕೆ
೧೦೨	೨೧	ಸ್ಥಾಪಿಸಿದುದರಿಂದ	೧೨೮	೫	ಭಲ್ಲೆ...ಶಸ್ತ್ರಪ್ರ
		ಒಬ್ಬನು ಮಾತ್ರವೇ			ಇ
		ಪಾರಾಗಿ	೧೨೯	೨	ಕೋಟೆಯನ್ನು
,,	೧೭	~~ಸ್ವತಃ ತಾನೇ ಬಂದು~~			
,,	೨೬	ಆನೆಕಾಳಗ	೧೩೦	೧	ಪಂಥಪಾಡು
೧೦೫	೧೦	ತೊಂದರೆ ಕೊಟ್ಟರು	೧೩೬	೭	ಬೀಡಿನೊಳಗ
,,	೧೦	ಹಿಂದೂಗಳು	೧೩೯	೧೦	ಕ್ಷುದ್ರಗಳನ್ನು